# 2:16-23

# ಶಿರಸ್ಸಿಗೆ ಗಟ್ಟಿಯಾಗಿ ಹೊಂದಿಕೊಂಡಿರುವದು

ಧರ್ಮಶಾಸ್ತ್ರದ ಆಜ್ಞಾರೂಪದ ಪತ್ರವು ಅಳಿಸಿ ಹಾಕಲ್ಪಟ್ಟಿದೆ ಮತ್ತು ಸಕಲ ದುಷ್ಟ ಶಕ್ತಿಗಳು ಸೋಲಿಸಲ್ಪಟ್ಟಿವೆ ಎಂಬುದನ್ನು ತೋರಿಸಿ ಕೊಟ್ಟ ಮೇಲೆ (2:8 ಮತ್ತು 10bರ ಮೇಲಿನ ಚರ್ಚೆಯನ್ನು ನೋಡಿರಿ), ಪೌಲನು ಒಂದು ತಾರ್ಕಿಕವಾದ ಮುಕ್ತಾಯವನ್ನು ಮಾಡುವದರೆಡೆಗೆ ಸಾಗುತ್ತಾನೆ. ಈ ವಿಧಿಗಳನ್ನು ಹಿಂಬಾಲಿಸುವದಕ್ಕೆ ನಿರ್ಬಂಧವುಳ್ಳವರೆಂಬ ಭಾವನೆಯನ್ನು ಹೊಂದಿರಬಾರದು ಅಥವಾ ಮನುಷ್ಯ ಕಲ್ಪಿತ ಧಾರ್ಮಿಕ ಸಂಪ್ರದಾಯಗಳನ್ನು ಹಿಂಬಾಲಿಸುವಂತೆ ತಮ್ಮನ್ನು ಒತ್ತಾಯಿಸುವಂತೆ ಯಾರಿಗೂ ಅವಕಾಶ ಕೊಡಬೇಡಿರಿ ಎಂದು ಹೇಳುತ್ತಾನೆ.

## ಧರ್ಮಶಾಸ್ತ್ರದ ಬದಲಾಗಿ ಕ್ರಿಸ್ತನನ್ನು ಅನುಸರಿಸುವದು (2:16, 17)

**16ಹೀಗಿರುವದರಿಂದ ತಿಂದು ಕುಡಿಯುವ ವಿಷಯದಲ್ಲಿಯೂ ಹಬ್ಬ ಅಮಾವಾಸ್ಯೆ ಸಬ್ಬತು ಎಂಬಿವುಗಳ ವಿಷಯಯದಲ್ಲಿಯೂ ನಿಮ್ಮನ್ನು ದೋಷಿಗಳೆಂದು ಯಾರೂ ಎಣಿಸಬಾರದು.**
**17ಇವು ಮುಂದೆ ಬರಬೇಕಾಗಿದ್ದ ಕಾರ್ಯಗಳ ಛಾಯೆಯಾಗಿವೆ. ಇವುಗಳ ನಿಜಸ್ವರೂಪವು ಕ್ರಿಸ್ತನೇ.**

### "ಹೀಗಿರುವದರಿಂದ ತಿಂದು ಕುಡಿಯುವ ವಿಷಯದಲ್ಲಿಯೂ ಹಬ್ಬ ಅಮಾವಾಸ್ಯೆ ಸಬ್ಬತು ಎಂಬಿವುಗಳ ವಿಷಯಯದಲ್ಲಿಯೂ ನಿಮ್ಮನ್ನು ದೋಷಿಗಳೆಂದು ಯಾರೂ ಎಣಿಸಬಾರದು" (2:16)

ಆರಂಭಿಕ ಪದ **ಹೀಗಿರುವದರಿಂದ** (οὖν, *oun*) ಎಂಬ ಪದವು ಈ ಹೇಳಿಕೆಯನ್ನು ಮುಂಚಿನ ಹೇಳಿಕೆಗಳಿಗೆ ಒಂದು ಮುಕ್ತಾಯವೆಂಬದಾಗಿ ಗುರುತಿಸುತ್ತದೆ. ಕೊಲೊಸ್ಸೆಯವರು ದೇವರನ್ನು ಹೇಗೆ ಮೆಚ್ಚಿಸಬೇಕೆಂಬುದನ್ನು ಕಲಿತುಕೊಳ್ಳಲು ಯೇಸುವನ್ನು ದೃಷ್ಟಿಸಬೇಕು, ಇತತರು ಏನೇ ತೀರ್ಪು ಮಾಡಿದಾಗ್ಯೂ ಯೇಸುವಿನ ಬೋಧನೆಗಳನ್ನು ಅಭ್ಯಾಸ ಮಾಡಿಕೊಳ್ಳಬೇಕು ಎಂದು ಪೌಲನು ಹೇಳಿದನು.

ಬಹುಶಃ ಕೊಲೊಸ್ಸೆಯಲ್ಲಿದ್ದ ಕೆಲವರು, ವಿಶೇಷವಾಗಿ ಯೆಹೂದಿ ಹಿನ್ನಲೆಯಿಂದ

ಬಂದಿದ್ದವರು ಯೋಚಿಸಿದ್ದೇನೆಂದರೆ ಕ್ರೈಸ್ತರು ಧರ್ಮಶಾಸ್ತ್ರ ಮತ್ತು ಸಮುದಾಯದ ಇತರ ವಿಧಿಗಳನ್ನು ತೊರೆದುಬಿಡುವ ಮೂಲಕ ಬಹಳ ದೂರಕ್ಕೆ ಹೋಗಿದ್ದಾರೆ ಎಂಬದೆ. ಕೊಲೊಸ್ಸೆಯವರು ಇನ್ನು ಮೇಲೆ ಇವುಗಳ ನಿರ್ಬಂಧಕ್ಕೊಳಪಟ್ಟಿರಲಿಲ್ಲ, ಯಾಕೆಂದರೆ ಅವರು ಕೇವಲ ಯೇಸುವಿಗೆ ಮಾತ್ರವೇ ಅಧೀನರಾಗಿದ್ದರು. ಅವರು ಧರ್ಮಶಾಸ್ತ್ರವನ್ನು ಅಥವಾ ಅವರ ಸ್ವಕಲ್ಪಿತವಾದ ನಿಯಮಗಳಿಗೆ ವಿಧೇಯವಾಗದ್ದಕ್ಕೆ ಅವರನ್ನು ದೋಷಿಗಳೆಂದು ತೀರ್ಪುಮಾಡಲು ಬಯಸಿದ ಸಮುದಾಯಕ್ಕೆ ಬದಲಾಗಿ ಅವರು ಆತನಿಗೆ ಅಧೀನರಾಗಿರಬೇಕಾಗಿತ್ತು.

ಕೊಲೊಸ್ಸೆಯವರು ಏಕೆ ಯೇಸುವನ್ನು ಮಾತ್ರವೇ ಹಿಂಬಾಲಿಸಬೇಕಾಗಿತ್ತೆಂಬದಕ್ಕೆ 16ನೇ ವಚನದ ತನಕದ ಮುಂಚಿನ ಹೇಳಿಕೆಗಳಲ್ಲಿ ಸಮೃದ್ಧವಾದ ಕಾರಣಗಳಿರುತ್ತವೆ:

ಆತನಲ್ಲಿಯೇ ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳೆಲ್ಲಾ ಅಡಗಿರುತ್ತವೆ (2:3).
ಆತನಲ್ಲಿ ದೇವರ ಸರ್ವಸಂಪೂರ್ಣತೆಯು ವಾಸಿಸುತ್ತದೆ (2:9)
ಕೊಲೊಸ್ಸೆಯವರು ಆತನಲ್ಲಿ ಪರಿಪೂರ್ಣರಾಗಿದ್ದರು (2:10).
ಆತನು ಎಲ್ಲಾ ದೊರೆತನಗಳು ಮತ್ತು ಅಧಿಕಾರಗಳ ಮೇಲೆ ಶಿರಸ್ಸು ಆಗಿದ್ದಾನೆ (2:10).
ಅವರು ದೀಕ್ಷಾಸ್ನಾನದ ಮೂಲಕವಾಗಿ ಆತನ ಸುನ್ನತಿಯನ್ನು ಹೊಂದಿದ್ದರು (2:11, 12).
ದೀಕ್ಷಾಸ್ನಾನದಲ್ಲಿ ಅವರು ಬದುಕಿಸಲ್ಪಟ್ಟಿದ್ದರು ಮತ್ತು ಅವರ ಅಪರಾಧಗಳೆಲ್ಲಾ ಕ್ಷಮಿಸಲ್ಪಟ್ಟಿದ್ದವು (2:13).
ಆತನು ಆಜ್ಞಾರೂಪವಾಗಿದ್ದ ಪತ್ರವನ್ನು ಕೆಡಿಸಿ, ಅವುಗಳನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು (2:14).
ಆತನು ದೊರೆತನಗಳನ್ನೂ ಅಧಿಕಾರಗಳನ್ನೂ ನಿರಾಯುಧರನ್ನಾಗಿ ಮಾಡಿದನು (2:15).

ವಿಸ್ತಾರವಾದ ಸನ್ನಿವೇಶದ ಬದಲಾಗಿ, ತಕ್ಷಣದ ಸನ್ನಿವೇಶವು, ಕೊಲೊಸ್ಸೆಯವರು ನೇಮನಿಷ್ಠೆಗಳ ನಿಯಂತ್ರಣದಲ್ಲಾಗಲಿ ಅಥವಾ ಕೆಟ್ಟತನದ ದೊರೆತನಲ್ಲಿದಿರುವ ಅಧಿಕಾರಿಗಳ ಅಧೀನತೆಯಲ್ಲಾಗಲಿ ಇರಬಾರದೆಂಬದಾಗಿ ಪೌಲನು ಅಂತಿಮ ನಿರ್ಣಯಕ್ಕೆ ಬರುವದಕ್ಕೆ ತಳಹದಿಯಾಗಿರಬಲ್ಲದು. 2:14ರಲ್ಲಿ ಆತನು ಧರ್ಮಶಾಸ್ತ್ರವು ಇಲ್ಲದಂತಾಗ ಮಾಡಲ್ಪಟ್ಟಿದೆ ಎಂದು ಕಲಿಸಿದನು ಮತ್ತು 2:15ರಲ್ಲಿ ಎಲ್ಲಾ ವಿರೋಧಿ ಶಕ್ತಿಗಳು ಸೋಲಿಸಲ್ಪಟ್ಟಿವೆಯೆಂದು ಆತನು ಹೇಳಿದನು. ಯೇಸುವು ತನ್ನ ಕಾರ್ಯದ ಮೂಲಕವಾಗಿ ಅವರ ಶಕ್ತಿಗೆ ಅವಸಾನವನ್ನುಂಟು ಮಾಡಿ ಅಧಿಕಾರದ ಮೇಲೆ ಜಯವನ್ನು ಒದಗಿಸಿದ್ದರಿಂದ, ಕೊಲೊಸ್ಸೆಯವರು ಯೇಸುವಿನಿಂದ ಗಳಿಸಲ್ಪಟ್ಟ ಸ್ವಾತಂತ್ರ್ಯದಲ್ಲಿ ಆನಂದಿಸಬಹುದಿತ್ತು.

ಹಿಂದಿನ ವಾದಗಳನ್ನು ಮಂಡಿಸುವವನಾಗಿ, ಪೌಲನು ಕೊಲೊಸ್ಸೆವರಿಗೆ ಮಾನವ ಅಧಿಕಾರದಿಂದ – ಧರ್ಮಶಾಸ್ತ್ರವಾಗಿರಬಹುದು ಅಥವಾ ಮನುಷ್ಯ ನಿರ್ಮಿತ ನೇಮನಿಷ್ಠೆಗಳಾಗಿರಬಹುದು – ಅವರ ಮೇಲೆ ಹೇರಲ್ಪಟ್ಟ ನಿಮಯಗಳ ನಿರ್ಬಂಧಕ್ಕೊಳಗಾಗಬಾರದು ಎಂಬುದಕ್ಕೆ ಇನ್ನಷ್ಟು ಕಾರಣಗಳನ್ನು ಕೊಡುತ್ತಾನೆ.

ಕೊಲೊಸ್ಸೆಯವರು ಕೆಲವೊಂದು ಆಹಾರಗಳಿಗೆ ಮತ್ತು ಕುಡಿಯುವದಕ್ಕೆ

ಸೀಮಿತರಾಗಿರಬಾರದಾಗಿತ್ತು. ಎಲ್ಲಾ ಆಹಾರಗಳು ಶುದ್ಧ ಎಂಬದಾಗಿ ಸ್ವತಃ ಯೇಸು ಕಲಿಸಿದನು (ಮಾರ್ಕ 7:19). ಅಲ್ಲದೆ ಈ ಕ್ರೈಸ್ತರು ಯೆಹೂದಿ ಹಬ್ಬಗಳನ್ನು ಆಚರಿಸುವ ಅಗತ್ಯವೂ ಇರಲಿಲ್ಲ, ಯೆಹೂದಿ ಅಮಾವಾಸ್ಯೆ ಆಚರಣೆಗಳನ್ನು ಪಾಲನೆ ಮಾಡಬೇಕೆಂದು ಅಪೇಕ್ಷಿಸಲ್ಪಟ್ಟಿರಲಿಲ್ಲ ಅಥವಾ ಸಬ್ಬತ್ ದಿನದಲ್ಲಿ ವಿಶ್ರಮಿಸಿಕೊಳ್ಳುವಂತೆ ಆಜ್ಞಾಪಿಸಲ್ಪಟ್ಟಿರಲೂ ಇಲ್ಲ. ಅವರು ಈ ವಿಧಿಗಳಿಂದ ವಿಮುಕ್ತರಾಗಿದ್ದರು ಮತ್ತು ಅವರು ಇಂಥ **ವಿಷಯದಲ್ಲಿಯೂ** [ಅವರನ್ನು] **ದೋಷಿಗಳೆಂದು** ತೀರ್ಪುಮಾಡುವಂತೆ ಯಾರಿಗೂ ಅವಕಾಶ ಕೊಡಬಾರದಿತ್ತು. "ದೋಷಿಗಳೆಂದು ಎಣಿಸು" κρίνω (*krinō*) ಎಂಬ ಕ್ರಿಯಾಪದಕ್ಕೆ, ಈ ವಾಕ್ಯಭಾಗ ಮತ್ತು ಇದೇ ರೀತಿಯ ವಾಕ್ಯಭಾಗಗಳಲ್ಲಿ ಪೌಲನಿಂದ ಬಳಸಲ್ಪಟ್ಟಿರುವ ಪ್ರಕಾರ, ಬಹುಶಃ "ವಿರುದ್ಧವಾಗಿ ತೀರ್ಪುಮಾಡು, ದೋಷಿಯೆಂದು ನಿರ್ಣಯಿಸು" ಎಂಬ ಭಾವಾನುವಾದವನ್ನು ಕೊಡತಕ್ಕದ್ದಾಗಿದೆ. ಆತನು ವ್ಯತ್ಯಾಸವಾದ ಆಹಾರವನ್ನು ತಿನ್ನುವದಕ್ಕೆ ಕ್ರೈಸ್ತರಿಗಿರುವ ಸ್ವಾತಂತ್ರ್ಯವನ್ನು ಹೀಗೆ ಹೇಳುವ ಮೂಲಕ ಘೋಷಿಸಿದನು, "ಆದಕಾರಣ ಇನ್ನು ಮೇಲೆ ಒಬ್ಬರ ವಿಷಯದಲ್ಲೊಬ್ಬರು ತೀರ್ಪುಮಾಡದೆ ಇರೋಣ" (ರೋಮಾ 14:13; ನೋಡಿರಿ ರೋಮಾ 14:3, 4; 1 ಕೊರಿಂಥ 10:29). ಅಲ್ಲದೆ ಆತನು ಆಹಾರದ ವಿಷಯದಲ್ಲಿ "ಯಾವದನ್ನೂ ನಿಷಿದ್ಧವೆಂದು ಹೇಳತಕ್ಕದ್ದಲ್ಲ" ಎಂಬದಾಗಿ ಸಹ ಬರೆದನು (1 ತಿಮೊಥೆ 4:3-5).

ಯೇಸುವಿನ ಅಧಿಕಾರ ಮತ್ತು ಕಾರ್ಯದ ಮೂಲಕವಾಗಿ, ಕೊಲೊಸ್ಸೆಯಲ್ಲಿರುವ ಸಹೋದರರು ಈ ಆಚಾರಗಳನ್ನು ಕೈಕೊಂಡು ನಡೆಯಬೇಕೆಂಬ ನಿರ್ಬಂಧದಿಂದ ಸ್ವತಂತ್ರಗೊಳಿಸಲ್ಪಟ್ಟಿದ್ದರು. ಈ ಕಾರಣಕ್ಕಾಗಿ, ತಮ್ಮ ಮೇಲೆ ಕಠೋರವಾಗಿ ತೀರ್ಪು ಮಾಡುವಂತೆ, ಅವರನ್ನು ದೋಷಿಯೆಂದು ಎಣಿಸುವಂತೆ, ಅಥವಾ ಅವರು ಕೆಲವೊಂದು ಪದ್ಧತಿಗಳನ್ನು ಅನುಸರಿಸಿಲ್ಲವೆಂಬುದಕ್ಕಾಗಿ ಲೆಕ್ಕ ಕೊಡುವಂತೆ ಅವರನ್ನು ಕೇಳುವಂತಾಗಲಿ ಯಾರಿಗೂ ಅವಕಾಶ ಕೊಡಬಾರದಾಗಿತ್ತು. ಅವುಗಳನ್ನು ಆಚರಿಸಬೇಕೋ ಬೇಡವೋ ಎಂದು ಆಯ್ಕೆ ಮಾಡಿಕೊಳ್ಳುವ ಹಕ್ಕು ಅವರಿಗೆ ಮಾತ್ರವೇ ಇತ್ತು. ಈ ಯಾವದೇ ವಿಷಯಗಳಲ್ಲಿ ಅವರು ತಮ್ಮ ಸ್ವಾತಂತ್ರ್ಯವನ್ನು ಚಲಾಯಿಸುವದರಿಂದ ಇತರರಿಗೆ ನೋವುಂಟು ಮಾಡುವದಾಗಿದ್ದರೆ ಅಥವಾ ಒಂದು ತ್ಯಜಿಸಲ್ಪಟ್ಟ ಸಂಪ್ರದಾಯವನ್ನು ಕೈಕೊಂಡು ನಡೆಯುವಂತೆ ಜೊತೆ ಕ್ರೈಸ್ತರಿಗೆ ಕಾರಣವಾಗುವದಾದರೆ, ಅವರು ತಮ್ಮ ಸ್ವಾತಂತ್ರ್ಯವನ್ನು ತ್ಯಾಗ ಮಾಡಿ ಅದನ್ನು ಬಿಟ್ಟು ಬಿಡಬೇಕಾಗಿತ್ತು (ರೋಮಾ 14:13-15, 19-21; 1 ಕೊರಿಂಥ 8:8-13). ಇನ್ನೊಂದು ಕಡೆಯಲ್ಲಿ, ಹೊಸ ಒಡಂಬಡಿಕೆಯಲ್ಲಿ ಸೇರ್ಪಡೆಗೊಳಿಸಿರದ ಆಚಾರಗಳನ್ನು ಕೈಕೊಂಡು ನಡೆಯುವ ಹಾಗೆ ಒತ್ತಾಯ ಪಡಿಸುವ ಮೂಲಕ ಕ್ರಿಸ್ತನಲ್ಲಿ ಅವರಿಗಿರುವ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಂತೆ ಅವರು ಯಾರಿಗೂ ಅವಕಾಶ ಕೊಡಬಾರದಿತ್ತು.

ತಮ್ಮ ಮೇಲೆ ಧರ್ಮಶಾಸ್ತ್ರದ ವಿಧಿಗಳನ್ನು ಮತ್ತು ಕ್ರಿಸ್ತನಿಂದ ಬರದಂಥ ಇತರ ಆಚಾರಗಳನ್ನು ಹೇರುವದಕ್ಕೆ ಪ್ರಯತ್ನಿಸುವವರನ್ನು ಹೇಗೆ ಎದುರಿಸತಕ್ಕದ್ದೆಂಬದನ್ನು ಈ ಕ್ರೈಸ್ತರಿಗೆ ಪೌಲನು ತೋರಿಸಿ ಕೊಡುತ್ತಾನೆ. ತೀತನಿಗೆ ಸುನ್ನತಿ ಮಾಡಿಸಬೇಕೆಂದು ಒತ್ತಾಯಿಸುತ್ತಾ ಕ್ರೈಸ್ತರನ್ನು ಯೆಹೂದೀಕರಣಗೊಳಿಸಬೇಕೆಂಬ ಬೇಡಿಕೆಗಳಿಗೆ ಆತನು ಅಧೀನನಾಗಲು ನಿರಾಕರಿಸಿದನು (ಗಲಾತ್ಯ 2:3-5). ಕೊಲೊಸ್ಸೆಯಲ್ಲಿರುವ ಯೆಹೂದಿ

ಕ್ರೈಸ್ತರು ಧರ್ಮಶಾಸ್ತ್ರದ ಪದ್ಧತಿಗಳನ್ನು ಆಚರಿಸುವ ಅಥವಾ ಆಚರಿಸದಿರುವ ಹಕ್ಕು ಹೊಂದಿದ್ದರು, ಆದರೆ ಅವರ ಮೇಲೆ ಯೆಹೂದಿ ಆಚಾರಗಳನ್ನು ಅಥವಾ ಮನುಷ್ಯ ಸಂಪ್ರದಾಯಗಳನ್ನು ಹೇರುವದಕ್ಕೆ ಯಾರಿಗೂ ಹಕ್ಕು ಇರಲಿಲ್ಲ. ಮನುಷ್ಯ ಕಲ್ಪಿತ ನೇಮನಿಷ್ಠೆಗಳನ್ನು ಕೈಕೊಂಡು ನಡೆಯುವಂತೆ ಕ್ರೈಸ್ತರನ್ನು ಕಡ್ಡಾಯಗೊಳಿಸಿದರೆ, ಅವು ಇನ್ನು ಮೇಲೆ ಹಾನಿಕರವಲ್ಲದ ನಿಷಿದ್ಧ ಸಂಗತಿಗಳಾಗಿರುವದಿಲ್ಲ ಆದರೆ ಹಾನಿಕಾರಕ ನಿರಂಕುಶವಾದಿಗಳಿಂದ ಹೇರಲ್ಪಟ್ಟ ವಿಧಿಗಳಾಗುವವು.

ಈ ಸಾಂಸ್ಕೃತಿಕ ವಿಧಿಗಳನ್ನು ಕೈಕೊಂಡು ನಡೆಯುವಂತೆ ಕೊಲೊಸ್ಸೆಯವರನ್ನು ನಿರ್ಬಂಧ ಅಥವಾ ಒತ್ತಾಯಗೊಳಿಸುವದಾದರೆ, ಯೇಸು ಅವರನ್ನು ಯಾವ ಶಕ್ತಿಗಳಿಂದ ಬಿಡಿಸಿದನೋ ಅದೇ ಶಕ್ತಿಗಳ ಸ್ವಾಧೀನಕ್ಕೆ ಅವರು ತಮ್ಮನ್ನು ಒಪ್ಪಿಸಿಕೊಂಡಂತಾಗುವದು. ಆತನು ದುಷ್ಟ ಶಕ್ತಿಗಳ ಮೇಲೆ ಸಾಧಿಸಿದ ಜಯದ ಪ್ರಯೋಜನಗಳನ್ನು ಪಡೆದುಕೊಳ್ಳುವದಕ್ಕೆ ವಿಫಲರಾಗುವರು.

ಪೌಲನು ಪಟ್ಟಿ ಮಾಡಿರುವ ವಿಧಿಗಳು ಕೇವಲ ತಾತ್ಕಲಿಕ ಸಂಗತಿಗಳಿಂದ ಕೂಡಿದ್ದವು. ಇವುಗಳು ನಿಜಸ್ವರೂಪವಾಗಿರದೆ ಕೇವಲ ಛಾಯೆ ಆಗಿದ್ದವು. ಅವುಗಳು ಪರಿಣಾಮವಿಲ್ಲದ ಛಾಯೆಗಳಾಗಿ ಉಳಿದರೆ, ನಿಜಸ್ವರೂಪವು ಕ್ರೈಸ್ತರಿಗೆ ಹಿಂಬಾಲಿಸಲು ನಿಜವಾದ ತಿರುಳು ಆಗಲಿತ್ತು.

ಕೊಲೊಸ್ಸೆಯವರು ತಿನ್ನುವದಕ್ಕೆ, ಕುಡಿಯುವದಕ್ಕೆ, ಹಬ್ಬ, ಅಮಾವಾಸ್ಯೆ, ಮತ್ತು ಸಬ್ಬತು ದಿನಗಳನ್ನು ಆಚರಿಸುವದಕ್ಕೆ ಸಾಧ್ಯವಿಲ್ಲ ಎಂದು ಪೌಲನು ಹೇಳಲಿಲ್ಲ. ಬದಲಾಗಿ, ಸಹೋದರರು ಈ ಆಚಾರಗಳನ್ನು ಕೈಕೊಂಡು ನಡೆಯಬೇಕಾದ ನಿರ್ಬಂಧದಲ್ಲಿ ಇಲ್ಲ ಮತ್ತು ಅವುಗಳನ್ನು ಕೈಕೊಂಡು ನಡೆಯುವ ಅಥವಾ ನಡೆಯದಿರುವ ವಿಷಯದಲ್ಲಿ ಅವರನ್ನು ದೋಷಿಗಳೆಂದು ಎಣಿಸುವಂತೆ ಯಾರಿಗೂ ಅವಕಾಶಕೊಡಬಾರದೆಂದು ಆತನು ಹೇಳುತ್ತಿದ್ದಾನೆ. ಇವುಗಳು ರಕ್ಷಣೆಗೆ ಸಂಬಂಧಿಸಿದ ವಿಷಯಗಳಾಗಿರಲಿಲ್ಲವಾದ್ದರಿಂದ, ಕೊಲೊಸ್ಸೆಯವರು ತಮ್ಮ ವಿವೇಚನೆಗೆ ತಕ್ಕಂತೆ ನಡೆದುಕೊಳ್ಳಬಹುದಿತ್ತು. ಎಲ್ಲಿಯ ವರೆಗೆ ಅವರ ಆಚಾರಗಳು ದೃಢವಿಲ್ಲದ ಸಹೋದರನೊಬ್ಬನನ್ನು ಕೆಡಿಸುವದಿಲ್ಲವೋ ಅಲ್ಲಿಯ ವರೆಗೆ, ಈ ವಿಷಯಗಳಲ್ಲಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವು ಅವರಿಗಿತ್ತು (ರೋಮಾ 14:1-21; 15:1-3; 1 ಕೊರಿಂಥ 8:8-13; 10:23-33; ನೋಡಿರಿ ಗಲಾತ್ಯ 4:10). ಕೊಲೊಸ್ಸೆಯವರು ಈ ನಿರ್ಬಂಧಗಳಿಗೆ ಒಳಗಾಗುವದು ಅರ್ಥಹೀನವಾಗಿರುತ್ತಿತ್ತು, ಯಾಕೆಂದರೆ ಯೇಸು ಅವುಗಳನ್ನು ಅಳಿಸಿ ಹಾಕಿದ್ದನು ಮತ್ತು ಅವುಗಳನ್ನು ಕೈಕೊಂಡು ನಡೆಯುವಂತೆ ಕಡ್ಡಾಯಗೊಳಿಸುವವರನ್ನು ಸೋಲಿಸಿದ್ದನು.

ಪೌಲನು ಉದಾಹರಣೆಗಳಾಗಿ ಈ ಆಚರಣೆಗಳನ್ನು ಬಳಸಿದನು. ಕೊಲೊಸ್ಸೆಯುವರ ಮೇಲೆ ಇತರರ ಮೇಲೆ ನಿರ್ಬಂಧಪಡಿಸಲು ಅಪೇಕ್ಷಿಸುವದಕ್ಕೆ ಸಾಧ್ಯವಿದ್ದ ಎಲ್ಲಾ ಆಚಾರಗಳನ್ನು ಆತನು ಇದರಲ್ಲಿ ಸೇರ್ಪಡೆಗೊಳಿಸಿರುವದಿಲ್ಲ. ಪೌಲನು ತಾನು ಹೇಳ ಬಯಸುವದನ್ನು ದೃಷ್ಟಾಂತ ಪಡಿಸುವದಕ್ಕಾಗಿ, ಇಸ್ರಾಯೇಲ್ಯರು ಕೈಕೊಂಡು ನಡೆಯುವ ಹಂಗಿನಲ್ಲಿದ್ದ ಅದರೆ ಕ್ರೈಸ್ತರ ಮೇಲೆ ಕೈಕೊಂಡು ನಡೆಯಬೇಕೆಂಬ ನಿರ್ಬಂಧವಿಲ್ಲದ ಐದು ಆಚಾರಗಳನ್ನು ಆತನು ಪಟ್ಟಿ ಮಾಡುತ್ತಾನೆ. ಬಹುಶಃ ಪೌಲನು ಧರ್ಮಶಾಸ್ತ್ರದ ಬಗ್ಗೆ ಮಾತಾಡುತ್ತಿದ್ದಾನೆಂಬ ಯೋಚನೆಯನ್ನು ಪುಷ್ಠೀಕರಿಸುವ ಸಂಗತಿಯೆಂದರೆ ಈ

ಆಚಾರಗಳನ್ನು ಮೂರು ಆಚಾರಗಳು – "ಹಬ್ಬ," "ಅಮಾವಾಸ್ಯೆ," ಮತ್ತು "ಸಬ್ಬತು" – LXX ನಲ್ಲಿ ಸರಿಯಾಗಿ ಇದೇ ಕ್ರಮಾನುಸಾರದಲ್ಲಿ ಹೆಸರಿಸಲ್ಪಟ್ಟಿರುತ್ತವೆ ಎಂಬ ವಾಸ್ತವಾಂಶವೇ (ಹೋಶೇಯ 2:11; ಯೆಹೆಜ್ಕೇಲ 45:17). ಸಾರಭೂತವಾಗಿ, ಇದೇ ಪಟ್ಟಿಯು ಬೇರೊಂದು ಕಡೆಯಲ್ಲಿ ಸಹ ಕಂಡು ಬರುತ್ತದೆ, ಆದರೆ ಒಂದು ವ್ಯತ್ಯಾಸವಾದ ಕ್ರಮಾನುಸಾರದಲ್ಲಿ ಇರುತ್ತದೆ (1 ಪೂರ್ವಕಾಲವೃತ್ತಾಂತ 23:31; 2 ಪೂರ್ವಕಾಲವೃತ್ತಾಂತ 2:4; 31:3). ಪೌಲನಿಂದ ತಿಳಿಸಲ್ಪಟ್ಟಿರುವ ಎಲ್ಲಾ ಐದು ಆಚಾರಗಳು ಧರ್ಮಶಾಸ್ತ್ರದಲ್ಲಿ ಸೇರ್ಪಡೆಗೊಳಿಸಲ್ಪಟ್ಟಿರುತ್ತವೆ.

16ನೇ ವಚನದಲ್ಲಿ ಪಟ್ಟಿಯಲ್ಲಿ ಎರಡು ವರ್ಗಗಳಿರುತ್ತವೆ, (1) ಶರೀರದೊಳಗೆ ಸೇವಿಸಲ್ಪಡುವಂಥದ್ದು ಮತ್ತು (2) ಆಚರಣೆ ಮಾಡುವಂಥದ್ದಕ್ಕೆ – ಯೆಹೂದಿ ವಿಶೇಷ ಹಬ್ಬಗಳು ಮತ್ತು ದಿನಗಳು – ಎಂಬುದಕ್ಕೆ ಅನ್ವಯಿಸುವಂಥದ್ದು. ದೇಹವನ್ನು ನಿಗ್ರಹಿಸಿಕೊಳ್ಳುವದು ಮತ್ತು ಪ್ರಾಪಂಚಿಕ ಆಚಾರಗಳಿಂದ ದೂರವಿರುವದು, ಇವೆರಡು ಕ್ರಿಸ್ತನ ಹಿಂಬಾಲಕರಿಗೆ ಅಗತ್ಯವಾದವುಗಳು (ರೋಮಾ 12:1-3; 1 ಕೊರಿಂಥ 6:19, 20; 2 ಕೊರಿಂಥ 7:1). ಪೌಲನು ಜಾಗರೂಕವಾದ ನೈತಿಕ ಜೀವನ ನಡಿಸುವದನ್ನು ಬೇಡವೆಂದು ಹೇಳುತ್ತಿಲ್ಲ. ಬದಲಾಗಿ, ಆವರ ಮೇಲೆ ಇತರರು ಹೇರುವದಕ್ಕೆ ಪ್ರಯತ್ನಿಸುತ್ತಿರುವಂಥ ಆಚಾರಗಳಿಂದಾಗಿ ದೇವರ ಸಂಗಡ ಅವರು ಹೊಂದಿರುವ ಸಂಬಂಧದ ಮೇಲೆ ಯಾವದೇ ಪರಿಣಾಮವುಂಟಾಗುವದಿಲ್ಲ ಎಂಬುದನ್ನು ಆತನು ಅವರಿಗೆ ತಿಳಿಯಪಡಿಸುತ್ತಿದ್ದಾನೆ.

**ತಿಂದು ಕುಡಿಯುವ ವಿಷಯದಲ್ಲಿಯೂ.** ದೇವರು ಇಸ್ರಾಯೇಲ್ಯರಿಗೆ ಆಹಾರದ ನಿಯಮಗಳನ್ನು ಕೊಟ್ಟಿದ್ದನು. ಧರ್ಮಶಾಸ್ತ್ರದಲ್ಲಿ, ದೇವರು ಇಸ್ರಾಯೇಲ್ಯರಿಗೆ ಯಾವಾವದನ್ನು ತಿನ್ನಬಹುದು ಮತ್ತು ತಿನ್ನಬಾರದು ಎಂಬದನ್ನು ನಿರ್ದಿಷ್ಟವಾಗಿ ತಿಳಿಸಿದನು (ಯಾಜಕಕಾಂಡ 11:1-47; ಧರ್ಮೋಪದೇಶಕಾಂಡ 14:3-21). ಯೇಸು ಈ ಆಹಾರದ ನಿಯಮಗಳನ್ನು ರದ್ದುಗೊಳಿಸಿದನು: "ಹೊರಗಿನಿಂದ ಮನುಷ್ಯನೊಳಗೆ ಹೋಗುವಂಥದು ಅವನ ಹೃದಯದೊಳಕ್ಕೆ ಸೇರದೆ ಹೊಟ್ಟೆಯಲ್ಲಿ ಸೇರಿ ಬಹಿರ್ದೇಸಕ್ಕೆ ಹೋಗುವದರಿಂದ ಅವನನ್ನು ಹೊಲೆಮಾಡಲಾರದೆಂದು ನಿಮಗೆ ತಿಳಿಯಲಿಲ್ಲವೋ . . . ಹೀಗೆ ಆತನು ಎಲ್ಲಾ ಆಹಾರವೂ ಶುದ್ಧ ಎಂದು ಘೋಷಿಸಿದನು" (ಮಾರ್ಕ 7:18, 19; ನೋಡಿರಿ ಅಪೊಸ್ತಲರ ಕೃತ್ಯಗಳು 10:10-16).

ಕಡೇ ದಿನಗಳಲ್ಲಿ ಜನರು ಕ್ರಿಸ್ತನಂಬಿಕೆಯನ್ನು ಬಿಟ್ಟು ತೊಲಗಿ ಹೋಗುವದರ ಫಲಿತವಾಗಿ, ಅವರು ಇಂಥಿಂಥದ್ದನ್ನು ತಿನ್ನಬಾರದು ಎಂಬದಾಗಿ, ಕ್ರೈಸ್ತರು ಕೈಕೊಂಡು ನಡೆಯುವದಕ್ಕೆ ನಿರ್ಬಂಧವುಳ್ಳವರಾಗಿರದಂಥದ್ದನ್ನು ಪ್ರತಿಪಾದಿಸುವವರಾಗುವರು ಎಂದು ಪೌಲನು ಎಚ್ಚರಿಸಿದನು (1 ತಿಮೊಥೆ 4:1-4). ರೋಮಾಪುರದವರಿಗೆ ಬರೆದ ತನ್ನ ಸಂದೇಶದಲ್ಲಿ, ಪೌಲನು ತಾವು ತಿನ್ನಲು ಬಯಸುವ ಆಹಾರದ ವಿಷಯದಲ್ಲಿ ಕ್ರೈಸ್ತರಿಗೆ ಸ್ವಾತಂತ್ರ್ಯವು ಕೊಡಲ್ಪಟ್ಟಿದೆ ಎಂದು ಬರೆದನು (ರೋಮಾ 14:5, 6, 13-15, 20, 21). ಸ್ಪಷ್ಟವಾಗಿರುವ ಪ್ರಕಾರ, ತಾವು ಏನು ತಿನ್ನುತ್ತಾರೆ ಅಥವಾ ಕುಡಿಯುತ್ತಾರೆಂಬ ವಿಷಯದಲ್ಲಿ ಕ್ರೈಸ್ತರು ಮಿತಿಗೊಳಪಟ್ಟವರಲ್ಲ. "ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ" (ರೋಮಾ 14:17).

ಕುಡಿಯುವ ವಿಷಯವಾಗಿ ಧರ್ಮಶಾಸ್ತ್ರದಲ್ಲಿ ಸ್ವಲ್ಪವಾಗಿ ಹೇಳಲ್ಪಟ್ಟಿದೆ. ಯಾಜಕರು

ಧಾರ್ಮಿಕ ಸೇವೆಗಳಲ್ಲಿ ತೊಡಗಿರುವ ವೇಳೆ ದ್ರಾಕ್ಷಾರಸವನ್ನಾಗಲಿ ಅಥವಾ ಮದ್ಯವನ್ನಾಗಲಿ ಕುಡಿಯಬಾರದಾಗಿತ್ತು (ಯಾಜಕಕಾಂಡ 10:9). ನಾಜೀರರ ಹರಕೆಯನ್ನು ಮಾಡಿಕೊಳ್ಳುವವರು ಮದ್ಯವನ್ನಾಗಲಿ, ಹುಳಿರಸವನ್ನಾಗಲಿ, ಮತ್ತು ದ್ರಾಕ್ಷೆಗಳಿಂದ ತಯಾರಿಸಿದ ಯಾವದೆ ಪಾನವನ್ನಾಗಲಿ ಕುಡಿಯಬಾರದಿತ್ತು (ಅರಣ್ಯಕಾಂಡ 6:3). ಮನೋಹನ ಹೆಂಡತಿಯು ಸಂಸೋನನೆಂಬ ಒಬ್ಬ ಮಗನನ್ನು ಹಡೆಯುವವಳಿದ್ದ ಕಾರಣ ಮದ್ಯವನ್ನು ಸೇವಿಸಬಾರದೆಂದು ಆಕೆಗೆ ಹೇಳಲಾಯಿತು (ನ್ಯಾಯಸ್ಥಾಪಕರು 13:4, 7, 14). ಅತಿಯಾದ ಮದ್ಯಸೇವನೆಯನ್ನು ಯಾವಾಗಲೂ ಖಂಡಿಸಲಾಗಿರುತ್ತದೆ (ಜ್ಞಾನೋಕ್ತಿ 20:1; ಯೆಶಾಯ 5:11; 28:1).

**ಹಬ್ಬ.** ಧರ್ಮಶಾಸ್ತ್ರದಲ್ಲಿ ಹಲವಾರು ಕಡ್ಡಾಯವಾದ ಹಬ್ಬಗಳನ್ನು ಆಚರಿಸುವದು ಸೇರಿತ್ತು (ಧರ್ಮೋಪದೇಶಕಾಂಡ 16:16; 2 ಪೂರ್ವಕಾಲವೃತ್ತಾಂತ 8:13).

1. ಹುಳಿಯಿಲ್ಲದ ರೊಟ್ಟಿಯ ಹಬ್ಬ (ವಿಮೋಚನಕಾಂಡ 23:15; 34:18; ಯಾಜಕಕಾಂಡ 23:6), ಅದು ಪಸ್ಕಹಬ್ಬ ಎಂದು ಸಹ ಪರಿಚಿತವಿರುತ್ತದೆ (ಯಾಜಕಕಾಂಡ 23:5; ಧರ್ಮೋಪದೇಶಕಾಂಡ 16:1-6), ದೇವರು ಇಸ್ರಾಯೇಲ್ಯರನ್ನು ಐಗುಪ್ತ್ಯದ ದಾಸತ್ವದೊಳಗಿಂದ ವಿಮೋಚಿಸಿದ್ದರ ಸ್ಮರಣಾರ್ಥವಾಗಿ ಇದನ್ನು ಆಚರಿಸಬೇಕಿತ್ತು (ವಿಮೋಚನಕಾಂಡ 12:24-27). ದೇವರು ಕುಟುಂಬದಲ್ಲಿದ್ದ ಚೊಚ್ಚಲು ಮಕ್ಕಳನ್ನು ಕೊಲ್ಲಲಿಲ್ಲ ಆದರೆ ಬಾಗಲಿನ ನಿಲುವುಕಂಬಗಳಿಗೆ ರಕ್ತವನ್ನು ಹಚ್ಚಿದ್ದ ಇಸ್ರಾಯೇಲ್ಯರ ಮನೆಗಳನ್ನು ದಾಟಿ ಹೋದನೆಂಬುದನ್ನು ಅವರು ಜ್ಞಾಪಿಸಿಕೊಳ್ಳಬೇಕಿತ್ತು (ವಿಮೋಚನಕಾಂಡ 12:22, 23). ಈ ಹಬ್ಬದಲ್ಲಿ ಹುಳಿಯಿಲ್ಲದ ರೊಟ್ಟಿಯನ್ನು ತಿನ್ನುವದು ಸಹ ಸೇರಿತ್ತು (ವಿಮೋಚನಕಾಂಡ 12:14-20; 13:6-8).

2. ವಾರಗಳ ಹಬ್ಬ (ವಿಮೋಚನಕಾಂಡ 34:22; ಧರ್ಮೋಪದೇಶಕಾಂಡ 16:10), ಇದು ತೆನೆಯನ್ನು ಮೊದಲು ಕತ್ತಿರಿಸಿದ ದಿನದಿಂದ ಏಳು ವಾರಗಳಾದ ಮೇಲೆ ಆಚರಿಸಬೇಕಾಗಿದ್ದರಿಂದ ಆ ಹೆಸರಿನಿಂದ ಕರೆಯಲ್ಪಟ್ಟಿದೆ (ಧರ್ಮೋಪದೇಶಕಾಂಡ 16:9), ಅಲ್ಲದೆ ಇದು ಸುಗ್ಗಿಜಾತ್ರೆ ಅಥವಾ ಪ್ರಥಮ ಫಲಗಳು ಮತ್ತು ಫಲಸಂಗ್ರಹದ ಜಾತ್ರೆ ಎಂದು ಸಹ ಪರಿಚಿತವಿರುತ್ತದೆ (ವಿಮೋಚನಕಾಂಡ 23:16; 34:22; ಅರಣ್ಯಕಾಂಡ 28:26). ಹೊಸ ಒಡಂಬಡಿಕೆಯಲ್ಲಿ ಇದು ಪಂಚಾಶತ್ತಮ ಎಂದು ಕರೆಯಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 2:1), ಇದರರ್ಥವು "ಐವತ್ತರ ಹಬ್ಬ" ಯಾಕೆಂದರೆ ಇದನ್ನು ಪಸ್ಕದ ನಂತರದ ಐವತ್ತನೆಯ ದಿನದಂದು ಆಚರಿಸಬೇಕಾಗಿತ್ತು (ಯಾಜಕಕಾಂಡ 23:15, 16).

3. ಪರ್ಣಶಾಲೆಗಳ ಹಬ್ಬ (ಯಾಜಕಕಾಂಡ 23:34; ಎಜ್ರನು 3:4), ಇತರ ತರ್ಜುಮೆಗಳಲ್ಲಿ ಇದು ಗುಡಾರಗಳ ಹಬ್ಬವೆಂದು ಪರಿಚಿತವಿರುತ್ತದೆ (KJV; NKJV). ಇಸ್ರಾಯೇಲ್ಯರು ನಾಲ್ವತ್ತು ವರ್ಷಗಳ ಕಾಲ ಅರಣ್ಯದಲ್ಲಿ ಅಲೆದಾಡುವ ವೇಳೆ ಕೊಂಬೆಗಳಿಂದ ಕಟ್ಟಿದ ಪರ್ಣಶಾಲೆಗಳಲ್ಲಿ (ಗುಡಾರಗಳಲ್ಲಿ) ಜೀವಿಸಿದ್ದ ದಿನಗಳನ್ನು ಜ್ಞಾಪಿಸಿಕೊಳ್ಳುವದಕ್ಕಾಗಿ ಅವರು ಈ ಗುಡಾರಗಳಲ್ಲಿ ಜೀವಿಸಬೇಕಿತ್ತು. ಹಬ್ಬದ ಮೊದಲ ಹಾಗೂ ಎಂಟನೆಯ ದಿನಗಳಂದು ಯಾವ ಕೆಲಸವನ್ನೂ ಮಾಡಬಾರದಿತ್ತು (ಯಾಜಕಕಾಂಡ 23:39).

4. ಅಹಷ್ವೇರೋಷ್ ರಾಜನ ಆಳ್ವಿಕೆಯ ವೇಳೆ ಹಾಮಾನ ಕುತಂತ್ರದ ನಂತರದಲ್ಲಿ,

ಎಸ್ತೇರಳು ಯೆಹೂದ್ಯರನ್ನು ವಿನಾಶಗೊಳ್ಳುವದರಿಂದ ವಿಮೋಚಿಸಿದ ಬಳಿಕ ಪೂರೀಮ್ ಹಬ್ಬವು ಆರಂಭಗೊಂಡಿತು (ಎಸ್ತೇರಳು 9:26-28).

ಯೆಹೂದ್ಯರಿಗೆ ಆಚರಿಸಬೇಕಾದ ಇತರೆ ವಿಶೇಷ ದಿನಗಳಿದ್ದವು. ಏಳನೆಯ ತಿಂಗಳಿನ ಮೊದಲ ದಿನದಂದು, ಇಸ್ರಾಯೇಲ್ಯರು ತುತೂರಿಯನ್ನು ಊದಬೇಕಿತ್ತು ಮತ್ತು ಪ್ರಾಣಿಗಳ ಹಾಗೂ ಧಾನ್ಯಗಳ ಯಜ್ಞಗಳನ್ನು ಅರ್ಪಿಸಬೇಕಾಗಿತ್ತು (ಯಾಜಕಕಾಂಡ 23:23-25; ಅರಣ್ಯಕಾಂಡ 29:1-6). ದೋಷಪರಿಹಾರಕವಾದ ಮಹಾದಿನ (ಯಾಜಕಕಾಂಡ 16:3-34; 23:27-32) ಎಂಬುದು ಈ ದಿನ Yom Kippur ಯೊಮ್ ಕಿಪ್ಪುರ್) ಎಂದು ಕರೆಯಲ್ಪಡುತ್ತದೆ. ಯೆಹೂದಿ ಹೊಸ ವರ್ಷ, ನಂತರದಲ್ಲಿ ರೋಷ್ ಹಸನ್ನಾ ಎಂದು ಕರೆಯಲ್ಪಟ್ಟಿತು, ಇದು ಬಾಬಿಲೋನಿಯನ್ನರ ಸೆರೆಯಾಳುಗಳಾಗಿದ್ದ ವೇಳೆಯಲ್ಲಿ ಆರಂಭಗೊಂಡಿರಬಹುದಾಗಿದೆ (ಯೆಹೆಜ್ಕೇಲ 45:18; ನೋಡಿರಿ ವಿಮೋಚನಕಾಂಡ 12:2). ವರ್ಷದ ಪ್ರಥಮ ತಿಂಗಳು ನಿಸಾನ್ ಎಂದು ಕರೆಯಲ್ಪಡುತ್ತಿತ್ತು (ಎಸ್ತೇರಳು 3:7).

**ಅಮಾವಾಸ್ಯೆ**. ಇಸ್ರಾಯೇಲ್ಯರು ಚಂದ್ರನನ್ನಾಧರಿಸಿದ ಕ್ಯಾಲೆಂಡರ್ ಹೊಂದಿದ್ದರು; ಹೀಗೆ ತಿಂಗಳಿನ ಮೊದಲ ದಿನದಂದು ಅಮಾವಾಸ್ಯೆ ಇರುತ್ತಿತ್ತು,, ಅಂದು ಅವರು ದೇವರಿಗೆ ಕಾಣಿಕೆಗಳನ್ನು ಅರ್ಪಿಸಬೇಕಿತ್ತು (ಅರಣ್ಯಕಾಂಡ 10:10; 28:11). ಇದು ಅವರಿಗೆ ಅಮವಾಸ್ಯೆಯನ್ನು ಆಚರಿಸುವ ದಿನವಾಗಿತ್ತು (ಕೀರ್ತನೆ 81:3; ಯೆಶಾಯ 1:14; ಯೆಹೆಜ್ಕೇಲ 46:3; ಹೋಶೇಯ 2:11; ಆಮೋಸ 8:5; ಬಹುಶಃ 1 ಸಮುವೇಲ 20:18; 2 ಅರಸು 4:23ರಲ್ಲಿ ಸಹ).

**ಸಬ್ಬತು.** ಇಸ್ರಾಯೇಲ್ಯರು ಪ್ರತಿ ವಾರ ಏಳನೆಯ ದಿನದಂದು ವಾರದ ಸಬ್ಬತನ್ನು ಆಚರಿಸುತ್ತಿದ್ದರು, ಅದು ವಾರದ ಮೊದಲ ದಿನಕ್ಕೆ ಮುಂಚಿನ ದಿನವಾಗಿರುತ್ತದೆ (ಮತ್ತಾಯ 28:1; ಮಾರ್ಕ 16:1, 2; ಲೂಕ 23:56; 24:1; ಯೋಹಾನ 20:1). "ಸಬ್ಬತು" ಅಂದರೆ "ಮುಂದುವರೆಸದಿರು, ಕೆಲಸ ಮಾಡುವದನ್ನು ನಿಲ್ಲಿಸು" ಎಂದರ್ಥವಾಗಿರುತ್ತದೆ. ಸಬ್ಬತ್ ದಿನದಲ್ಲಿ ಯಾವ ಕೆಲಸವನ್ನೂ ಮಾಡುವದಕ್ಕೆ ಅನುಮತಿಯಿರಲಿಲ್ಲ (ವಿಮೋಚನಕಾಂಡ 20:8-10; ಧರ್ಮೋಪದೇಶಕಾಂಡ 5:12-15). ಸಬ್ಬತ್ ದೇವರ ಹಾಗೂ ಇಸ್ರಾಯೇಲ್ ಎಂದು ಹೆಸರು ಬದಲಾಯಿಸಲ್ಪಟ್ಟ (ಆದಿಕಾಂಡ 35:10) ಯಾಕೋಬನ ಸಂತತಿಯವರಾದ ಇಸ್ರಾಯೇಲ್ಯರ ನಡುವಿನ ಒಂದು ಒಡಂಬಡಿಕೆಯಾಗಿತ್ತು (ವಿಮೋಚನಕಾಂಡ 31:14-16). ದೇವರು ಈ ದಿನವನ್ನು ವಿಶೇಷ ದಿನವಾಗಿ ಪ್ರತಿಷ್ಠೆಗೊಳಿಸಿದನು, ಆ ದಿನದಲ್ಲಿ ಇಸ್ರಾಯೇಲ್ಯರು ವಿಶ್ರಮಿಸಿಕೊಂಡು ದೇವರು ಅವರನ್ನು ಐಗುಪ್ತದ ದಾಸತ್ವದೊಳಗಿಂದ ವಿಮೋಚಿಸಿದನು ಎಂಬುದನ್ನು ಜ್ಞಾಪಿಸಿಕೊಳ್ಳಬೇಕಿತ್ತು (ಧರ್ಮೋಪದೇಶಕಾಂಡ 5:12-15). ಆತನು ಸೃಷ್ಟಿಯನ್ನು ಮಾಡುವ ಸಮಯದಲ್ಲಿ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡ ಕಾರಣ ಈ ದಿನವನ್ನು ಆರಿಸಿಕೊಂಡಿದ್ದನು (ವಿಮೋಚನಕಾಂಡ 20:11).

ದೇವರು ಸಿನಾಯ್ ಪರ್ವತದಲ್ಲಿ ಸಬ್ಬತ್‌ನ್ನು ಕೊಟ್ಟಿದ್ದನು (ವಿಮೋಚನಕಾಂಡ 31:8-10). ಆ ದಿನದಲ್ಲಿ ಕೆಲಸ ಮಾಡಿದವರಿಗೆ ಮರಣ ದಂಡನೆಯನ್ನು ವಿಧಿಸಬೇಕಿತ್ತು; ಇಸ್ರಾಯೇಲ್ಯರು ಸಬ್ಬತ್ ದಿನವನ್ನು ಪರಿಶುದ್ಧವೆಂದು ಆಚರಿಸಬೇಕಾಗಿತ್ತು (ವಿಮೋಚನಕಾಂಡ 31:14). ದೇವರು ಆ ದಿನವನ್ನು ವಿಶ್ರಾಂತಿಯ ದಿನವೆಂದು ಪ್ರತ್ಯೇಕಿಸಿದನು, ಹೊರತು ಆರಾಧನೆಯ ದಿನವನ್ನಾಗಿ ಅಲ್ಲ. ಅವರು ಬಾಬಿಲೋನಿನಲ್ಲಿ

ಸೆರೆಯಾಳುಗಳಾಗಿದ್ದ ವೇಳೆಯಲ್ಲಿ, ಇಸ್ರಾಯೇಲ್ಯರು ಸಬ್ಬತ್ ದಿನದಂದು ಶಾಸ್ತ್ರಗಳನ್ನು ಓದುವದಕ್ಕಾಗಿ ಸಭಾಮಂದಿರಗಳಲ್ಲಿ ಕೂಡಿ ಬರುವದಕ್ಕೆ ಆರಂಭಿಸಿದರು. ಹಾಗಿದ್ದರೂ ಅದೊಂದು ಆರಾಧನೆಯ ದಿನವಂತೂ ಆಗಿರಲಿಲ್ಲ, ಆದರೆ ಅದು ವಿಶ್ರಾಂತಿ, ಪ್ರಾರ್ಥನೆ, ಮತ್ತು ಶಾಸ್ತ್ರಗಳ ಪಾರಾಯಣ ಮಾಡುವದರಲ್ಲಿ ಕಾಲ ಕಳೆಯುವ ದಿನವಾಗಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 15:21).

ವಾರದ ಸಬ್ಬತ್ ಮಾತ್ರವಲ್ಲದೆ, ಇಸ್ರಾಯೇಲ್ಯರು ಪ್ರತಿ ಏಳನೆಯ ವರ್ಷವನ್ನು ಸಬ್ಬತ್ ವರ್ಷವಾಗಿ ಆಚರಿಸಬೇಕೆಂದು ಆಜ್ಞಾಪಿಸಲ್ಪಟ್ಟಿದ್ದರು. ಅವರು ಸಬ್ಬತ್ ವರ್ಷದಲ್ಲಿ ತಮ್ಮ ಹೊಲಗಳಲ್ಲಿ ಕೃಷಿ ಮಾಡಬಾರದಾಗಿತ್ತು, ಆದರೆ ಹೊಲಗಳಿಗೆ ವಿಶ್ರಾಂತಿ ಕೊಡಬೇಕಿತ್ತು (ವಿಮೋಚನಕಾಂಡ 23:10, 11).

ಈ ಧರ್ಮಶಾಸ್ತ್ರವನ್ನು ಮೊಂಡುತನದಿಂದ ಉಲ್ಲಂಘನೆ ಮಾಡಿದವರನ್ನು ಕುಲದಿಂದ ಕಿತ್ತು ಹಾಕಬೇಕಿತ್ತು (ಅರಣ್ಯಕಾಂಡ 15:30, 31). ಇದರಲ್ಲಿ ಧರ್ಮಶಾಸ್ತ್ರವು ಆಹಾರದ, ಕುಡಿಯುವ, ಹಬ್ಬಗಳ, ಅಮಾವಾಶ್ಯೆ, ಮತ್ತು ಸಬ್ಬತ್‌ಗಳ ವಿಷಯದಲ್ಲಿ ಹೇಳಿರುವದನ್ನು ಅಸಡ್ಡೆ ಮಾಡುವದು ಸೇರಿತ್ತು. ಹೇಗೂ, ಧರ್ಮಶಾಸ್ತ್ರವು ಹೊಸ ಒಡಂಬಡಿಕೆಯ ಅಡಿಯಲ್ಲಿ ಜನರ ಮೇಲೆ ನಿರ್ಬಂಧವನ್ನು ಹೊಂದಿರುವದಿಲ್ಲ. ಈ ಕಾರಣಕ್ಕಾಗಿ, ಕ್ರೈಸ್ತರು ತೀರ್ಪು ಮಾಡಬಾರದಾಗಿತ್ತು (ಮತ್ತಾಯ 7:1) ಅಥವಾ ತಮ್ಮನ್ನು ತೀರ್ಪು ಮಾಡುವಂತೆ, ಧರ್ಮಶಾಸ್ತ್ರದ ವಿಧಿಗಳನ್ನು ಅವರ ಮೇಲೆ ಹೇರುವ ಮೂಲಕ ಕ್ರಿಸ್ತನಲ್ಲಿ ದೊರೆತ ಸ್ವಾತಂತ್ರ್ಯವನ್ನು ಅತಿಕ್ರಮಿಸುವದಕ್ಕೆ ಇತತರಿಗೆ ಅವಕಾಶ ಕೊಡಬಾರದಾಗಿತ್ತು.

ಸಬ್ಬತ್ ಆಚರಿಸಬೇಕೆಂದು ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರಿಗೆ ಆಜ್ಞಾಪಿಸಲ್ಪಟ್ಟಿರುವದಿಲ್ಲ. ಇದು ಮಹತ್ವಪೂರ್ಣವಾದದ್ದು, ಯಾಕೆಂದರೆ ಅನ್ಯಜನರಿಗೆ ಕೊಡಲಾಗಿದ್ದ ಅನೇಕ ಅಪ್ಪಣೆಗಳಲ್ಲಿ, ಯಾವದೂ ಸಹ ಅವರು ಸಬ್ಬತ್ ವಿಶ್ರಾಂತಿಯನ್ನು ಆಚರಿಸಬೇಕೆಂದು ಸ್ವಲ್ಪವೂ ಸುಳಿವು ಸಹ ನೀಡಿರುವದಿಲ್ಲ. ಅವರಿಗೆ ಏಳನೆಯ ದಿನದಲ್ಲಿ ಕೆಲಸವನ್ನು ಮಾಡದಿರಬೇಕೆಂಬುದು ಗೊತ್ತಿರದ ವಿಷಯವಾಗಿತ್ತಾದ್ದರಿಂದ, ಅವರು ಅದನ್ನು ಆಚರಿಸಲೇಬೇಕೆಂದಾಗಿದ್ದರೆ ಅವರಿಗೆ ಸಬ್ಬತ್ ದಿನದ ಕುರಿತು ವಿಶೇಷ ಬೋಧನೆಯ ಅಗತ್ಯವಿದ್ದಿರುತ್ತಿತ್ತು. ಮೊದಲನೆಯ ಒಡಂಬಡಿಕೆಯು ತೆಗೆದು ಹಾಕಲ್ಪಟ್ಟು ಅದರ ಸ್ಥಾನದಲ್ಲಿ ಹೊಸ ಒಡಂಬಡಿಕೆಯು ಬಂದಾಗ (ಇಬ್ರಿಯ 8:13; 10:9), ಸಬ್ಬತ್ ದಿನವನ್ನು ಆಚರಿಸಬೇಕೆಂಬ ಆಜ್ಞೆಯು ಸಹ ಅಳಿಸಿ ಹಾಕಲ್ಪಟ್ಟಿತು.

ಕೊಲೊಸ್ಸೆಯವರು ಸಬ್ಬತ್ ದಿನವನ್ನು ಒಂದು ವಿಶೇಷ ದಿನವಾಗಿ ಆಚರಿಸಕೂಡದೆಂಬುದನ್ನು 16ನೇ ವಚನವು ತೋರಿಸುತ್ತದೆ. ಅದು ಅನ್ಯಜನಾಂಗದ ಕ್ರೈಸ್ತರಿಗೆ ಯಾವದೇ ವಿಶೇಷ ಮಹತ್ವವನ್ನು ಹೊಂದಿರಲಿಲ್ಲ. ಕರ್ತನ ದಿನವಾದ ಭಾನುವಾರವು, ಕ್ರಿಸ್ತನು ಪುನರುತ್ಥಾನಗೊಂಡಂಥ ಮತ್ತು ಮರಣವನ್ನು ಜಯಿಸಿದಂಥ ದಿನವಾಗಿರುತ್ತದೆ. ಆತನು ಮರಣದ ಮೇಲೆ ಜಯ ಹೊಂದಿದ ಈ ದಿನದಲ್ಲಿಯೇ ಕ್ರೈಸ್ತರು ಆತನನ್ನು ಸ್ಮರಿಸುವದಕ್ಕಾಗಿ ಕೂಡಿ ಬರುತ್ತಾರೆ (ಅಪೊಸ್ತಲರ ಕೃತ್ಯಗಳು 20:7).

# ಧರ್ಮಶಾಸ್ತ್ರದ ವಿಧಿಗಳು ಮತ್ತು ಕ್ರೈಸ್ತತ್ವ

| ಹೇರಲ್ಪಡಬಹುದಾದ ವಿಧಿಗಳು | ಏಕೆ ಕ್ರೈಸ್ತರು ಅವುಗಳ ನಿರ್ಬಂಧಕ್ಕೊಳಪಟ್ಟಿಲ್ಲ |
|---|---|
| ತಿಂದು ಕುಡಿಯುವ, ಹಬ್ಬ ಅಥವಾ ಸಬ್ಬತ್ ದಿನದ ಕುರಿತ ವಿಧಿಗಳು (2:16). | ಇವುಗಳು ಇಲ್ಲದಂತಾಗ ಮಾಡಲ್ಪಟ್ಟಿವೆ, ಶಿಲುಬೆಗೆ ಜಡಿಯಲ್ಪಟ್ಟಿರುತ್ತವೆ, ಇವು ಮುಂಬರುವ ಆಚಾರಗಳ ಛಾಯೆಯಾಗಿದ್ದವು, ಮತ್ತು ಇವುಗಳು ಸೋಲಿಸಲ್ಪಟ್ಟ ದುಷ್ಟ ಶಕ್ತಿಗಳಿಂದ ವಿಧಿಸಲ್ಪಟ್ಟಿರುವವುಗಳಾಗಿವೆ (2:14, 15, 17). |
| (a) ತಮ್ಮನ್ನು ಕೆಡಿಸಿಕೊಳ್ಳುವದಕ್ಕೆ, (b) ದೇವದೂತರ ಆರಾಧನೆ, (c) ಅಥವಾ ತಾನು ನೋಡಿರುವ ದರ್ಶನ ಇವುಗಳಿಗೆ ಸಂಬಂಧಿಸಿದ ವಿಧಿಗಳು (2:18). | ಅವುಗಳು ಜಂಬದಿಂದ ಕೂಡಿದ, ಪ್ರಾಪಂಚಿಕ ಬುದ್ಧಿಯ ಮೇಲೆ ಆಧಾರವಾಗಿದ್ದವು; ಅವುಗಳು ಶಿರಸ್ಸಾಗಿರುವ ಕ್ರಿಸ್ತನಿಂದ ಬಂದವುಗಳಲ್ಲ (2:18, 19). |
| ಇದನ್ನ ಹಿಡಿಯಬೇಡ, ಇದನ್ನು ರುಚಿನೋಡಬೇಡ, ಅದನ್ನು ಮುಟ್ಟಬೇಡ" ಎನ್ನುವಂತಹ ಕಟ್ಟಳೆಗಳು (2:20, 21). | ಅವುಗಳು ನಾಶಗೊಳ್ಳುವ ಸಂಗತಿಗಳನ್ನು ಸೂಚಿಸುತ್ತವೆ ಮತ್ತು ಅವುಗಳು ಹೆಸರಿಗೆ ಮಾತ್ರ ಜ್ಞಾನವೆಂಬಂತೆ ಕಾಣುತ್ತವೆ ಆದರೆ ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸುವದರಲ್ಲಿ ಯಾವ ಪ್ರಯೋಜನಕ್ಕೂ ಬರುವದಿಲ್ಲ (2:22, 23). |

### "ಇವು ಮುಂದೆ ಬರಬೇಕಾಗಿದ್ದ ಕಾರ್ಯಗಳ ಛಾಯೆಯಾಗಿವೆ" (2:17)

ಪೌಲನು 16ನೇ ವಚನದಲ್ಲಿ ಹೆಸರಿಸಿದ ಆಚರಣೆಗಳು ರಕ್ಷಣೆ ಅಥವಾ ನೀತಿಯೊಂದಿಗೆ ಯಾವದೇ ಸಂಬಂಧವಿಲ್ಲದವುಗಳಾಗಿವೆ. ಆಹಾರದ ಕುರಿತ ವಿಧಿಗಳು ಅಥವಾ ವಿಶೇಷ ದಿನಗಳ ಆಚರಿಸುವಿಕೆಯು ಹೇಗೆ ಕೊಲೊಸ್ಸೆಯವರ ಆತ್ಮೀಕ ಜೀವಿತಗಳನ್ನು ಉತ್ತಮಗೊಳಿಸುವದಕ್ಕೆ ಸಾಧ್ಯ? ಇವುಗಳು ನಿಜವಾದ ಆಹಾರವಾಗಿರುವಂಥ ಕ್ರಿಸ್ತನಲ್ಲಿನ ಜೀವನಕ್ಕೆ ಕೇವಲ ಛಾಯೆಗಳಾಗಿದ್ದವು (ಯೋಹಾನ 6:48). ಧರ್ಮಶಾಸ್ತ್ರಕ್ಕೆ ಹೋಲಿಸಿದರೆ ಹೊಸ ಒಡಂಬಡಿಕೆಯು ಅನೇಕ ಸುಧಾರಣೆಗಳನ್ನು ಒದಗಿಸಿರುತ್ತದೆ. Kosher (ಯೆಹೂದಿ ಧಾರ್ಮಿಕ ವಿಧಿಗನುಗುಣವಾದ) ಆಹಾರಗಳಿಗಿಂತಲೂ ಆತ್ಮೀಕ ನಿರ್ಮಲತೆಯು ಹೆಚ್ಚು ಪ್ರಾಮುಖ್ಯವಾದದ್ದು (2 ಕೊರಿಂಥ 7:1). ಯೇಸುವಿನ ಯಜ್ಞವು ಪಾಪವನ್ನು ಶುದ್ಧೀಕರಿಸುವದಕ್ಕೆ ಶಕ್ತವಾಗಿತ್ತು (ಮತ್ತಾಯ 26:28), ಆದರೆ ಧರ್ಮಶಾಸ್ತ್ರದ ಯಜ್ಞಗಳಿಂದ ಅದು ಸಾಧ್ಯವಿರಲಿಲ್ಲ (ಇಬ್ರಿಯ 10:4). ಸಬ್ಬತ್ ವಿಶ್ರಾಂತಿಗಿಂತಲೂ ಕ್ರೈಸ್ತರಿಗೆ ವಾಗ್ದಾನ ಮಾಡಲ್ಪಟ್ಟಿರುವ ಪರಲೋಕದಲ್ಲಿನ ಶಾಶ್ವತವಾದ ವಿಶ್ರಾಂತಿಯು ಉತ್ತಮವಾದದ್ದು

(ಇಬ್ರಿಯ 4:9; 1 ಪೇತ್ರ 1:3, 4). ಮೋಶೆಗಿಂತಲೂ ಯೇಸು ಶ್ರೇಷ್ಠನಾದ ಧರ್ಮಶಾಸ್ತ್ರ ದಾಯಕನಾಗಿದ್ದಾನೆ ಮತ್ತು ಧರ್ಮಶಾಸ್ತ್ರದಿಂದ ಒದಗಿಸಲ್ಪಟ್ಟ ಯಾಜಕರಿಗಿಂತಲೂ ಯೇಸು ಸರ್ವೋಟ್ಕೃಷ್ಟನಾಗಿದ್ದಾನೆ (ಇಬ್ರಿಯ 3:3; 7:28).

ಒಂದು ವಾಸ್ತವಿಕತೆಯ ಭಾಗಶಃ ಸ್ವರೂಪವನ್ನು ಪ್ರಕಟಗೊಳಿಸುವದಾಗಿ ಮೂಡಿರುವ ಒಂದು **ಛಾಯೆ**ಯನ್ನು ಸೂಚಿಸುವದಕ್ಕೆ σκιά (*skia*) ಎಂಬ ಪದವು ಬಳಸಲ್ಪಟ್ಟಿದೆ. ಅದು ಕೇವಲ ಬೇರೊಂದರ ಪ್ರತಿಕೃತಿ ಅಥವಾ ನಕಲು ಮಾತ್ರವೇ ಆಗಿರುತ್ತದೆ. ಹೊಸ ಒಡಂಬಡಿಕೆಯಲ್ಲಿ, ಧರ್ಮಶಾಸ್ತ್ರದಲ್ಲಿ ಸ್ವತಃ ಸ್ವಾಭಾವಿಕ ಮೌಲ್ಯ ಅಥವಾ ಶಕ್ತಿಯನ್ನು ಹೊಂದಿಲ್ಲದೆ ಇದ್ದಂಥ ಮುನ್.ಛಾಯಿಯಾಗಿರುವ ಸತ್ಯಗಳನ್ನು ಪರಿಚಯಿಸಿದನು (ಇಬ್ರಿಯ 10:1-4). ಉದಾಹರಣೆಗೆ, ಪ್ರಾಣಿಗಳ ಯಜ್ಞಗಳು ಕ್ರಿಸ್ತನಲ್ಲಿ ಸಿಕ್ಕುವ ವಾಸ್ತವಿಕತೆಗೆ ಮುನ್.ಛಾಯೆ ಆಗಿದ್ದವು (ಇಬ್ರಿಯ 8:5; 10:1-3).

ಛಾಯೆಯು ಹೇಗೆ ವಾಸ್ತವಿಕತೆಯಾಗಿರುವದಿಲ್ಲ, ಆದರೆ ಕೇವಲ ಒಂದು ಪ್ರತಿಕೃತಿಯಾಗಿರುತ್ತದೆಯೋ, ಹಾಗೆಯೇ ಧರ್ಮಶಾಸ್ತ್ರದಲ್ಲಿನ ಕಾರ್ಯಗಳು ಕೇವಲ ವಾಸ್ತವಿಕವಾದದ್ದರ ಛಾಯೆ ಮಾತ್ರವೇ ಆಗಿದ್ದವು. ಯೇಸುವಿನಿಂದ ಸತ್ಯ, ವಾಸ್ತವಿಕತೆಯು ಬಂದರೆ (ಯೋಹಾನ 1:17), ಮೋಶೆಯ ಮೂಲಕ ಛಾಯೆಯಾಗಿರುವ ಧರ್ಮಶಾಸ್ತ್ರವು ಬಂದಿತು (ಇಬ್ರಿಯ 10:1). ಧರ್ಮಶಾಸ್ತ್ರವು ಹೊಸ ಒಡಂಬಡಿಕೆಯ ವಾಸ್ತವಿಕತೆಗಳ ಛಾಯೆಯಾಗಿತ್ತು, ಆದರೆ ಅದು ಅನಂತರದಲ್ಲಿ ಯೇಸುವು ಪ್ರಕಟಗೊಳಿಸಿದ ರೀತಿಯಲ್ಲಿ ಸತ್ಯಗಳನ್ನು ಸಂಪೂರ್ಣವಾಗಿ ಪ್ರಕಟಗೊಳಿಸಲಿಲ್ಲ. ಧರ್ಮಶಾಸ್ತ್ರದ ಆಚಾರಗಳನ್ನಾಧರಿಸಿ ಕ್ರೈಸ್ತರಿಗೆ ತೀರ್ಪು ಮಾಡುವವರು ಒಂದು ಛಾಯೆಯನ್ನು ನೋಡಿ ಒಬ್ಬ ವ್ಯಕ್ತಿಯ ಚಹರೆಯ ಬಗ್ಗೆ ತೀರ್ಪು ಮಾಡಿದಂತಿರುತ್ತದೆ. "ವಾಸ್ತವಿಕತೆಯು ಈಗ ಬಂದಿರುವದರಿಂದ, ತೀರ್ಪು ಮಾಡುವದಕ್ಕೆ ಛಾಯೆಗಳು ಒಂದು ಪ್ರಮಾಣವಾಗುವದಿಲ್ಲ."[1]

**ಮುಂದೆ ಬರಬೇಕಾಗಿದ್ದ ಕಾರ್ಯಗಳ . . .** ಇನ್ನು ಮೇಲೆ ಭವಿಷ್ಯದ ಕಾರ್ಯಗಳಾಗಿರುವದಿಲ್ಲ. "ಬರಬೇಕಾಗಿದ್ದ ಕಾರ್ಯಗಳ" ಛಾಯೆಯು ಯೇಸು ಹೊಸ ಒಡಂಬಡಿಕೆಯಲ್ಲಿ ಪರಿಚಯಿಸಿದ ಕಾರ್ಯಗಳಿಗೆ ಛಾಯೆಯಾಗಿರುತ್ತದೆ (ಇಬ್ರಿಯ 8:5).

### "ಇವುಗಳ ನಿಜಸ್ವರೂಪವು ಕ್ರಿಸ್ತನೇ" (2:17)

ನಿಜಸ್ವರೂಪ ಎಂಬುದರ ಅನುವಾದಿತ ಪದವು σῶμα (*sōma*), ಅದು ಸಾಮಾನ್ಯವಾಗಿ "ದೇಹ" ಎಂಬ ಅರ್ಥವನ್ನ ಕೊಡುತ್ತದೆ. ಅಂಥ ದೇಹವು ಒಬ್ಬ ವ್ಯಕ್ತಿ (ಮತ್ತಾಯ 5:29), ಪ್ರಾಣಿಗಳು (ಯಾಕೋಬ 3:3), ಗಿಡಗಳು (1 ಕೊರಿಂಥ 15:37), ಅಥವಾ ಒಂದು ಜನರ ಗುಂಪು – ಉದಾಹರಣೆಗೆ, ಸಭೆ (ರೋಮಾ 12:5; ಕೊಲೊಸ್ಸೆ 1:18) – ಆಗಿರಬಹುದಾಗಿದೆ. ಇದು ಒಂದು ಸಮಸ್ಯೆಯನ್ನು ತಂದೊಡ್ಡುತ್ತದೆ. ಪೌಲನು σῶμα τοῦ Χριστοῦ (*sōma tou Christou,* "ಕ್ರಿಸ್ತನ ದೇಹ") ಎಂಬ ಪದವನ್ನು ಬಳಸಿದಾಗ, ಆತನು (1) ಯೇಸುವಿನ ಶಾರೀರಿಕ ದೇಹವನ್ನು ಸೂಚಿಸಿ ಹೇಳಿದನೋ (ಮತ್ತಾಯ 26:12), (2) ಸಭೆಯನ್ನು ಅಥವಾ (3) ಛಾಯೆಯಿಂದ ಪ್ರತಿನಿಧಿಸಲ್ಪಟ್ಟಿರುವ ವಾಸ್ತವಿಕೆ ಅಥವಾ ನಿಜಸ್ವರೂಪವನ್ನು ಸೂಚಿಸಿ ಹೇಳಿದನೋ? KJVಯು *sōma*ವನ್ನು ಒಂದು ಸಂದರ್ಭದಲ್ಲಿ ಹೊರತು ಪಡಿಸಿ ಮಿಕ್ಕ ಎಲ್ಲಾ ಸಂದರ್ಭಗಳಲ್ಲಿ "ದೇಹ" ಅಥವಾ "ದೇಹಗಳು" ಎಂದು ಅನುವಾದಿಸುತ್ತದೆ, ಒಂದು ಕಡೇ ಮಾತ್ರ "ಸಾಕ್ಷಾತ್ತಾಗಿ" ಎಂದು ಅನುವಾದಿಸುತ್ತದೆ

(2 ಕೊರಿಂಥ 10:10).[2]

ಈ ಮೂರರಲ್ಲಿ ಯಾವದೇ ಅರ್ಥನಿರೂಪಣೆಯ ಸಾಧ್ಯತೆಯಿದೆಯಾದರೂ, ಸನ್ನಿವೇಶವನ್ನು ಉತ್ತಮವಾಗಿ ಪ್ರತಿಫಲನಗೊಳಿಸುವ ಅರ್ಥನಿರೂಪಣೆಯೆಂದರೆ ಧರ್ಮಶಾಸ್ತ್ರವು ಹೊಸ ಒಡಂಬಡಿಕೆಯ ವಾಸ್ತವಿಕತೆಗಳ ಛಾಯೆಯಾಗಿರುತ್ತದೆ ಎಂಬದೆ. 16ನೇ ವಚನದಲ್ಲಿ ತಿಳಿಸಲ್ಪಟ್ಟಿರುವ ಧರ್ಮಶಾಸ್ತ್ರದ ವಿಧಿಗಳಾದ "ತಿಂದು ಕುಡಿಯುವ . . . ಹಬ್ಬ ಅಮಾವಾಸ್ಯೆ ಸಬ್ಬತು" ಎಂಬುವುಗಳು ಯೇಸುವಿನ ಶಾರೀರಿಕ ದೇಹ ಅಥವಾ ಸಭೆಯ ಛಾಯೆ ಹೇಗಾಗಿರುತ್ತವೆಂಬುದನ್ನು ವಿವರಿಸುವದಕ್ಕೆ ಒಬ್ಬನಿಗೆ ಕಷ್ಟಕರವಾಗುವದು. 16ನೇ ವಚನದಲ್ಲಿ ಹೇಳಲ್ಪಟ್ಟಿರುವ ಆಚರಣೆಗಳು ಬಹಳ ಸುಲಭವಾಗಿ ಹೊಸ ಒಡಂಬಡಿಕೆಯಲ್ಲಿ ಪ್ರಕಟಗೊಂಡಿರುವ ಆಚಾರಗಳ ಛಾಯೆಯೆಂಬದಾಗಿ ವಿವರಿಸಬಹುದಾಗಿದೆ. ಶಾರೀರಿಕ ಆಚಾರಗಳಾಗಿ, ಅವುಗಳು ಹೊಸ ಒಡಂಬಡಿಕೆಯ ವಾಸ್ತವಿಕತೆಗಳನ್ನು ವರ್ಣಿಸುವವುಗಳಾಗಿದ್ದವು. ಧರ್ಮಶಾಸ್ತ್ರವು ತಿನ್ನಬಹುದಾದ ಶಾರೀರಿಕ ಆಹಾರಗಳಲ್ಲಿ ನಿಷಿದ್ಧವನ್ನು ಹೇರಿತ್ತು, ಆದರೆ ಹೊಸ ಒಡಂಬಡಿಕೆಯು ಕ್ರೈಸ್ತರಿಗಾಗಿರುವ ಆತ್ಮೀಕ ಆಹಾರದ ಬಗ್ಗೆ ಕಳಕಳಿ ಹೊಂದಿರುತ್ತದೆ (1 ಪೇತ್ರ 2:2). ಪ್ರಾಣಿಗಳ ಯಜ್ಞಗಳ ಮೂಕಲ ಹಬ್ಬಗಳ ಆಚರಣೆಗಳು ಶಿಲುಬೆಯ ಮೇಲೆ ಯೇಸು ಹೊಂದಿದ ಮರಣವೆಂಬ ನಿಜ ಯಜ್ಞವನ್ನು ಪ್ರತಿ ವಾರವೂ ಸ್ಮರಿಸಿಕೊಳ್ಳುವದಕ್ಕೆ ಮುನ್‌ಛಾಯೆಯಾಗಿದ್ದವು (1 ಕೊರಿಂಥ 11:23-25). ಶಾಸ್ತ್ರಗಳು ಧರ್ಮಶಾಸ್ತ್ರದಲ್ಲಿರುವ ಇತರ ಹಲವಾರು ನಮೂನೆಗಳು ಮತ್ತು ಕ್ರೈಸ್ತ ಆಚಾರಗಳಲ್ಲಿ ಅವುಗಳಿಗೆ ಹೋಲಿಕೆಯಾಗುವ ವಾಸ್ತವಿಕತೆಗಳನ್ನು ವಿವರಿಸುತ್ತವೆ.

ಸುಳ್ಳು ಬೋಧಕರು ಸತ್ಯದ ಮೂಲನಾದ ಯೇಸುವಿನಿಂದ ಪ್ರಕಟಗೊಳಿಸಲ್ಪಟ್ಟ ಸತ್ಯವನ್ನು ನೋಡುವ ಬದಲಾಗಿ ತಮ್ಮ ದೃಷ್ಟಿಯನ್ನು ಕೇವಲ ಛಾಯೆಗಳ ಮೇಲೆ ಮಾತ್ರವೇ ಸೀಮಿತಗೊಳಿಸಿಕೊಂಡಿದ್ದರು (ಎಫೆಸ 4:21) ಛಾಯೆಯ ಉದ್ದೇಶವು ವಾಸ್ತವಿಕತೆಗಾಗಿ ಸಿದ್ಧಗೊಳಿಸುವದೇ ಆಗಿತ್ತು (ಗಲಾತ್ಯ 3:24). ಧರ್ಮಶಾಸ್ತ್ರದಡಿಯಲ್ಲಿದ್ದವರು ಈಗಲೂ ಕತ್ತಲೆಯಲ್ಲಿದ್ದರು: ಅವರ ಕಣ್ಣುಗಳಿಗೆ ಮುಸುಕು ಹಾಕಲ್ಪಟ್ಟಿರುತ್ತದೆ (2 ಕೊರಿಂಥ 3:14), ಮತ್ತು ಅವರು ಧರ್ಮಶಾಸ್ತ್ರದಲ್ಲಿ ಮುನ್‌ಛಾಯೆಯಾಗಿದ್ದ ಲೋಕದ ಬೆಳಕನ್ನು ನೋಡುವದಕ್ಕೆ ವಿಫಲರಾದರು (ಯೋಹಾನ 8:12).

ಕ್ರೈಸ್ತರು ಒಂದು ನೆರವೇರಿಕೆ ಮತ್ತು ವಾಸ್ತವಿಕತೆಯ ಯುಗದಲ್ಲಿ ಜೀವಿಸುವವರಾಗಿದ್ದಾರೆ, ಹೊರತು ಛಾಯೆಯ ಯುಗದಲ್ಲಿ ಅಲ್ಲ. ಧರ್ಮಶಾಸ್ತ್ರವು ಈಗಲೂ ಕ್ರೈಸ್ತ ಯುಗದ ಒಂದು ಪರಿಣಾಮವಿಲ್ಲದ ಛಾಯೆಯಾಗಿರುತ್ತದೆ. ಧರ್ಮಶಾಸ್ತ್ರದ ಮಂದವಾದ ಹೊರರೇಖೆಯನ್ನು ಅನುಸರಿಸಿ ಜೀವಿಸುವದಕ್ಕೆ ಅಪೇಕ್ಷಿಸುವವರು ಕ್ರೈಸ್ತ ಜೀವಿತದ ಮತ್ತು ಪರಲೋಕದಲ್ಲಿನನ ನಿತ್ಯಜೀವದ ವಿವರವಾದ ಸುಂದರ ಚಿತ್ರಣವನ್ನು ತಪ್ಪಿಸಿಕೊಳ್ಳುವವರಾಗಿದ್ದಾರೆ.

## ಮನುಷ್ಯ ಆಚಾರಗಳಿಂದ ದೂರವಿರುವದು (2:18, 19)

**18-19ಕೆಲವರು ಅತಿ ವಿನಯದಲ್ಲಿಯೂ ದೇವದೂತರ ಪೂಜೆಯಲ್ಲಿಯೂ ಆಸಕ್ತರಾಗಿದ್ದಾರೆ, ತಮಗೆ ದರ್ಶನಗಳಾದವೆಂದು ಕೊಚ್ಚಿಕೊಳ್ಳುತ್ತಾರೆ, ಮತ್ತು ಪ್ರಾಪಂಚಿಕ ಬುದ್ಧಿಯಿಂದ**

**ನಿರಾಧಾರವಾಗಿ ಉಬ್ಬಿಕೊಂಡಿದ್ದಾರೆ, ಆದರೆ ಕ್ರಿಸ್ತನೆಂಬ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ. ಇಂಥವರು ನಿಮಗೆ ದೊರಕಿರುವ ಬಿರುದನ್ನು ಅಪಹರಿಸುವದಕ್ಕೆ ಅವಕಾಶಕೊಡಬೇಡಿರಿ. ಆ ಶಿರಸ್ಸಿನಿಂದಲೇ ದೇಹವೆಲ್ಲಾ ಕೀಲುನರಗಳ ಮೂಲಕ ಬೇಕಾದ ಸಹಾಯವನ್ನು ಹೊಂದಿ ಒಂದಾಗಿ ಕೂಡಿಸಲ್ಪಟ್ಟು ದೇವರು ಕೊಡುವ ವೃದ್ಧಿಯಿಂದ ವೃದ್ಧಿಯಾಗುತ್ತಾ ಬರುತ್ತದೆ.**

### "ಇಂಥವರು ನಿಮಗೆ ದೊರಕಿರುವ ಬಿರುದನ್ನು ಅಪಹರಿಸುವದಕ್ಕೆ ಅವಕಾಶಕೊಡಬೇಡಿರಿ"

ಪೌಲನು ಕೊಲೊಸ್ಸೆಯವರಿಗೆ ಅವರನ್ನು "ಮೋಸಗೊಳಿಸುವ"ದಕ್ಕೆ ಪ್ರಯತ್ನಿಸುವವರ ಬಗ್ಗೆ (2:4), ಅವರನ್ನು "ವಶಮಾಡಿಕೊಳ್ಳುವ" ಜನರ ಬಗ್ಗೆ (2:8), ಮತ್ತು ಅವರನ್ನು "ದೋಷಿಗಳೆಂದು ಎಣಿಸುವ" ಜನರ ಬಗ್ಗೆ (2:16) ಎಚ್ಚರಿಕೆಯಾಗಿರಿ ಎಂದು ಹೇಳಿದನು. ಬಳಿಕ ಆತನು ಹೀಗೆ ಹೇಳಿದನು, **ಇಂಥವರು ನಿಮಗೆ . . . ಅಪಹರಿಸುವದಕ್ಕೆ ಅವಕಾಶಕೊಡಬೇಡಿರಿ.** ಈ ಹೇಳಿಕೆಯು ನಿರಂತರವಾಗಿ ಎಚ್ಚರದಿಂದಿರಬೇಕೆಂಬ ಆಜ್ಞಾಪಣೆಯಾಗಿರುತ್ತದೆ. ಅವರಿಗೆ ಯೇಸುವಿನ ಮೂಲಕ ಒದಗಿಸಲ್ಪಟ್ಟಿರುವ ಪ್ರಯೋಜನಗಳನ್ನು ಅಪಹರಿಸಿಕೊಳ್ಳುವಂತೆ ಸುಳ್ಳು ಬೋಧಕರಿಗೆ ಅವಕಾಶ ಕೊಡದಂತೆ ಅಪೊಸ್ತಲನು ಸಹೋದರರಿಗೆ ಆಜ್ಞಾಪಿಸುತ್ತಿದ್ದಾನೆ.

ಯೇಸು ತಂದಂಥ ವಾಸ್ತವಿಕತೆಗಳಿಂದ ಕೊಲೊಸ್ಸೆಯವರನ್ನು ದೂರಕ್ಕೆ ಕೊಂಡೊಯ್ಯುವ ಮೂಲಕ. ಸುಳ್ಳು ಬೋಧಕರು ಅವರ **ಬಿರುದನ್ನು** ಅಪಹರಿಸುವವರಾಗಿದ್ದರು. "ಅಪಹರಿಸು" (καταβραβεύω, *katabrabeuō*) ಎಂಬುದು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಆದುದರಿಂದ, ಆ ಕಾಲದ ಇತರ ಸಾಹಿತ್ಯಗಳಲ್ಲಿ ಈ ಕ್ರಿಯಾಪದದ ಬಳಕೆಯ ಕುರಿತ ಒಂದು ತಿಳುವಳಿಕೆಯನ್ನು ಕಂಡುಕೊಳ್ಳತಕ್ಕದ್ದು. ನಕಾರಾತ್ಮಕ ಅರ್ಥದಲ್ಲಿ, ಅದು ಒಬ್ಬ ವ್ಯಕ್ತಿಯು ಬಹುಮಾನವನ್ನು ಪಡೆದುಕೊಳ್ಳದಂತೆ ಆತನನ್ನು ಒಬ್ಬ ಆಟದ ತೀರ್ಪುಗಾರನು (ಅಂಪೈರು) ಹೊರಗಿಡುವ ರೀತಿಯಲ್ಲಿ, "ವಿರುದ್ಧವಾಗಿ ನಿರ್ಣಯಿಸು" ಎಂಬ ಅರ್ಥವನ್ನು ಕೊಡುತ್ತದೆ. ಪೌಲನು ಬಹುಶಃ ಪರೋಕ್ಷವಾಗಿ ಗ್ರೀಕ್ ಕ್ರೀಡೆಗಳನ್ನು ಸೂಚಿಸುವವನಾಗಿ ಹೇಳಿರಬಹುದು. ಒಬ್ಬ ಕ್ರೀಡಾಪಟುವು ಓಟ ಪಂದ್ಯದಲ್ಲಿ ಗೆದ್ದಾಗ್ಯೂ ನಂತರದಲ್ಲಿ ಆಟದ ತೀರ್ಪುಗಾರನಿಂದ ಅನರ್ಹಕ್ಕೊಳಗಾಗಬಹುದು, ಅಥವಾ ಆತನು ಪ್ರಯಾಸಪಟ್ಟು ಗೆಲುವನ್ನು ಸಾಧಿಸುತ್ತಾನೆ ಆದರೆ ಬಳಿಕ ತಾನು ಕ್ರೀಡೆಯಲ್ಲಿ ಸ್ಪರ್ಧಿಸುವದಕ್ಕೆ ಕಾನೂನುಬದ್ಧವಾಗಿ ಅರ್ಹನಾಗಿರಲಿಲ್ಲ ಎಂಬುದು ತಿಳಿದು ಬರುತ್ತದೆ. ಇವೆರಡರಲ್ಲಿ ಯಾವದೇ ಪರಿಸ್ಥಿತಿಯಿದ್ದರೂ, ಆತನು ಬಹುಮಾನವನ್ನು ಹೊಂದಲು ವಿಫಲನಾಗುವನು.

ಮಿಥ್ಯ ವಿನಯತೆಯ ಮೂಲಕ ಯೇಸುವಿನಿಂದ ದೂರಕ್ಕೆ ನಡಿಸಲ್ಪಡದಂತೆ ಎಚ್ಚರಿಕೆಯಾಗಿರುವಂತೆ ಪೌಲನು ಸಹೋದದರಿಗೆ ಹೇಳುತ್ತಾನೆ. ಅವರು ಯೇಸುವಿನ ಬದಲಾಗಿ ದೇವದೂತರನ್ನು ಪೂಜಿಸುವದಕ್ಕಾರಂಭಿಸಿದರೆ, ಅವರ ಬಿರುದು ಅಪಹರಿಸಲ್ಪಡುವದು. ಈ "ಬಿರುದು" ರಕ್ಷಣೆ, ಪರಲೋಕದಲ್ಲಿನ ನಿತ್ಯಜೀವ, ಮತ್ತು ಕ್ರಿಸ್ತನಲ್ಲಿ ಸಿಕ್ಕುವ ಆತ್ಮೀಕ ಜೀವನಗಳನ್ನು ಒಳಗೊಂಡಿತ್ತು. "ಇಂಥವರು ನಿಮಗೆ . . . ಅಪಹರಿಸುವದಕ್ಕೆ ಅವಕಾಶಕೊಡಬೇಡಿರಿ" ಎಂಬ ಮಾತು 16ನೇ ವಚನಕ್ಕೆ

ಹೋಲುವಂತಿದೆ. ಕೊಲೊಸ್ಸೆಯವರು ಯಾರ ಮೂಲಕವಾಗಲಿ ಮತ್ತು ಯಾರ ಕಡೆಗೆ ಆಗಲಿ ಯೇಸುವನ್ನು ಬಿಟ್ಟು ತಿರುಗಿಕೊಳ್ಳಬಾರದೆಂದು ಪೌಲನ ಬಯಕೆಯಾಗಿತ್ತು. ಅವರಲ್ಲಿ ಈಗಾಗಲೇ ವಾಸ್ತವಿಕತೆ, ಸತ್ಯವು ಇದ್ದದರಿಂದ, ಅವರು ಸುಳ್ಳು ಬೋಧಕರನ್ನು ಹಿಂಬಾಲಿಸಬಾರದು ಅಥವಾ ವಾಸ್ತವಿಕತೆಗೆ ಒಂದು ಪರಿಣಾಮವಿಲ್ಲದ ಛಾಯೆಯ ಮೂಲಕ ದಾರಿ ತಪ್ಪಿಸಲ್ಪಡಬಾರದು. ಅವರು ಇದಕ್ಕೆ ಅವಕಾಶ ಕೊಟ್ಟರೆ, ಅವರು ಸತ್ಯದ ಬದಲಿಗೆ ಸುಳ್ಳನ್ನು, ನಿಜಸ್ವರೂಪಕ್ಕೆ ಬದಲಾಗಿ ಛಾಯೆಯನ್ನು ಅನುಸರಿಸುವವರಾಗುವರು. ಹೀಗೆ ಅವರ ವಾಸ್ತವಿಕತೆಯು ಅಪಹರಿಸಲ್ಪಡುತ್ತಿತ್ತು.

ಪೌಲನು ಬೋಧನೆಯು ಸೂಚಿಸುವದೇನೆಂದರೆ ಎಲ್ಲಾ ಜನರಿಗೂ ಸ್ವೇಚ್ಛಾ – ಚಿತ್ತವಿರುತ್ತದೆ ಮತ್ತು ಅವರು ದೇವರ ಕೈಗೊಂಬೆಗಳಾಗಿರುವದಿಲ್ಲ ಎಂಬುದೆ. ಇಲ್ಲವಾದರೆ, ಆತನ ಎಚ್ಚರಿಕೆಯು ನಿಷ್ಪ್ರಯೋಜಕವಾಗಿರುತ್ತಿತ್ತು. ಅವರ ಬಿರುದನ್ನು ಅಪಹರಿಸುವದಕ್ಕೆ ಅವಕಾಶ ಕೊಡಬೇಡಿರಿ ಎಂದು ಹೇಳುವ ಮೂಲಕ, ಅವರಿಗೆ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿರುತ್ತದೆಂಬುದನ್ನು ತೋರಿಸಿ ಕೊಡುತ್ತಾನೆ. ತಮ್ಮನ್ನು ಪ್ರಭಾವಗೊಳಿಸುವಂತೆ ಅವರು ಸುಳ್ಳು ಬೋಧಕರಿಗೆ ಅವಕಾಶ ಕೊಡಬಹುದಿತ್ತು ಅಥವಾ ಪ್ರಭಾವಗೊಳಿಸುವಂತೆ ಅವಕಾಶ ಕೊಡುವದಕ್ಕೆ ನಿರಾಕರಿಸಲೂ ಇರಬಹುದಿತ್ತು.

ಯೇಸುವಿನಿಂದ ದೂರವಾಗಿ ಬೇರೆ ಬೋಧನೆಗಳೊಳಗೆ ಮತ್ತು ಆಚಾರಗಳೊಳಗೆ ನಡಿಸಲ್ಪಡದಂತೆ ಅವರಿಗೆ ಎಚ್ಚರಿಕೆಯನ್ನು ಕೊಡುವದಕ್ಕೆ ಪೌಲನು ಆರು ನಕಾರಾತ್ಮಕ ಮಾತುಗಳನ್ನು ಬಳಸುತ್ತಾನೆ. 2:18, 19 ವಚನಗಳಲ್ಲಿ ನಾಲ್ಕು ಎಚ್ಚರಿಕೆಗಳು ಕೊಡಲ್ಪಟ್ಟಿವೆ, ಮತ್ತು ಬಳಿಕ ಆತನು "ಆ ಪದಾರ್ಥಗಳೆಲ್ಲವೂ ಬಳಸುವದರಲ್ಲಿ ನಾಶವಾಗುತ್ತವೆ" ಎಂಬದಾಗಿ (2:22) ಮತ್ತು ". . . ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳುವದರಲ್ಲಿ ಯಾವ ಪ್ರಯೋಜನಕ್ಕೂ ಬರುವದಿಲ್ಲ" (2:23) ಎಂಬದಾಗಿ ಹೇಳುತ್ತಾನೆ.

ಸಕಾರಾತ್ಮಕ ಕಡೆಯಲ್ಲಿ, ವಿವಿಧ ಮಾತುಗಳನ್ನು ಬಳಸುತ್ತಾ, ಯೇಸುವನ್ನು ಹಿಂಬಾಲಿಸಿ ಆತನಿಗೆ ನಂಬಿಗಸ್ತರಾಗಿ ಉಳಿಯಬೇಕೆಂದು ಪೌಲನು ಸಹೋದರರಿಗೆ ಪ್ರೋತ್ಸಾಹ ಮಾಡುತ್ತಾನೆ:

"ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿದನು" (1:13).
"ಆತನಲ್ಲಿ ದೇವರ ಪ್ರತಿರೂಪನೂ" (1:15).
ಆತನು "ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನು" (1:15).
"ಸರ್ವವು ಆತನ ಮುಖಾಂತರವಾಗಿಯೂ . . . ಸೃಷ್ಟಿಸಲ್ಪಟ್ಟಿತು" (1:16).
"ಆತನು ಎಲ್ಲಕ್ಕೂ ಮೊದಲು ಇದ್ದವನು" (1:17).
"ಆತನು ಸಮಸ್ತಕ್ಕೂ ಆಧಾರಭೂತನು" (1:17).
"ಆತನು . . . ದೇಹಕ್ಕೆ ಶಿರಸ್ಸು" (1:18).
"ಆತನು ಆದಿಸಂಭೂತನು . . . ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ" (1:18).
ಆತನು "ಎಲ್ಲಾದರಲ್ಲಿ ಪ್ರಮುಖ"ನಾಗುವನು (1:18).
"ಆತನಲ್ಲಿ ಸರ್ವಸಂಪೂರ್ಣತೆಯು [ವಾಸಮಾಡುತ್ತದೆ]" (1:19).

“ಆತನು ನಿಮ್ಮನ್ನು ಸಂಧಾನಪಡಿಸಿದ್ದಾನೆ” (1:20).
ಆತನಲ್ಲಿಯೇ “ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳೆಲ್ಲಾ” ಅಡಗಿರುತ್ತವೆ (2:3).
“ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ” (2:9).
“ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ” (2:10).
“ನೀವು ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ” (2:11).
“ಆತನು . . . ಆಜ್ಞಾರೂಪವಾಗಿದ್ದಂಥ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು” (2:14).
“ಆತನು ದೊರೆತನಗಳನ್ನೂ ಅಧಿಕಾರಗಳನ್ನೂ ನಿರಾಯುಧರನ್ನಾಗಿ ಮಾಡಿದನು” (2:15).
“ನೀವು ಕ್ರಿಸ್ತನೊಂದಿಗೆ ಸತ್ತವರಾಗಿದ್ದೀರಿ” (2:20).

## “ಕೆಲವರು ಅತಿವಿನಯದಲ್ಲಿಯೂ ದೇವದೂತರ ಪೂಜೆಯಲ್ಲಿಯೂ ಆಸಕ್ತರಾಗಿದ್ದಾರೆ”

ಸಂಭಾವ್ಯ ಅಪಹರಣಕಾರರು ಕೊಲೊಸ್ಸೆಯವರನ್ನು **ಅತಿವಿನಯದಲ್ಲಿಯೂ ದೇವದೂತರ ಪೂಜೆಯಲ್ಲಿಯೂ ಆಸಕ್ತರಾಗಿರುವ** ಮೂಲಕ ಯೇಸುವಿನಿಂದ ದೂರಕ್ಕೆ ಕೊಂಡೊಯ್ಯಬಹುದಿತ್ತು. “ಆಸಕ್ತರಾಗಿದ್ದಾರೆ” ಎಂಬುದನ್ನು ಅನುವಾದಿಸಿರುವ θέλω (*thelō*) ಎಂಬುದರ ಸಹಜವಾದ ಅರ್ಥವು “ಮನಸ್ಸು ಮಾಡು, ಬಯಸು, ಹಾರೈಸು” ಎಂದಾಗಿರುತ್ತದೆ (ನೋಡಿರಿ ಮತ್ತಾಯ 1:19; 8:2). ಈ ಸನ್ನಿವೇಶದಲ್ಲಿ, ಗ್ರೀಕ್ ಉಪಸರ್ಗ ἐν (*en,* “ಒಳಗೆ”) ಎಂಬದರ ಜೊತೆಯಾಗಿ ಬಳಸಲ್ಪಡುವಾಗ, ಅದು “ದಲ್ಲಿ ಸಂತೋಷ ಪಡು,”[3] ಅಥವಾ “ದಲ್ಲಿ ಆನಂದಿಸು” ಎಂದು ಉತ್ತಮ ಅರ್ಥ ಬರುತ್ತದೆ. ಈ ವಂಚಕರು ಒಂದು ಮಿಥ್ಯವಾದ, ವಿನಯವಾದ ಭಕ್ತಿಯನ್ನು ಹೊಂದಿದ್ದರು; ಅವರು ಇತರರ ದೃಷ್ಟಿಯಲ್ಲಿ ತಮ್ಮನ್ನು ಹೀನೈಸಿಕೊಳ್ಳುವದರಲ್ಲಿ ಸಂತೋಷ ಪಡುತ್ತಿದ್ದರು.

ಕೊಲೊಸ್ಸೆಯವರು ಕೆಲವೊಂದು ಆಚಾರಗಳ ಕಡೆಗೆ ಸೆಳೆಯಲ್ಪಡದಂತೆ ದೂರವಿರಬೇಕೆಂದು ಒತ್ತಿ ಹೇಳುವದಕ್ಕೆ ಪೌಲನು ನಾಲ್ಕು ಗ್ರೀಕ್ ಕೃದಂತಗಳನ್ನು ಬಳಸಿದನು: (1) “ಅತಿವಿನಯದಲ್ಲಿಯೂ ದೇವದೂತರ ಪೂಜೆಯಲ್ಲಿಯೂ ಆಸಕ್ತರಾಗಿದ್ದಾರೆ”; (2) “ತಮಗೆ ದರ್ಶನಗಳಾದವೆಂದು ಕೊಚ್ಚಿಕೊಳ್ಳುತ್ತಾರೆ”; (3) “ಪ್ರಾಪಂಚಿಕ ಬುದ್ಧಿಯಿಂದ ನಿರಾಧಾರವಾಗಿ ಉಬ್ಬಿಕೊಂಡಿದ್ದಾರೆ”; ಮತ್ತು (4) “ಕ್ರಿಸ್ತನೆಂಬ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ.” (ಒತ್ತಿ ಹೇಳಿದ್ದು ನನ್ನದು.)

ಇಲ್ಲಿ ಮತ್ತು 23ನೇ ವಚನದಲ್ಲಿ “ಅತಿವಿನಯ” ಎಂದು ಅನುವಾದಿಸಲ್ಪಟ್ಟಿರುವ ταπεινοφροσύνη (*tapeinophrosunē*) ಎಂಬ ಪದವು ಸಾಮಾನ್ಯವಾಗಿ, “ನಮ್ರತೆ” ಎಂದು ಅನುವಾದಿಸಲ್ಪಡುತ್ತದೆ (ಅಪೊಸ್ತಲರ ಕೃತ್ಯಗಳು 20:19; ಎಫೆಸ 4:2; ಫಿಲಿಪ್ಪಿ 2:3). ದೇವರ ಮುಂದೆ ದೀನತೆಯಿಂದಿರುವದರ ಪ್ರಾಮುಖ್ಯತೆಯ ಕುರಿತಾಗಿ ಹೊಸ ಒಡಂಬಡಿಕೆಯ ಇತರ ಬರಹಗಾರರು ಕಲಿಸಿದ್ದಾರೆ (ಯಾಕೋಬ 4:10; 1 ಪೇತ್ರ 5:5, 6). ಹೇಗೂ, ಈ ಸನ್ನಿವೇಶದಲ್ಲಿ, ಈ ಪದವು “ದೇವದೂತರ ಪೂಜೆ”ಗೆ ಸಂಬಂಧಗೊಳಿಸಲ್ಪಟ್ಟಿದೆ, “ದೀನತೆಯು” ಒಂದು ನಕಾರಾತ್ಮಕ ಬಳಕೆಯನ್ನು ಸೂಚಿಸುವದಾಗಿದೆ. ಪೌಲನು ಇಲ್ಲಿ ಕೃತಕವಾದ ವಿನಯತೆ, ಅಂದರೆ ಕಪಟತನದ ಬಗ್ಗೆ ಮಾತಾಡುತ್ತಿದ್ದಾನೆ (“ಮಿಥ್ಯ

ದೀನಭಾವ"; NIV). ಜನರು ನೋಡಬೇಕೆಂದು ಬಡವರಿಗೆ ದಾನ, ಪ್ರಾರ್ಥನೆ, ಮತ್ತು ಉಪವಾಸ ಮಾಡುವವರ ವಿರುದ್ಧವಾಗಿ ಮಾತಾಡಿದ ವೇಳೆಯಲ್ಲಿ ಇದೇ ಸಮಸ್ಯೆಯನ್ನುದ್ದೇಶಿಸಿ ಹೇಳಿರಬಹುದಾಗಿದೆ (ಮತ್ತಾಯ 6:1-7, 16-18; ನೋಡಿರಿ 23:25-28). ಸೋಗುಹಾಕಲ್ಪಟ್ಟ ನೀತಿ ಅಥವಾ ದೀನತೆಯು ನಿಜವಾಗಿಯೂ ನೀತಿಯೇ ಆಗಲಿ ಅಥವಾ ದೀನತೆಯೇ ಆಗಲಿ ಆಗಿರುವದಿಲ್ಲ.

ಹೆಚ್ಚು ಕಡಿಮೆ ಪ್ರತಿಯೊಂದು ಧಾರ್ಮಿಕ ಗುಂಪುಗಳಲ್ಲಿಯೂ ತಮ್ಮ ಭಕ್ತಿಯಲ್ಲಿ ಹೆಮ್ಮೆ ಪಟ್ಟುಕೊಳ್ಳುವವರು ಇದ್ದಾರೆ, ಅದನ್ನು ಅವರು ಮಿಥ್ಯ ದೀನತೆಯೊಂದಿಗೆ ಪ್ರದರ್ಶಿಸುತ್ತಾರೆ. ಈ ವ್ಯಕ್ತಿಗಳು ಅಸಹಜವಾದ ಧಾರ್ಮಿಕ ಅನುಭವಗಳು ಅಥವಾ ಆತ್ಮೀಕ ವರಗಳ ಮೂಲಕವಾಗಿ ಒಂದು ಅತ್ಯುನ್ನತವಾದ ಮಟ್ಟದ ಪರಿಶುದ್ಧತೆಯನ್ನು ಕಂಡುಕೊಂಡಿದ್ದಾರೆಂದು ನಂಬಿರಬಹುದಾಗಿದೆ. ಅಂಥ ಅನುಭವಗಳ ಮೂಲಕವಾಗಿ ವಿಶೇಷ ಆತ್ಮೀಕ ಜ್ಞಾನಗಳನ್ನು ಪಡೆದುಕೊಂಡಿದ್ದೇವೆಂದು ಯೋಚಿಸುವವರಾಗಿ, ಅವರು ಗರ್ವದಿಂದ ಉಬ್ಬಿಕೊಂಡಿರುತ್ತಾರೆ. ಈ ಮುಖವಾಡವನ್ನು ದಾಟಿ ಇರುವ ವಾಸ್ತವಿಕತೆಯನ್ನು ಅರಿಯದ ಜನರು ಇಂಥ ಮಿಥ್ಯ ವಿನಯತೆಯ ಪ್ರದರ್ಶನ ಮೂಲಕವಾಗಿ ಯೇಸುವಿನಿಂದ ದೂರಕ್ಕೆ ಕೊಂಡೊಯ್ಯಲ್ಪಡಬಲ್ಲರು.

ಹೊರಗಿನ ತೋರಿಕೆಗೋಸ್ಕರ ತಮ್ಮ ಮುಖದ ಚಹರೆಗಳನ್ನು ತಿರಿಚುವವರು, ಡಂಭಾಚಾರದಿಂದ ಕೂಡಿದ ದೇಹದ ಹಾವಭಾವಗಳನ್ನು ಬದಲಿಸುವವರು, ತಮ್ಮ ಧ್ವನಿಯ ಕಂಠವನ್ನು ವಿಕಾರಗೊಳಿಸುವವರು, ಅಥವಾ ಹೊರಗಿನ ತೋರ್ಪಡಿಕೆಗಾಗಿ ಅಸಹಜವಾದ ದೈಹಿಕ ಭಂಗಿಗಳನ್ನು ಬಳಸುವವರು ಮನುಷ್ಯರನ್ನು ಮೆಚ್ಚಿಸುವದಕ್ಕೆ ಅಪೇಕ್ಷಿಸುವವರಾಗಿರುತ್ತಾರೆಯೇ ಹೊರತು ದೇವರನ್ನಲ್ಲ. ಅಂತಹ ಡಂಭಾಚಾರವು ಭಕ್ತಿಯ ಒಂದು ಗರ್ವದ ಪ್ರದರ್ಶನ ಮಾತ್ರವೇ ಆಗಿದ್ದು, ತಾವೆಷ್ಟು ಧಾರ್ಮಿಕರು ಅಥವಾ ಹೇಗೆ ತಾವು ಆರಾಧನೆಯಲ್ಲಿ ತೊಡಗಿದ್ದಾರೆಂದು ತೋರ್ಪಡಿಸಿಕೊಳ್ಳುತ್ತಾರೆ.

ಪೌಲನು "ದೇವದೂತರ ಪೂಜೆ" ಬಗ್ಗೆ ಸಹ ಎಚ್ಚರಿಸಿದನು. ಆರಾಧನೆಯ ರೀತಿಯು ತಪ್ಪಾಗಿದ್ದದ್ದು ಮಾತ್ರವೇ ಅಲ್ಲ, ಆದರೆ ಅವರು ಯಾರಿಗೆ ಆರಾಧನೆ ಸಲ್ಲಿಸುತ್ತಿದ್ದಾರೆಂಬುದು ಸಹ ತಪ್ಪಿತ್ತು. ಕ್ರೈಸ್ತರು ದೇವರನ್ನಲ್ಲದೆ ಬೇರೆ ಯಾವ ಜೀವಿಯನ್ನಾದರೂ ಆರಾಧಿಸಿದರೆ ತಮ್ಮ ಬಹುಮಾನವನ್ನು ಕಳೆದುಕೊಳ್ಳಬಲ್ಲರು. ಪತ್ಮೋಸ್ ದ್ವೀಪದಲ್ಲಿದ್ದ ವೇಳೆ, ಯೋಹಾನನು ತನಗೆ ಯೇಸು ಕ್ರಿಸ್ತನ ಪ್ರಕಟನೆಯನ್ನು ತಿಳಿಸುತ್ತಿದ್ದಂಥ ದೇವದೂತನನ್ನು ಆರಾಧಿಸುವದಕ್ಕೆ ಆರಂಭಿಸಿದನು. ದೇವದೂತನು ಆತನ ಆರಾಧನೆಯನ್ನು ನಿರಾಕರಿಸಿದನು ಮತ್ತು ದೇವರನ್ನು ಆರಾಧಿಸಬೇಕೆಂದು ಆತನಿಗೆ ಹೇಳಿದನು (ಪ್ರಕಟನೆ 19:10; 22:8, 9). ದೇವರೊಬ್ಬನನ್ನೇ ಆರಾಧಿಸತಕ್ಕದ್ದು (ಧರ್ಮೋಪದೇಶಕಾಂಡ 6:13; ಮತ್ತಾಯ 4:10).

ಯೇಸು ತನ್ನನ್ನು ಆರಾಧಿಸುವಂತೆ ಅನುಮತಿಸಿದನು[4] – ಮತ್ತು ಅದು ಸರಿಯಾದದ್ದೇ, ಯಾಕೆಂದರೆ ಆತನು ದೇವರಾಗಿದ್ದಾನೆ (ಮತ್ತಾಯ 1:23; ಯೋಹಾನ 1:1). ಮರಿಯಳು ಪೂಜನೀಯ ಸ್ಥಾನಕ್ಕೆ ಮತ್ತು ಆರಾಧನೆಯ ಸ್ಥಾನಕ್ಕೆ ಏರಿಸಲ್ಪಡುವದಕ್ಕೆ ಯೋಗ್ಯಳೆಂಬದಾಗಿ ಆತನು ಪರಿಗಣಿಸಲಿಲ್ಲ. ಒಂದು ಸಂದರ್ಭದಲ್ಲಿ, ಮರಿಯಳ ಗರ್ಭವು ಮತ್ತು ಸ್ತನಗಳು ಯೇಸುವನ್ನು ಹೊತ್ತುಕೊಂಡು ಪೋಷಣೆ ಮಾಡಿದ್ದರಿಂದ ಅವುಗಳು

ಧನ್ಯವಾದವುಗಳೆಂದು ಹೇಳುವ ಮೂಲಕ ಜನರ ಗುಂಪಿನಲ್ಲಿದ್ದ ಒಬ್ಬ ಸ್ತ್ರೀಯು ಮರಿಯಳನ್ನು ಘನಪಡಿಸುವದಕ್ಕೆ ಪ್ರಯತ್ನಿಸಿದಳು. ಆತನು ಆಕೆಗೆ ಪ್ರತ್ಯುತ್ತರವಾಗಿ, "ಹಾಗನ್ನಬೇಡ, ದೇವರ ವಾಕ್ಯವನ್ನು ಕೇಳಿ ಅದಕ್ಕೆ ಸರಿಯಾಗಿ ನಡಕೊಳ್ಳುವವರೇ ಧನ್ಯರು" ಅಂದನು (ಲೂಕ 11:27, 28; ನೋಡಿರಿ ಮತ್ತಾಯ 12:48-50).

ಪೌಲನು 2:18ರಲ್ಲಿ ದೇವದೂತರಿಂದ ಆಚರಿಸಲ್ಪಡುವಂಥ ಆರಾಧನೆಯ ಕುರಿತು ಮಾತಾಡುತ್ತಿದ್ದನೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಇದರರ್ಥವು ದೇವದೂತರು ಇಂಥಿಂಥ ರೀತಿಯಲ್ಲಿ ಆರಾಧಿಸುತ್ತಾರೆಂದು ಅಂದುಕೊಂಡ ಸುಳ್ಳುಬೋಧಕರು ಆ ವಿಧದಲ್ಲಿಯೇ ಆರಾಧಿಸುವದಕ್ಕೆ ಪ್ರಯತ್ನಿಸುತ್ತಿದ್ದರು ಎಂದಾಗುತ್ತದೆ. ಈ ವಿವರಣೆಯಲ್ಲಿ ಇರುವ ಸಮಸ್ಯೆಯೆಂದರೆ ದೇವದೂತರು ಹೇಗೆ ಆರಾಧಿಸುತ್ತಾರೆಂಬುದು ಯಾರಿಗೂ ತಿಳಿಯದು. ಅಷ್ಟುಮಾತ್ರವಲ್ಲದೆ, ಜನರು ತಮ್ಮ ಆರಾಧನೆಯಲ್ಲಿ ದೇವದೂತರನ್ನು ಅನುಕರಣೆ ಮಾಡುವದಕ್ಕೆ ಪ್ರಯತ್ನಿಸುತ್ತಿದ್ದರೆಂಬ ಯೋಚನೆಯನ್ನು ಬೆಂಬಲಿಸುವಂಥ ಯಾವದೇ ಮಾಹಿತಿಯೂ ಲಭ್ಯವಿರುವದಿಲ್ಲ.

ದೇವದೂತರನ್ನು ಪೂಜಿಸುವಂಥ ಆಚರಣೆಯು ಲೈಕಸ್ ಕಣಿವೆಯಲ್ಲಿ ನಡೆಯುತ್ತಿದ್ದಾಗ್ಯೂ, ಕೊಲೊಸ್ಸೆಯವರು ದೇವದೂತರನ್ನು ಪೂಜಿಸದೆ ಇದ್ದಿರಬಹುದಾಗಿದೆ. ಅಸ್ಯ ಸೀಮೆಯುದ್ದಕ್ಕೂ ವ್ಯಾಪಕವಾಗಿ ಪ್ರಯಾಣಿಸಿರುವಂಥ, ನು ಕ್ರಿ.ಶ 182. ಮತ್ತು 188ರ ಮಧ್ಯದಲ್ಲಿ ಬರೆದದ್ದೇನೆಂದರೆ ಸಭೆಯು ದೇವದೂತರ ಆವಾಹಣೆಯನ್ನು ಮಾಡುತ್ತಿರಲಿಲ್ಲ ಎಂಬದೆ.[5] ನಂತರದಲ್ಲಿ, ಲವೊದಿಕೀಯದಲ್ಲಿ ನಡೆದ ಸಭಾಸಮ್ಮೇಳನ, ಕೆನೊನ್ (Canon) XXXV (ಕ್ರಿ.ಶ. 363) ಹೇಳಿದ್ದೇನೆಂದರೆ ದೇವದೂತರ ಆವಾಹಣೆ ಮಾಡುವದಕ್ಕೆ ಸಭೆಗೆ ಯಾವ ಅಧಿಕಾರವೂ ಇರಲಿಲ್ಲ ಎಂಬದೆ.[6] ಅಸ್ಯಸೀಮೆಯಲ್ಲಿ ದೊರಕಿದ ಶಿಲಾಶಾಸನಗಳ ಪ್ರಕಾರವಾಗಿ, ನಲ್ಲಿ ವಿಜಯವನ್ನು ಪ್ರಧಾನ ದೇವದೂತನಾದ ಮಿಕಾಯೇಲನಿಗೆ ಸಮರ್ಪಣೆ ಮಾಡಿದ ವೇಳೆಯಲ್ಲಿ, ಕ್ರಿ.ಶ. 739ರಷ್ಟು ತರುವಾಯದ ಕಾಲದಲ್ಲಿ ಸಹ ಆ ಪ್ರಾಂತ್ಯದಲ್ಲಿ ಮಿಕಾಯೇಲನ ಪೂಜೆಯು ಬಹಳ ವ್ಯಾಪಕವಾಗಿ ಮಾಡಲ್ಪಡುತ್ತಿತ್ತು. ಬಹಳ ಸಂಭಾವ್ಯವಾಗಿ ಮುಕ್ತಾಯಕ್ಕೆ ಬರಬಹುದಾದ್ದೇನೆಂದರೆ ದೇವದೂತರ ಪೂಜೆಯನ್ನು ಆರಂಭಿಸಬೇಡಿರೆಂದು ಪೌಲನು ಕೊಲೊಸ್ಸೆಯವರನ್ನು ಎಚ್ಚರಿಸುವದಕ್ಕೆ ಬರೆದನು ಎಂಬದೆ.

ಈ ಸನ್ನಿವೇಶದಲ್ಲಿ "ಆರಾಧನೆ" (θρησκεία, *thrēskeia*) ಎಂಬುದರ ಅರ್ಥವು "[ವಿಶೇಷವಾಗಿ] ಕುಪಂಥದ ಧಾರ್ಮಿಕ ವಿಧಿಯಂತೆ ವ್ಯಕ್ತಗೊಳ್ಳುವದರಿಂದ, ಇದು ಅತೀಂದ್ರಿಯ ಜೀವಿಗಳಿಗೆ ಭಕ್ತಿಯನ್ನು ವ್ಯಕ್ತಪಡಿಸುವಿಕೆ" ಎಂದಾಗಿರುತ್ತದೆ.[7] ಪೌಲನ ಬರಹಗಳಿಗೆ ಸಮಕಾಲೀನವಾದ ಸಾಹಿತ್ಯಗಳಲ್ಲಿ ಸಹ ಇದೇ ಪದವು ಕಂಡು ಬರುತ್ತದೆ. ಹೊಸ ಒಡಂಬಡಿಕೆಯಲ್ಲಿ ಈ ಪದವು ಕಾಣಿಸಿಕೊಳ್ಳುವ ಇನ್ನು ಒಂದೇ ಒಂದು ಸ್ಥಳದಲ್ಲಿ, ಇದು ಆರಾಧನೆಯಲ್ಲಿ ಯೆಹೂದಿ ಸಂಪ್ರದಾಯಗಳನ್ನು (ಅಪೊಸ್ತಲರ ಕೃತ್ಯಗಳು 26:5) ಮತ್ತು ದೇವರಿಗೆ ಮಾಡಲಾಗುವ ಸೇವೆಯನ್ನು (ಯಾಕೋಬ 1:26, 27) ಸೂಚಿಸುತ್ತಾ "ಧರ್ಮ" ಎಂದು ಅನುವಾದಿಸಲ್ಪಟ್ಟಿದೆ. ಇದು ಕುಪಂಥದ ಸಂಸ್ಕಾರಗಳ ಆಚರಣೆಯಲ್ಲಿನ ಧಾರ್ಮಿಕ ನೇಮನಿಷ್ಠೆಗಳ ಆಚಾರಗಳೆಂದು ಸಹ ಅರ್ಥವನ್ನು ಕೊಡಬಲ್ಲದು. ವಿಗ್ರಹಾರಾಧನ ಜನಾಂಗದ ಆಚಾರಗಳಲ್ಲಿ ತೊಡಗಿಸಿಕೊಳ್ಳುವದರ ಮೂಲಕ ದೇವದೂತರಿಗೆ ವಿಶೇಷ ಗೌರವವನ್ನು ಸಲ್ಲಿಸಬಾರದೆಂದು ಪೌಲನು ಕೊಲೊಸ್ಸೆಯವರನ್ನು

ಎಚ್ಚರಿಸಿದನು. ಬೇರೆಯವರು ಅಂಥ ಆಚಾರಗಳಲ್ಲಿ ತೊಡಗಿಸಿಕೊಳ್ಳಬಹುದು; ಆದರೆ, ಜನಸಮೂಹವನ್ನು ಹಿಂಬಾಳಿಸುವದರ ಬದಲಾಗಿ, ಕೊಲೊಸ್ಸೆಯವರು ಯೇಸುವಿಗೇ ನಿಷ್ಠೆಯಿಂದ ಉಳಿಯಬೇಕಾಗಿತ್ತು.

ಕ್ರೈಸ್ತರು ಸರಿಯಾದ ವ್ಯಕ್ತಿಯನ್ನು, ಅಂದರೆ ದೇವರನ್ನು ಆರಾಧಿಸತಕ್ಕದ್ದು ಮಾತ್ರವೇ ಆಗಿರಲಿಲ್ಲ, ಆದರೆ ಅವರು ಯೇಸುವಿನ ಮೂಲಕ ಪ್ರಕಟಗೊಳಿಸಲ್ಪಟ್ಟ ಸತ್ಯಕ್ಕನುಗುಣವಾಗಿ ಸಹ ಆರಾಧಿಸಬೇಕಾಗಿತ್ತು (ಯೋಹಾನ 1:17; 4:23, 24; 8:31, 32). ಪೌಲನು ಖಂಡನೆ ಮಾಡಿದಂಥ ದೇವದೂತರ ಆರಾಧನೆಯು ಆರಾಧನೆಯಲ್ಲಿರಬೇಕಾಗಿದ್ದ ಇವೆರಡು ಅಂಶಗಳಲ್ಲಿ ಒಂದನ್ನೂ ಒಳಗೊಂಡಿರಲಿಲ್ಲ.

## "ತಮಗೆ ದರ್ಶನಗಳಾದವೆಂದು ಕೊಚ್ಚಿಕೊಳ್ಳುತ್ತಾರೆ"

ಮುಂದಿನ ಎಚ್ಚರಿಕೆಯು **ತಮಗೆ ದರ್ಶನಗಳಾದವೆಂದು ಕೊಚ್ಚಿಕೊಳ್ಳುವ** ಯಾವದೇ ಬೋಧಕನ ಕುರಿತಾಗಿತ್ತು. ಈ ಪದಗುಚ್ಛದ ನಿಖರವಾದ ಅರ್ಥವು ಅನಿಶ್ಚಿತವಾಗಿರುತ್ತದೆ. ಇದು "ತಾನು ನೋಡದಿರುವಂಥವುಗಳಲ್ಲಿ ಬಲವಂತವಾಗಿ ನುಗ್ಗುವ" (KJV; ನೋಡಿರಿ NKJV);[8] "ತಾನು ನೋಡಿದ ಸಂಗತಿಗಳಲ್ಲಿಯೇ ಮಗ್ನನಾಗಿವವನು" (ASV); "ದರ್ಶನಗಳ ವಿಷಯದಲ್ಲಿ ತನ್ನ ನಿಲುವು ತೆಗೆದುಕೊಳ್ಳುವದು"; "ದರ್ಶನಗಳಲ್ಲಿ ಮಗ್ನನಾಗಿರುವವನು"(NRSV); "ತಾನು ನೋಡಿದವುಗಳ ಬಗ್ಗೆ ಬಹು ವಿಸ್ತಾರವಾಗಿ ವಿವರಿಸುವವನು" (NIV; ನೋಡಿರಿ TNIV); "ಸ್ವತಃ ತಮ್ಮದೇ ಆಗಿರುವ ಒಂದು ದರ್ಶನದಲ್ಲಿ ಪ್ರವೇಶಿಸಲು ಪ್ರಯತ್ನಿಸುವವರು" (NEB); ಮತ್ತು "ಯಾವದೋ ದರ್ಶನಾತ್ಮಕ ಜಗತ್ತಿನೊಳಗೆ ಪ್ರವೇಶಿಸುವದು . . . ಒಳಹೋಗುವದು" (REB) ಎಂದು ಅನುವಾದಿಸಲ್ಪಟ್ಟಿರುತ್ತದೆ. ಬಹುಪಾಲು ಅನುವಾದಕರು "ತಾನು ನೋಡಿದ ದರ್ಶನಗಳಲ್ಲಿಯೇ ಮಗ್ನನಾಗಿರುವವನು" ಎಂಬ ಪದವಿನ್ಯಾಸಕ್ಕೆ ಒಲವು ತೋರುತ್ತಾರೆ.

"ಕೊಚ್ಚಿಕೊಳ್ಳುತ್ತಾರೆ" ಎಂಬುದನ್ನು ಅನುವಾದಿಸಿರುವ ಪದ (ἐμβατεύω, *embateuō*) ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, ಅದು "ಒಳ ಪ್ರವೇಶಿಸು" ಎಂದರ್ಥವನ್ನು ಕೊಡುತ್ತದೆ. ಈ ಪದದ ಕುರಿತು ಶಬ್ದಕೋಶವು ಈ ವ್ಯಾಖ್ಯೆಗಳನ್ನು ನೀಡುತ್ತದೆ: ". . . ಸೂಕ್ಷ್ಮವಾಗಿ ಪರಿಶೀಲಿಸು, ಒಂದು [ವಿಷಯವನ್ನು] ಸೂಕ್ಷ್ಮವಾಗಿ ಪರಿಶೀಲಿಸುವದಕ್ಕಾಗಿ ಅದ*ರೊಳಗೆ ಪ್ರವೇಶಿಸು*, ವಿವರವನ್ನು ಪಡೆ . . . , ಆದ್ದರಿಂದ ಕೊಲೊಸ್ಸೆ 2:18ರಲ್ಲಿ [ಬಹುಶಃ] ಒಬ್ಬನು ತಾನು ಒಂದು ದರ್ಶನದಲ್ಲಿ ಕಂಡದ್ದರ ಬಗ್ಗೆ ಬಹಳ ಸುದೀರ್ಘವಾಗಿ ಪ್ರವೇಶಿಸುವದು . . . ಮತ್ತು ಹೀಗೆ ಪರಲೌಕಿಕ ಸಂದೇಶಕರ ಬಳಿಗೆ ಅನುಸರಿಸಿದ ದಾರಿಯನ್ನು ಸಮರ್ಥಿಸಿಕೊಳ್ಳುವವರಾಗಿದ್ದಾರೆ."[9]

William M. Ramsayನು Klarosದಲ್ಲಿನ ದೇವಾಲಯದಲ್ಲಿ ಎರಡನೆಯ ಶತಮಾನಕ್ಕೆ ಸೇರಿದ ಒಂದು ಕೆತ್ತನೆಯ ಬರಹವನ್ನು ಕಂಡುಕೊಂಡನು.[10] ಅದು ಗ್ರೀಕ್ ಪದವಾದ *embateuō* ಎಂಬುದನ್ನು ಒಳಗೊಂಡಿತ್ತು, ಅದು ನಿಗೂಢ ಕುಪಂಥದ ಒಂದು ಧಾರ್ಮಿಕ ಅನುಭವದೊಳಗೆ ಪ್ರವೇಶಿಸುವದನ್ನು ಸೂಚಿಸುವದಕ್ಕೆ ಬಳಸಲ್ಪಡುವ ಪದವಾಗಿತ್ತು. 18 ವಚನದಲ್ಲಿರುವ ಅರ್ಥವು ಇದೇ ಆಗಿರುವದಾದರೆ, ಕುಪಂಥೀಯ ಧಾರ್ಮಿಕ ಅನುಭವಗಳ ಮೂಲಕ ಹೊಂದಿಕೊಳ್ಳಲಾದ ದರ್ಶನಗಳಿಂದ ದಾರಿತಪ್ಪಿಸಲ್ಪಡದಂತೆ ಇರಬೇಕೆಂದು ಪೌಲನು ಎಚ್ಚರಿಸಿದನೆಂದಾಗುತ್ತದೆ. ಇದು

ಸಲಹೆಗಾರರಾಗಿ ನಡೆದುಕೊಳ್ಳು, ಸತ್ತವರೊಂದಿಗೆ ಸಂಪರ್ಕ ಸಾಧಿಸುತ್ತೇವೆಂದು ಹೇಳಿಕೊಳ್ಳುವ ಜನರು, ಅಥವಾ ಭವಿಷ್ಯದಲ್ಲಿ ನಡೆಯುವ ಘಟನೆಗಳ ಬಗ್ಗೆ ಅಂತರ್ದೃಷ್ಟಿ ಹೊಂದಿದ್ದೇವೆಂದು ಹೇಳಿಕೊಳ್ಳುವ, ಆಧುನಿಕ ಮಧ್ಯಮಗಳ ವಿರುದ್ಧವಾಗಿ ಸಹ ಇದೊಂದು ಎಚ್ಚರಿಕೆಯಾಗಿರಬಲ್ಲದು.

ಉಳಿದಿರುವ ಪ್ರಶ್ನೆಗಳೆಂದರೆ "ಈ ದರ್ಶನಗಳನ್ನು ಹೇಗೆ ಹೊಂದಲಾಗುತ್ತಿತ್ತು?" ಮತ್ತು "ಅವುಗಳನ್ನು ಯಾರು ಹೊಂದಿಕೊಂಡರು?" ಬಹುಶಃ ಪೌಲನು ಮುಂದಿನ "ದೇವದೂತರ ಪೂಜೆ" ಎಂಬ ಪದಗುಚ್ಛಕ್ಕೆ ಸಂಬಂಧ ಪಟ್ಟಂತೆ "ದರ್ಶನಗಳು" ಎಂಬುದನ್ನು ಪ್ರಸ್ತಾಪಿಸಿರಬೇಕು. ಹಾಗಿರುವದಾದಲ್ಲಿ, ದೇವದೂತರಂತಹ ಪರಲೌಕಿಕ ಜೀವಿಗಳ ಮೂಲಕ ತಮಗೆ ದರ್ಶನಗಳಾದವೆಂದು ಹೇಳುವ ವಂಚಕರ ಆ ದರ್ಶನಗಳಲ್ಲಿ ಭರವಸೆ ಇಡಬೇಡಿರೆಂದು ಪೌಲನು ಕೊಲೊಸ್ಸೆಯವರನ್ನು ಎಚ್ಚರಿಸುತ್ತಿದ್ದಾನೆಂದಾಗುತ್ತದೆ. ಇಂಥ ದರ್ಶನಗಳ ಕಾರಣದಿಂದ ಈ ವಂಚಕರು ತಮ್ಮನ್ನು ಬೇರೆಯವರಿಗಿಂದ ಆತ್ಮೀಕವಾಗಿ ಉನ್ನತರೆಂದು ಭಾವಿಸಿಕೊಂಡಿದ್ದರು, ಆದರೆ ಈ ಭಾವಗಳನ್ನು ಮಿಥ್ಯ ವಿನಯತೆಯಿಂದ ಮರೆಮಾಡಿಕೊಂಡಿದ್ದರು. ಅವರನ್ನು ಬಹಳ ಧಾರ್ಮಿಕವಾದವರೆಂದು ಕಾಣುತ್ತಿದ್ದ ಇತರರಿಂದ ತಮಗೆ ಅಂಥ ವಿನಯತೆಯು ಪ್ರಶಂಸೆಯನ್ನುಂಟು ಮಾಡುವದೆಂದು ನಂಬಿದ್ದರು.

ಅವರು ಈ ದರ್ಶನಗಳ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದದ್ದು ಬೇರೆಯವರ ದೃಷ್ಟಿಯಲ್ಲಿ ಘನವನ್ನು ಹೊಂದಬೇಕೆಂಬದಕ್ಕಾಗಿ ಮಾತ್ರ, ಆದರೆ ತಮ್ಮ ಬೋಧನೆಗೆ ಒಂದು ಪ್ರಾಮಾಣೀಕರಣವನ್ನು ಒದಗಿಸುವದಕ್ಕೆ ಸಹ ಆಗಿತ್ತು. ಬೇರೆಯವರಲ್ಲಿ ತಮ್ಮ ಸಂದೇಶಗಳು ದೇವರಿಂದಲೇ ಕೊಡಲ್ಪಟ್ಟವುಗಳೆಂಬ ಭಾವನೆಯುಂಟು ಮಾಡುವ ಮೂಲಕ, ಅವರು ತಮಗೆ ಅತ್ಯುನ್ನತವಾದ, ಅಧಿಕಾರಯುಕ್ತ ಜ್ಞಾನವಿದೆ ಎಂದು ಹೇಳಿಕೊಳ್ಳುತ್ತಿದ್ದರು. ಪರಲೋಕದ ರಹಸ್ಯಗಳ ಕುರಿತು ಬೇರೆಯವರಿಗೆ ಇಲ್ಲದಂಥ ಜ್ಞಾನವನ್ನು ಈ ದರ್ಶನಗಳು ತಮಗೆ ನೀಡಿರುತ್ತವೆಂದು ಭಾವಿಸಿಕೊಂಡಿದ್ದರಿಂದ ಅವರು ಗರ್ವದಿಂದ ಉಬ್ಬಿಕೊಂಡಿದ್ದರು.

ಸುಳ್ಳು ದರ್ಶನಗಳು ಹೊಸದೇನಾಗಿರಲಿಲ್ಲ. ಸುಳ್ಳು ಪ್ರವಾದಿಗಳ ಕುರಿತು ದೇವರು ಹೇಳುವ ಮಾತನ್ನು ಯೆರೆಮೀಯನು ಹೀಗೆ ಬರೆದಿಟ್ಟಿರುತ್ತಾನೆ: "ನನಗೆ ಕನಸು ಬಿತ್ತು, ಕನಸು ಬಿತ್ತು ಎಂದು ನನ್ನ ಹೆಸರಿನಿಂದ ಸುಳ್ಳಾಗಿ ಪ್ರವಾದಿಸುವ ಪ್ರವಾದಿಗಳ ನುಡಿಯನ್ನು ಕೇಳಿದ್ದೇನೆ" (ಯೆರೆಮೀಯ 23:25). ಅವರು ವಾಸ್ತವದಲ್ಲಿ, ಏನನ್ನೂ ಕಂಡಿರದಿದ್ದಾಗ್ಯೂ, ಏನೋ ಕಂಡಿದ್ದೇವೆಂದು ಹೇಳಿಕೊಳ್ಳುತ್ತಿದ್ದರು.

ಪೌಲನು ಕಂಡ ಪರಲೌಕಿಕ ದರ್ಶನವು ಇವುಗಳಿಗಿಂತ ವ್ಯತ್ಯಾಸವಾಗಿತ್ತು. ಆತನು ಮೂರನೆಯ ಆಕಾಶಕ್ಕೆ ಒಯ್ಯಲ್ಪಟ್ಟನು ಮತ್ತು "ಮನುಷ್ಯರು ನುಡಿಯಲಶಕ್ಯವಾದ ಹೇಳಬಾರದ ಮಾತುಗಳನ್ನು" ಕೇಳಿಸಿಕೊಂಡನು, ಇವುಗಳನ್ನು ಆತನು ಬೇರೆಯವರೊಂದಿಗೆ ಹಂಚಿಕೊಳ್ಳಲು ಸಾಧ್ಯವಿರಲಿಲ್ಲ. ಆತನು ಅಷ್ಟೊಂದು ದರ್ಶನಗಳನ್ನು ಹೊಂದಿಕೊಂಡಿದ್ದನಾದ್ದರಿಂದ, ಆತನು ತನ್ನ ಅನುಭವಗಳ ನಿಮಿತ್ತದಿಂದ ಅತಿ ಗರ್ವಿಷ್ಠನಾಗದಿರುವದಕ್ಕೋಸ್ಕರ, ಸೈತಾನನಿಂದ ಆತನಿಗೆ ಶರೀರದಲ್ಲಿ ಒಂದು ಶೂಲ ಕೊಡಲ್ಪಟ್ಟಿತು (2 ಕೊರಿಂಥ 12:1-7). ದೇವರು ತನ್ನ ಮೂಲಕವಾಗಿ ಕಾರ್ಯ

ಮಾಡುತ್ತಿದ್ದಾನೆಂಬ ಕಾರಣಕ್ಕಾಗಿ ಉಬ್ಬಿಹೋಗುವ ಬದಲಾಗಿ, ದೇವರ ಸಂದೇಶಕನು ದೀನಭಾವದಿಂದಿರತಕ್ಕದ್ದು.

ಒಂದು ಪ್ರಶ್ನೆಯಂತೂ ಉತ್ತರಿಸುವದಕ್ಕೆ ಸುಲಭವಾಗಿರುವದಿಲ್ಲ: ಈ ಸುಳ್ಳು ಬೋಧಕರು ನಿಜವಾಗಿಯೂ ಏನೋ ನೋಡಿದ್ದರೋ, ಅವರು ಭ್ರಮೆಗೊಂಡಿದ್ದರೋ, ಅಥವಾ ಏನೂ ನೋಡದಿದ್ದಾಗ್ಯೂ ದರ್ಶನಗಳಾದವೆಂದು ಸುಳ್ಳು ಹೇಳಿದ್ದರೋ? ಅವರು ದರ್ಶನಗಳನ್ನು ಕಂಡಿದ್ದರೆ, ಅವರು ಹೇಳಿದ್ದೆಲ್ಲವೂ ಸತ್ಯವಾಗಿರಬಹುದು, ಆದರೆ ಅವರ ಅನ್ವಯಿಕೆಯು ದೇವರಿಂದ ಪ್ರಕಟನೆಯಾಗಿರುವದನ್ನು ಪ್ರತಿಫಲನಗೊಳಿಸುವದಿಲ್ಲ. ತಮ್ಮ ಕನಸುಗಳ ಬಗ್ಗೆ ಮಾತಾಡಿದ ಸುಳ್ಳು ಪ್ರವಾದಿಗಳ ವಿಷಯವಾಗಿ ಯೆರೆಮೀಯನು ಮಾತಾಡುತ್ತಾ, ಇವುಗಳು ಅವರ "ಸ್ವಹೃದಯಕಲ್ಪಿತ ಮೋಸಗಳು" ಎಂದು ಕರೆಯುತ್ತಾನೆ (ಯೆರೆಮೀಯ 23:25, 26).

ಇವರು ಭ್ರಮೆಗೊಳಗಾಗಿದ್ದಲ್ಲಿ, ವಾಸ್ತವಿಕತೆಯ ಆಕರ್ಷಕವಾದ ಅರ್ಥದಿಂದ ಕೂಡಿದ ಸುಳ್ಳು ಗ್ರಹಿಕೆಗಳಾಗಿದ್ದಲ್ಲಿ, ಆವುಗಳನ್ನು ನೋಡಿದ ಜನರಿಗೆ ಅವುಗಳು ನಿಜವೆಂಬಂತೆ ತೋರುವವು. ಹೇಗೂ, ಅವರು ದೇವರಿಂದ ಬಂದ ಸತ್ಯವನ್ನೊಳಗೊಂಡಿರಲಾರವು. ಈ ಜನರು ದರ್ಶನಗಳಾದವೆಂದು ಸುಳ್ಳು ಹೇಳುವವರಾಗಿದ್ದಲ್ಲಿ, ಅವರು ತಮ್ಮನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ಮತ್ತು ಹಿಂಬಾಲಕರನ್ನು ಆಕರ್ಷಿಸುವದಕ್ಕಾಗಿ ಅವುಗಳನ್ನು ದೇವರಿಂದ ಬಂದ ನಿಜ ಸಂದೇಶಗಳೆಂದು ಬಣ್ಣಿಸುತ್ತಿದ್ದರೆಂದಾಗುತ್ತದೆ. ನಿಜವೋ ಅಥವಾ ನಿಜವಲ್ಲವೋ, ಈ ಕಲ್ಪಿಸಿಕೊಂಡ ದರ್ಶನಗಳು ದೈವಿಕವಾಗಿ ಕೊಡಲ್ಪಟ್ಟವುಗಳಾಗಿರಲಿಲ್ಲ. ಈ ಬೋಧನೆಗಳಿಗೆ ದೇವರು ಮೂಲನಾಗಿರಲಿಲ್ಲ, ಮತ್ತು ಕೊಲೊಸ್ಸೆಯವರು ಅವುಗಳಿಂದ ದಾರಿ ತಪ್ಪಿಸಲ್ಪಡದಿರಬೇಕಿತ್ತು.

ತರುವಾಯದ ಶತಮಾನಗಳಲ್ಲಿ ಕೆಲವರು ತಮ್ಮ ಕಲ್ಪಿಸಿಕೊಂಡ ದರ್ಶನಗಳ ಆಧಾರದಲ್ಲಿ ಹೊಸ ಧರ್ಮಗಳನ್ನು ಸ್ಥಾಪನೆಗೊಳಿಸಿರುತ್ತಾರೆ: ಮಹಮ್ಮದ; ಮೊರ್ಮೊನಿಜಮ್ ಸ್ಥಾಪಕನಾದ ಜೋಸೆಫ್ ಸ್ಮಿತ್; ಸೆವೆಂತ್ ಡೇ ಅಡ್ವೆಂಟಿಜಮ್ ಸ್ಥಾಪಿಸಿರುವ ಎಲ್ಲೇನ್ ಜಿ. ವೈಟ್; ಮತ್ತು ಇನ್ನು ಹಲವರು. ಅವರು ಕಂಡ ಕೆಲವು ದರ್ಶನಗಳು ತಮ್ಮೊಂದಿಗೆ ದೇವರು, ಯೇಸು, ಅಥವಾ ದೇವದೂತರು ಮಾತಾಡಿದರೆಂಬುದನ್ನು ಒಳಗೊಂಡಿರುತ್ತವೆ. ಯೇಸುವು ನಿಜವಾಗಿಯೂ ಕಾಣಿಸಿಕೊಳ್ಳುವದು ಇನ್ನು ಮೇಲೆ ಸಂಭವಿಸುತ್ತಿರುವದಿಲ್ಲ, ಯಾಕೆಂದರೆ ಪೌಲನು ಕೊರಿಂಥದವರಿಗೆ ಆತನು "ಕಟ್ಟಕಡೆಗೆ"[11] ತನಗೆ ಕಾಣಿಸಿಕೊಂಡನೆಂದು ಭರವಸೆಯನ್ನು ನೀಡುತ್ತಾನೆ (1 ಕೊರಿಂಥ 15:8). ಆತನು ಕಡೇ ದಿನದಲ್ಲಿ ಹಿಂದಿರುಗಿ ಬರುವ ತನಕ ಇದು ಇನ್ನೆಂದಿಗೂ ಸಂಭವಿಸುವದಿಲ್ಲ.

ಕಣಿಹೇಳುವವರು ಮತ್ತು ಅತೀಂದ್ರಿಯ ಆಚಾರಗಳಲ್ಲಿ ತೊಡಗಿರುವ ಕೆಲವರು ತಮಗೆ ದರ್ಶನಗಳಾದವೆಂದು ಹೇಳಿಕೊಳ್ಳುತ್ತಾರೆ. ಕ್ರೈಸ್ತರು ಎಲ್ಲಾ ಬೋಧನೆಗಳನ್ನು ಹೊಸ ಒಡಂಬಡಿಕೆಯಲ್ಲಿರುವ ಬರಹಗಳ ಮೂಲಕ ಪರೀಕ್ಷಿಸಬೇಕು (ನೋಡಿರಿ 1 ಯೋಹಾನ 4:1, 6). ಹೀಗೆ ಮಾಡುವದರಿಂದ, ಈ ರೀತಿಯ ದರ್ಶನಗಳು ಮತ್ತು ಪ್ರಕಟನೆಗಳಿಂದ ದಾರಿ ತಪ್ಪಿಸಲ್ಪಡುವದರಿಂದ ದೂರವಿರುತ್ತೇವೆ. ಒಬ್ಬ ಬೋಧಕನು ಸತ್ಯವನ್ನು ಬೋಧಿಸುತ್ತಿದ್ದಾನೋ ಅಥವಾ ತಪ್ಪನ್ನು ಬೋಧಿಸುತ್ತಿದ್ದಾನೋ ಎಂಬುದನ್ನು

ಅರಿತುಕೊಳ್ಳುವೆವು.

## “ಪ್ರಾಪಂಚಿಕ ಬುದ್ಧಿಯಿಂದ ನಿರಾಧಾರವಾಗಿ ಉಬ್ಬಿಕೊಂಡಿದ್ದಾರೆ”

ಕೆಲವು ಸುಳ್ಳು ಬೋಧಕರು ವಿನಯರಾಗಿರುವಂತೆ ನಟಿಸಿದರೆ, ಇನ್ನು ಕೆಲವರು **ಉಬ್ಬಿಕೊಂಡಿದ್ದರು** (φυσιόω, *phusioō*), ಅಹಂಕಾರದಿಂದ ತುಂಬಿದ್ದರು. ವರ್ತಮಾನಕಾಲ ಕೃದಂತ ಗ್ರೀಕ್ ಕ್ರಿಯಾಪದವು ನಿರಂತರವಾದ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ, ಅದು ರೂಢಿಯಾದ ಗರ್ವದ ಭಾವ ಎಂದಾಗಿರುತ್ತದೆ. ಅಷ್ಟೊಂದು ಗರ್ವದಿಂದ ಮೀರಿ ಹೋಗಿದ್ದವರು ತಮ್ಮನ್ನು ಆ ರೀತಿ ಉನ್ನತವಾಗಿ ಭಾವಿಸಿಕೊಳ್ಳುವದಕ್ಕೆ ಯಾವ ಕಾರಣವೂ ಇರಲಿಲ್ಲ. ಬೇರೊಂದು ಕಡೆಯಲ್ಲಿ, ಪೌಲನು ಕೊರಿಂಥದವರಿಗೆ ಬರೆಯುವಾಗ ಮಾತ್ರವೇ, “ಉಬ್ಬಿಕೊಳ್ಳು,” ಅಥವಾ “ಅಹಂಕಾರ” ಎಂಬ ಪದ ಬಳಸಿರುತ್ತಾನೆ. (ನೋಡಿರಿ 1 ಕೊರಿಂಥ 4:6, 18, 19; 5:2; 8:1; 13:4.) ಆತನು ಅವರಿಗೆ “ಜ್ಞಾನವು ಉಬ್ಬಿಸುತ್ತದೆ [φυσιοῖ, *phusioi,* ಗರ್ವದಿಂದ ಉಬ್ಬಿಕೊಳ್ಳುವದು], ಆದರೆ ಪ್ರೀತಿಯು ಭಕ್ತಿವೃದ್ಧಿಯನ್ನುಂಟುಮಾಡುತ್ತದೆ” (1 ಕೊರಿಂಥ 8:1).

ದರ್ಶನಗಳಾಗಿವೆಯೆಂದು ಹೇಳಿಕೊಳ್ಳುವವರಿಗೆ ಅನಾವಶ್ಯಕವಾದ ಗೌರವ ಮತ್ತು ಘನತೆಯು ಕೊಡಲ್ಪಟ್ಟಿದ್ದರಿಂದ, ಯೇಸುವಿನ ಬೋಧನೆಗಿಂತಲೂ ಹೆಚ್ಚಾಗಿ ಅವರ ಬೋಧನೆ ಅಂಗೀಕೃತವಾಗುವಂತಾಗಿತ್ತು. ಯೇಸುವನ್ನು ಬದಿಗೊತ್ತಿ ಸುಳ್ಳು ಬೋಧಕರನ್ನು ಹಿಂಬಾಲಿಸುವಂತಾಗುವದೆಂದು ಚಿಂತಿತನಾದ ಕಾರಣ, ಪೌಲನು ಅವರಿಗೆ ಎಚ್ಚರಿಕೆಯನ್ನು ನೀಡುತ್ತಾನೆ. ಕೊಲೊಸ್ಸೆಯವರನ್ನು ಸಮೃದ್ಧಿಗೊಳಿಸುವದರ ಬದಲಾಗಿ, ಈ ದರ್ಶನಗಳು ಅವರನ್ನು ನಿರ್ಗತಿಕರನ್ನಾಗಿ ಮಾಡುವಂಥವುಗಳಾಗಿದ್ದವು. ಸುಳ್ಳು ಬೋಧಕರು ಅವರನ್ನು ಜ್ಞಾನ ಮತ್ತು ತಿಳುವಳಿಕೆಯ ನಿಜವಾದ ಮೂಲದಿಂದ (2:3) ವಿಮುಖಗೊಳಿಸಿ, ಮನುಷ್ಯ ಕಲ್ಪಿತ ನಿರರ್ಥಕವಾದ ಯೋಚನೆಗಳ ಕಡೆಗೆ ನಡಿಸುವವರಾಗದ್ದರು. ನಿಜ ಆತ್ಮೀಕ ಬೆಳವಣಿಗೆಯು ಯೇಸುವಿನಿಂದ ಬರುತ್ತದೆಯೇ ಹೊರತು ಮನುಷ್ಯನ ಬುದ್ಧಿಯಿಂದ ರಚಿಸಲ್ಪಟ್ಟ ದಾರಿಗಳಿಂದಲ್ಲವಾದ್ದರಿಂದ, ಅವರು ನಷ್ಟವನ್ನು ಅನುಭವಿಸಲಿದ್ದರು (ಯೆರೆಮೀಯ 10:23).

ಈ ವಚನದಲ್ಲಿ ವಿರುದ್ಧ ಹೋಲಿಕೆಯು ಸ್ಪಷ್ಟವಾಗಿ ಕಾಣುತ್ತದೆ. ಪೌಲನು ಇಲ್ಲಿ ಹೊರಗೆ ಮಾತ್ರ ಅತಿವಿನಯದ ಮುಖವಾಡ ಧರಿಸಿಕೊಂಡಿದ್ದಂಥ, ಆದರೆ ಒಳಗಡೆಯಲ್ಲಿ ಗರ್ವದಿಂದ ಉಬ್ಬಿಹೋಗಿದ್ದ ಜನರ ಬಗ್ಗೆ ಎಚ್ಚರಿಸುತ್ತಿದ್ದಾನೆ. ಅವರ ಉಬ್ಬಿದ ಮನಸ್ಸುಗಳಿಗೆ ಅಂಥ ಅಹಂಕಾರ ಪಟ್ಟುಕೊಳ್ಳಲು ಯಾವ ಕಾರಣವೂ ಇರಲಿಲ್ಲ ಯಾಕೆಂದರೆ ಅವರು ಸುಳ್ಳು ದರ್ಶನಗಳ ಮೇಲೆ ಅವಲಂಭಿತರಾಗಿದ್ದರು. ಇವುಗಳು ಅವರಲ್ಲಿ ನಿರಾಧಾರವಾದ ಸ್ವಪ್ರತಿಷ್ಠೆಯನ್ನು ಒದಗಿಸಿದವು ಮತ್ತು ಅಸಮರ್ಥನೀಯವಾಗಿ ಗರ್ವಪಟ್ಟುಕೊಳ್ಳುವಂತೆ ಮಾಡಿದ್ದವು.

ಆದರೆ ಕ್ರೈಸ್ತರಾದರೋ, ತಾವು ಯೇಸುವಿನ ಮೂಲಕವಾಗಿ ಹೊಂದಿಕೊಂಡಿರುವಂಥವುಗಳಲ್ಲಿ ಭರವಸೆಯನ್ನು ಇಟ್ಟುಕೊಳ್ಳಬಹುದು. ಪೌಲನು ಹೀಗೆ ಬರೆಯುತ್ತಾನೆ,

> ನಾವು ಕೇವಲ ಮಾನುಷಜ್ಞಾನವನ್ನು ಬಳಸದೆ ದೇವರ ಕೃಪೆಯನ್ನು ಆಶ್ರಯಿಸಿ

> ಆತನಿಂದಾಗುವ ಪವಿತ್ರತ್ವವೂ ನಿಷ್ಕಪಟತ್ವವೂ ಉಳ್ಳವರಾಗಿ ಈ ಲೋಕದಲ್ಲಿ ಮುಖ್ಯವಾಗಿ ನಿಮ್ಮ ವಿಷಯದಲ್ಲಿ ನಡಕೊಂಡೆವೆಂದು ನಮ್ಮ ಮನಸ್ಸು ಸಾಕ್ಷಿಹೇಳುತ್ತದೆ; ಇದೇ ನಮಗಿರುವ ಉಲ್ಲಾಸ (2 ಕೊರಿಂಥ 1:12).

ಕ್ರೈಸ್ತರು ಯೇಸುವಿನ ವಿಷಯದಲ್ಲಿ ಮತ್ತು ಆತನು ತನ್ನ ಹಿಂಬಾಲಕರಿಗೆ ಸಾಧ್ಯಗೊಳಿರುವ ಜೀವದ ವಿಷಯದಲ್ಲಿ ಗರ್ವ ಪಡಬೇಕೇ, ಹೊರತು ನಾಚಿಕೆ ಪಡಬಾರದು. ಅಂಥ ಗರ್ವವು ಸಮರ್ಥನೀಯವಾದದ್ದು ಯಾಕೆಂದರೆ ಅದು ಒಬ್ಬನ ಸಾಧನೆಗಳಲ್ಲಿ ಹಾಗೂ ಸಾಮರ್ಥ್ಯಗಳಲ್ಲಿ ಇಡಲ್ಪಟ್ಟದ್ದಾಗಿರದೆ, ಯೇಸು ಮಾಡಿರುವ ಕಾರ್ಯದಲ್ಲಿ ಹಾಗೂ ದೇವರ ಕೃಪೆಯಲ್ಲಿ ಇಡಲ್ಪಟ್ಟಿರುತ್ತದೆ. ಕ್ರಿಸ್ತನ ಹಿಂಬಾಲಕನಿಗೆ ಈ ಎಚ್ಚರಿಕೆ ಕೊಡಲ್ಪಟ್ಟಿರುತ್ತದೆ "ಯಾರೂ ತನ್ನ ಯೋಗ್ಯತೆಗೆ ಮೀರಿ ಭಾವಿಸಿಕೊಳ್ಳಬಾರದು" (ರೋಮಾ 12:3).

ಆತ್ಮೀಕ ಮನಸ್ಸುಳ್ಳ ಕ್ರೈಸ್ತರು ಅಂತಹ ನಿರಾಧಾರವಾದ ಗರ್ವದಿಂದ ಮುಕ್ತರಾಗಿರತಕ್ಕದ್ದು, ಅದು ಶಾರೀರಿಕಭಾವವುಳ್ಳ ಜನರ ಒಂದು ಗುಣವಾಗಿರುತ್ತದೆ. ಮಾನವ ಶರೀರವು ಅಂತಹ ಕೆಟ್ಟದ್ದೇನೂ ಅಲ್ಲ ಎಂಬದಾಗಿ Eduard Schweizer ಸರಿಯಾಗಿಯೇ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.[12] ಸ್ವತಃ ಮಾನವ ಶರೀರವು ಕೆಟ್ಟದ್ದೂ ಅಲ್ಲ ಒಳ್ಳೇದೂ ಅಲ್ಲ. ಕೊಲೊಸ್ಸೆಯಲ್ಲಿ ದೇವರ ಪ್ರಕಟನೆಯನ್ನಲ್ಲದೆ, ಮನುಷ್ಯ ಜ್ಞಾನದ ಮೇಲೆ ಭರವಸೆಯೊಂದಿಗೆ ಅವಲಂಭನೆ ಮಾಡಿಕೊಳ್ಳುತ್ತಿದ್ದವರ ಸಮಸ್ಯೆಯನ್ನು ಉದ್ದೇಶಿಸಿ ಮಾತಾಡುತ್ತಿದ್ದಾನೆ. ಕೊರಿಂಥದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ, ಆತನು ದೇವರ ಮನಸ್ಸನ್ನು ಅರಿತುಕೊಳ್ಳುವದಕ್ಕೆ ಮನುಷ್ಯ ಜ್ಞಾನವು ಪಡುವ ವ್ಯರ್ಥ ಪ್ರಯತ್ನದ ಬಗ್ಗೆ ಎತ್ತಿ ತೋರಿಸುತ್ತಾನೆ (1 ಕೊರಿಂಥ 1:20, 21). ದೇವರು ಕೊಡುವ ವಿಶೇಷ ಪ್ರಕಟನೆಯ ಮೂಲಕ ಮಾತ್ರವೇ ಆತನ ಮನಸ್ಸನ್ನು ತಿಳಿದುಕೊಳ್ಳಲು ಸಾಧ್ಯವಿರುತ್ತದೆ (1 ಕೊರಿಂಥ 2:10-16).

**ಶಾರೀರಕ ಮನಸ್ಸಿನಿಂದ** (ὁ νοῦς τῆς σαρκός αὐτοῦ, *ho nous tēs sarkos autou*, "ಆತನ ಶರೀರದ ಮನಸ್ಸು") ಎಂಬುದು NASB, KJV, ಮತ್ತು NKJV ಗಳಲ್ಲಿ ಮಾಡಲಾಗಿರುವ ಭಾವಾನುವಾದವಾಗಿರುತ್ತದೆ. ಈ ಪದಗುಚ್ಛವು "ಇಂದ್ರೀಯ ಮನಸ್ಸು" (RSV); "ಮಾನವ ರೀತಿಯ ಯೋಚಿಸುವಿಕೆ" (NRSV); "ಪ್ರಾಪಂಚಿಕ ಮನಸ್ಸುಗಳು" (NEB); ಮತ್ತು "ಆತ್ಮೀಕವಲ್ಲದ ಮನಸ್ಸು" (NIV; ನೋಡಿರಿ TNIV) ಎಂದು ಸಹ ಅನುವಾದಿಸಲ್ಪಟ್ಟಿದೆ.

ಪೌಲನ ತಾತ್ಪರ್ಯವು ದೈವಿಕ ಪ್ರಕಟನೆಯ ವಿರುದ್ಧವಾಗಿ ಪ್ರಾಪಂಚಿಕ ಮನಸ್ಸುಗಳಿಂದ ಕಲ್ಪಿಸಲಾಗಿದ್ದ ಧರ್ಮಗಳು ಎಂದಾಗಿತ್ತು. ಮನುಷ್ಯ ತರ್ಕದ ಆಧಾರದಲ್ಲಿ ತಮ್ಮ ನಿಲುವುಗಳನ್ನು ಕಟ್ಟಿಕೊಂಡಿದ್ದವರನ್ನು, ದೇವರ ವಾಕ್ಯದ ಮೇಲಲ್ಲದೆ ಮಾನವ ಬುದ್ಧಿಯ ಮೇಲೆ ಅವಲಂಭಿತರಾಗಿರುವವರನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತಾನೆ. ಜ್ಞಾನದಿಂದ ಉಂಟಾಗುವ ಗರ್ವವೇ ಅವರು ದೇವರ ವಾಕ್ಯವಾದ ಬೈಬಲ್‌ನಲ್ಲಿ ಪ್ರಕಟವಾಗಿರುವ ಜ್ಞಾನಗಳ ಮೇಲಲ್ಲದೆ, ತಮ್ಮ ಸ್ವಂತ ವಿಚಾರಗಳ ಮೇಲೆ ಅವಲಂಭಿತರಾಗುವದಕ್ಕೆ ಕಾರಣವಾಗುತ್ತದೆ.

### "ಆದರೆ ಕ್ರಿಸ್ತನೆಂಬ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ"

ಪೌಲನು ಪ್ರಾಪಂಚಿಕ ಬುದ್ಧಿಯಲ್ಲಿರುವ ಸಮಸ್ಯೆ ಏನೆಂಬುದನ್ನು ನಿಖರವಾಗಿ

ತಿಳಿಸುತ್ತಾನೆ: ಅವರು ವಿವಿಧ ಸುಳ್ಳು ಬೋಧನೆಗಳ ಮೇಲೆ ಗಮನವನ್ನು ಹರಿಸಿದ್ದರು ಮತ್ತು **ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದರು.** ಯೇಸುವು ಪರಲೋಕ ಮತ್ತು ಭೂಲೋಕದ ಕರ್ತನು ಹಾಗೂ ದೊರೆಯಾಗಿದ್ದಾನೆ (ಮತ್ತಾಯ 28:18; ಎಫೆಸ 1:20-23). ಇದು ಸತ್ಯವೇ ಆಗಿದ್ದಾಗ್ಯೂ, ಆತನು ಶಿರಸ್ಸಾಗಿರುವ ಸಭೆಯು ಮಾತ್ರವೇ ಆತನನ್ನು ಶಿರಸ್ಸೆಂದು ಗೌರವಿಸುತ್ತದೆ ಮತ್ತು ಆತನಿಗೆ ಅಧೀನವಾಗಿರುತ್ತದೆ (ಎಫೆಸ 5:24). ಮನುಷ್ಯನ ಶಿರಸ್ಸು ಹೇಗೆ ಮನುಷ್ಯನ ದೇಹದೊಂದಿಗೆ ಸಂಬಂಧ ಹೊಂದಿರುತ್ತದೋ ಹಾಗೆಯೇ ಶಿರಸ್ಸಾಗಿರುವ ಯೇಸು, ದೇಹವಾಗಿರುವ ಸಭೆಯೊಂದಿಗೆ ಸಂಬಂಧ ಹೊಂದಿರುತ್ತಾನೆ. ಶಿರಸ್ಸು ನಿಯಂತ್ರಣದ ಕೇಂದ್ರವಾಗಿರುತ್ತದೆ. ದೇಹಕ್ಕಾಗಿ ಅದಕ್ಕಿರುವ ಕಾಳಜಿಯ ನಿಮಿತ್ತವಾಗಿ ಅದು ದೇಹಕ್ಕೋಸ್ಕರ ಚಿಂತಿಸುತ್ತದೆ, ಅದರ ಚಟುವಟಿಕೆಗಳಿಗೆ ಮಾರ್ಗದರ್ಶನ ಮಾಡುತ್ತದೆ, ಮತ್ತು ಅದರ ಅಗತ್ಯತೆಗಳನ್ನು ಒದಗಿಸುತ್ತದೆ.

"ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆಂದು" ಪೌಲನು ಹೊರಗಿನವರನ್ನು ಸೂಚಿಸಿ ಹೇಳಿದನೋ ಅಥವಾ ಕ್ರೈಸ್ತರನ್ನು ಸೂಚಿಸಿ ಹೇಳಿದನೋ? ಆತನು ಹೊರಗಿನವರನ್ನು ಸೂಚಿಸಿ ಹೇಳಿರುವ ಸಾಧ್ಯತೆಯು ಇಲ್ಲದಿರುವಂತೆ ತೋರುತ್ತದೆ; ಅವರು ಎಂದಿಗೂ ಶಿರಸ್ಸಿನೊಂದಿಗೆ ಜೋಡಿಸಲ್ಪಟ್ಟಿರಲೇ ಇಲ್ಲ, ಆದಕಾರಣ ಅವರು ಹೇಗೆ ಶಿರಸ್ಸಿನ ಹೊಂದಿಕೆಯನ್ನು ಬಿಡುವದಕ್ಕೆ ಸಾಧ್ಯವಾಗುತ್ತದೆ? ಆತನು ಕ್ರೈಸ್ತರನ್ನು ಸೂಚಿಸಿ ಹೇಳಿದ್ದಾಗಿದ್ದರೆ, ಕೆಲವರು ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದರೆಂಬುದು ಆತನ ತಾತ್ಪರ್ಯವಾಗಿತ್ತು. ಬಹುಶಃ ಎರಡನೆಯದ್ದೇ ಅದರ ಅರ್ಥವಾಗಿರಬಲ್ಲದು. ನಕಾರಾತ್ಮಕವನ್ನೊಳಗೊಂಡ ವರ್ತಮಾನಕಾಲ ಕೃದಂತವಾದ (κρατῶν, *kratōn*), "ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ," ಎಂಬುದರ ಅರ್ಥವು ಅವರು ತಮ್ಮ ಗರ್ವದ ಕಾರಣದಿಂದ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟಿದ್ದರು ಎಂಬದೆ. ಅವರು ಯೇಸುವಿನ ಬೋಧನೆಗಳಿಗೆ ಅಂಟಿಕೊಂಡಿರುವದನ್ನು ಬಿಟ್ಟಿದ್ದರು ಮತ್ತು ಆತನಿಗೆ ನಿಷ್ಠೆ ತೋರಿಸುವದನ್ನು ನಿಲ್ಲಿಸಿದ್ದರು.

ಕ್ರಿಸ್ತನೊಂದಿಗೆ ಕ್ರೈಸ್ತನ ಸಂಬಂಧವೇ ಅತ್ಯಂಥ ದೊಡ್ಡ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಒಬ್ಬನು ಎಲ್ಲಿಯ ವರೆಗೆ ಕ್ರಿಸ್ತನನ್ನು ಹೊಂದಿಕೊಂಡಿರುತ್ತಾನೋ, ಅಲ್ಲಿಯ ವರೆಗೆ ಆತನು ಆತ್ಮೀಕವಾಗಿ ಬೆಳೆಯುತ್ತಾನೆ. ಈ ಸಂಬಂಧವು ಅಂತ್ಯಗೊಳ್ಳುವಂತೆ ಅನುಮತಿಸುವವನು ಒಣಗಿ ಹೋಗುವನು ಮತ್ತ ಬೆಂಕಿಯಲ್ಲಿ ಹಾಕಲ್ಪಡುವನು (ಯೋಹಾನ 15:5, 6).

ಕ್ರಿಸ್ತನ ದೇಹದೊಳಗೆ ಯಾವನಾದರೂ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟು ಬಿಡುವದಾದರೆ, ಆತನು ಧರ್ಮಭ್ರಷ್ಟನಾಗುತ್ತಾನೆ. ಅಷ್ಟುಮಾತ್ರವಲ್ಲದೆ, ಬಾಲ್ಯಾವಸ್ಥೆಯಲ್ಲಿಯೇ ಉಳಿದು ಪ್ರಾಪಂಚಿಕ ಮನಸ್ಸನ್ನು ಮೀರಿ ಬೆಳೆಯದಿದ್ದರೆ ಆತ್ಮೀಕ ವಾಸ್ತವಿಕತೆಗಳನ್ನು ಗ್ರಹಿಸಿಕೊಳ್ಳಲಾರನು (1 ಕೊರಿಂಥ 2:14-3:3). ಇದು ಸಭೆಯ ಶಿರಸ್ಸಾಗಿರುವ ಯೇಸುವಿಗೆ ಅಂಟಿಕೊಂಡಿರುವದನ್ನು ಬಿಡುವಂಥ ಯಾವನಿಗಾದರೂ ಸಂಭವಿಸಬಲ್ಲದು. ಯೇಸುವಿನೊಂದಿಗೆ ಸಂಬಂಧವನ್ನು ಉಳಿಸಿಕೊಳ್ಳುವದಕ್ಕೆ ಮತ್ತು ಆತನಲ್ಲಿ ಸಿಕ್ಕುವ ಆತ್ಮೀಕ ಪೋಷಣೆಯನ್ನು ಪಡೆದುಕೊಳ್ಳುವದಕ್ಕೆ ಇರುವ ಏಕೈಕ ದಾರಿಯೆಂದರೆ ಆತನನ್ನು ಅಂಟಿಕೊಂಡಿರುವದನ್ನು ಹಾಗೂ ಆತನ ಬೋಧನೆ

ಅನುಸರಿಸುವದನ್ನು ಬಿಡದವರಾಗಿ ಇರುವದೇ.

## "ಆ ಶಿರಸ್ಸಿನಿಂದಲೇ ದೇಹವೆಲ್ಲಾ"

ಗ್ರೀಕ್.ನಲ್ಲಿ ἐξ οὗ (*ex hou*, **ಯಾರಿಂದ** ಎಂದು ಅನುವಾದಿಸಲ್ಪಟ್ಟಿರುತ್ತದೆ) ಎಂಬ ಪದಗುಚ್ಛವು 19ನೇ ವಚನದಲ್ಲಿರುವ "ಶಿರಸ್ಸು" ಎಂಬುದಕ್ಕಾಗಿರುವ κεφαλή (*kephalē*) ಎಂಬುದನ್ನು ಮಾರ್ಪಡಿಸುತ್ತದೆ. "ಯಾರು" ಎಂಬುದು ಪುಲ್ಲಿಂಗವಾಗಿದ್ದರೆ, "ಶಿರಸ್ಸು" ಸ್ತ್ರೀಲಿಂಗವಾಗಿರುತ್ತದೆ. ಈ ಕಾರಣಕ್ಕಾಗಿ, ಕೆಲವರು "ಶಿರಸ್ಸು" ಎಂಬುದು ಯೇಸುವನ್ನು ಸೂಚಿಸುವದಿಲ್ಲ ಎಂಬ ನಿರ್ಧಾರಕ್ಕೆ ಬಂದಿರುತ್ತಾರೆ. Schweizer ಈ ಆಕ್ಷೇಪಣೆಗೆ ಹೀಗೆ ಉತ್ತರಿಸುತ್ತಾನೆ: "ಇಲ್ಲಿ ಮುಖ್ಯ ಗಮನವು ಕ್ರಿಸ್ತನ ಮೇಲೆ ಎಷ್ಟೊಂದು ಕೇಂದ್ರೀಕೃತವಾಗಿರುತ್ತದೆ ಎಂದರೆ 'ಶಿರಸ್ಸು' ಸ್ತ್ರೀಲಿಂಗವಾಗಿದ್ದಾಗ್ಯೂ ಲೇಖಕನು ಗ್ರೀಕ್.ನಲ್ಲಿ ಪುಲ್ಲಿಂಗ ಸಂಬಂಧಸೂಚಕಕ ಸರ್ವನಾಮವನ್ನು ಬಳಸುತ್ತಾನೆ."[13] ಇನ್ನು ಕೆಲವು ವಾಕ್ಯಭಾಗಗಳಲ್ಲಿ ಯೇಸು ದೇಹಕ್ಕೆ "ಶಿರಸ್ಸು" ಎಂದು ಕರೆಯಲ್ಪಟ್ಟಿದ್ದಾನೆ (1 ಕೊರಿಂಥ 11:3; ಎಫೆಸ 1:22; 4:15; 5:23; ಕೊಲೊಸ್ಸೆ 1:18; 2:10).

"ಶಿರಸ್ಸಿನಿಂದಲೇ" ಎಂಬುದು **ದೇಹವೆಲ್ಲಾ** ಯಾವದರಿಂದ ಬೆಳವಣಿಗೆಗೆ ಪೋಷಣೆಯನ್ನು ಪಡೆಯುತ್ತದೋ ಆ ಮೂಲ ಆಗಿದೆ ಎಂಬ ಅರ್ಥವನ್ನು ಕೊಡುತ್ತದೆ. ಇಲ್ಲಿ "ನಿಂದಲೇ" ಮತ್ತು "ವೆಲ್ಲಾ" ಎಂಬುದರ ಮೇಲೆ ಒತ್ತು ಕೊಡತಕ್ಕದ್ದು, ಯಾಕೆಂದರೆ ಶಿರಸ್ಸಿನಿಂದ ವೃದ್ಧಿಯಾಗುವವರು ದೇಹದ ಕೆಲವು ಅಂಗಗಳು ಮಾತ್ರವಾಗಿರುವದಿಲ್ಲ. ಇಡೀ ದೇಹದ ಪ್ರತಿಯೊಂದು ಅಂಗಗಳು ಶಿರಸ್ಸಿನೊಂದಿಗೆ ಮತ್ತು ಇತರ ಅಂಗಗಳೊಂದಿಗೆ ಹೊಂದಿರುವ ಸಂಬಂಧದ ನಿಮಿತ್ತವಾಗಿ ಬೆಳೆಯಬಲ್ಲವುಗಳಾಗಿವೆ.

ಆತ್ಮೀಕ ವೃದ್ಧಿಗೆ ದೇಹವು ಯೇಸುವಿನೊಂದಿಗೆ ಹೊಂದಿರುವ ಸಂಬಂಧವು ಸಾರಭೂತವಾಗಿರುತ್ತದೆ. ಪ್ರತಿಯೊಂದು ಅಂಗವು ನೀಡುವಂಥ ಪ್ರಯೋಜನಗಳ ಮೂಲಕವಾಗಿ ಆತನು ದೇಹದ ಪ್ರತಿಯೊಂದು ಅಂಗದ ಆತ್ಮೀಕ ಅಗತ್ಯತೆಗಳನ್ನು ಒದಗಿಸಿ ಕೊಡುತ್ತಾನೆ. ಇಡೀ ದೇಹದ ಆರೈಕೆಗಾಗಿ ದೇಹದ ಪ್ರತಿಯೊಂದು ಅಂಗವು ತನ್ನ ತನ್ನ ಪಾಲನ್ನು ಮಾಡುವಾಗ ದೇಹವು ಉತ್ತಮವಾಗಿ ಕಾರ್ಯ ಮಾಡುವದಾಗಿರುತ್ತದೆ. ಸಭೆಯ ಸದಸ್ಯರ ನಡುವಿನ ಸರಿಯಾದ ಸಂಬಂಧವನ್ನು ದೃಷ್ಟಾಂತಪಡಿಸುವದಕ್ಕಾಗಿ ಪೌಲನು ಬೇರೊಂದು ಕಡೆಯಲ್ಲಿ ಮಾನವ ದೇಹದ ಉದಾಹರಣೆಯನ್ನು ಬಳಸುತ್ತಾನೆ (1 ಕೊರಿಂಥ 12:14-26; ಎಫೆಸ 5:15, 16).

## "ಕೀಲುನರಗಳ ಮೂಲಕ ಬೇಕಾದ ಸಹಾಯವನ್ನು ಹೊಂದಿ ಒಂದಾಗಿ ಕೂಡಿಸಲ್ಪಟ್ಟು ದೇವರು ಕೊಡುವ ವೃದ್ಧಿಯಿಂದ ಅಭಿವೃದ್ಧಿಯಾಗುತ್ತಾ ಬರುತ್ತದೆ"

ಕೊಲೊಸ್ಸೆಯವರು ವೃದ್ಧಿಯಾಗಬೇಕಾದರೆ ಏನು ಮಾಡಬೇಕೆಂಬುದನ್ನು ಅವರಿಗೆ ತಿಳಿಯಪಡಿಸುವದಕ್ಕಾಗಿ, ಪೌಲನು ಎರಡು ಗ್ರೀಕ್ ವರ್ತಮಾನಕಾಲ ಕೃದಂತಗಳನ್ನು ಬಳಸುತ್ತಾನೆ, ἐπιχορηγούμενον (*epichorēgoumenon*, **ಸಹಾಯವನ್ನು ಹೊಂದಿ**) ಮತ್ತು συμβιβαζόμενον (*sumbibazomenon*, **ಒಂದಾಗಿ ಕೂಡಿಸಲ್ಪಟ್ಟು**). ಗ್ರೀಕ್.ನ ಎರಡೂ ಪದಗಳು ನಿರಂತರವಾಗಿರುವ ಕ್ರಿಯೆಯನ್ನು ವ್ಯಕ್ತಪಡಿಸುತ್ತವೆ. ದೇಹಕ್ಕೆ ನಿರಂತರವಾಗಿ ಆತ್ಮೀಕ ಪೋಷಣೆ ಸಿಕ್ಕುವದಾದರೆ ಮತ್ತು ಒಂದಾಗಿ ಕೂಡಿಸಲ್ಪಟ್ಟದ್ದಾಗಿ

ಇರುವದಾದರೆ, ಅದು ಬೆಳೆಯಬಲ್ಲದು. ದೇಹವು ವಿಭಜನೆಗೊಳ್ಳುವದಾದರೆ, ಶಿರಸ್ಸಿನಿಂದ ಬೇರ್ಪಡಿಸಲ್ಪಟ್ಟರೆ, ಅದು ಬೆಳೆಯುವದಕ್ಕೆ ಸಾಧ್ಯವಿಲ್ಲ. ಯೇಸು ತನ್ನ ಹಿಂಬಾಲಕರು ಒಂದಾಗಿರಬೇಕೆಂದು (ಯೋಹಾನ 17:20-23) ಮತ್ತು ಅವರಲ್ಲಿ ಪಂಗಡಗಳಿರಬಾರದೆಂದು ಬಯಸುತ್ತಾನೆ (1 ಕೊರಿಂಥ 1:10). ಶಿರಸ್ಸಾಗಿರುವ ಯೇಸುವಿನ ಸುತ್ತ ಕಟ್ಟಲ್ಪಟ್ಟಿರುವ ಐಕ್ಯತೆಯು ಸಭೆಯೊಳಗೆ ವೃದ್ಧಿಯನ್ನು ಹುಟ್ಟಿಸಬಲ್ಲದು, ಅದೇ ವೇಳೆಯಲ್ಲಿ ವಿಭಜನೆಯು ಶೀಘ್ರದಲ್ಲೇ ಅದನ್ನು ನಾಶಗೊಳಿಸಬಲ್ಲದು. ಯಾವದೇ ಸಭೆಯಲ್ಲಿ ಬೆಳವಣಿಗೆಗೆ ಇರುವ ಅತ್ಯಂಥ ದೊಡ್ಡ ಅಡೆತಡೆಯೆಂದರೆ ಯೇಸುವಿನ ಮೇಲೆ ಆಧಾರಗೊಂಡಿರುವಂಥ ಐಕ್ಯತೆಯ ಕೊರತೆಯೇ ಆಗಿರುತ್ತದೆ.

**ವೃದ್ಧಿಯಿಂದ** (αὔξω, *auxō*) ಎಂಬದರ ಅರ್ಥವೇನೆಂದರೆ ದೇಹವು ಒದಗಿಸಲ್ಪಟ್ಟು ಒಂದಾಗಿ ಕೂಡಿಸಲ್ಪಟ್ಟದ್ದಾಗಿರುವದರಿಂದ, ಪಕ್ವಗೊಳ್ಳುವ ಪ್ರಕ್ರಿಯೆಯು ಮುಂದುವರೆಯುವದು ಎಂಬದೆ. ಪೌಲನು ವೈಜ್ಞಾನಿಕ ದೃಷ್ಟಿಕೋನದಿಂದ **ಕೀಲುನರಗಳು** ಬೆಳವಣಿಗೆಗೆ ಮೂಲವಾಗಿವೆ ಎಂಬ ವಾದವನ್ನು ಮಾಡುತ್ತಿಲ್ಲ. ಕೀಲುಗಳು ದೇಹಕ್ಕೆ ಸಲೀಸಾಗಿ ಬಗ್ಗುವದಕ್ಕೆ ಮತ್ತು ಚಲನೆಗೆ ಸಹಾಯಕವಾಗಿರುತ್ತದೆ. ನರಗಳು ದೇಹವನ್ನು ಒಂದಾಗಿ ಹಿಡಿದಿಟ್ಟುಕೊಂಡು ಕೀಲುಗಳಿಗೆ ಹಾಗೂ ದೇಹದ ಅಂಗಗಳಿಗೆ ಒಟ್ಟಾಗಿ ಕ್ರಿಯೆ ಮಾಡುವಂತೆ ಸಹಾಯ ಒದಗಿಸುತ್ತವೆ. ಶಿರಸ್ಸಿನೊಂದಿಗೆ ಸಹಕಾರ ನೀಡುತ್ತಾ ದೇಹದ ಚಲನೆ, ಪೋಷಣೆ, ವೃದ್ಧಿ, ಮತ್ತು ಸಂಪೂರ್ಣ ಆರೈಕೆಗೆ ಪ್ರತಿಯೊಂದು ಸಹ ಜೀವಾಳವಾಗಿರುತ್ತವೆ.

ಪೌಲನು ಹೇಳಲಿಚ್ಚಿಸಿದ ಅಂಶವೆಂದರೆ ದೇಹವು ಸಮಗ್ರ ಯೋಗಕ್ಷೇಮಕ್ಕೋಸ್ಕರ ಒಂದಾಗಿ ಕೂಡಿಸಲ್ಪಟ್ಟು ಒದಗಿಸಲ್ಪಡುವದು ಅಗತ್ಯವೆಂಬುದೇ. ಶಿರಸ್ಸಿನೊಂದಿಗೆ ಸಹಕಾರವನ್ನು ನೀಡುವ ಮೂಲಕ ಅವುಗಳು ಇಡೀ ದೇಹದ ಪೋಷಣೆಯನ್ನು ಸಾಧ್ಯವಾಗಿಸುತ್ತವೆ. ದೇಹದ ಹಿತಕ್ಕೋಸ್ಕರ ಕೆಲಸ ಮಾಡುವದಕ್ಕೆ ಪ್ರತಿಯೊಂದು ಅಂಗಕ್ಕೂ ಒಂದೊಂದು ಪಾತ್ರವಿರುತ್ತದೆ. ಕೀಲುನರಗಳಿಲ್ಲದೆ, ದೇಹವು ಒಡೆದು ಬೀಳುವದು ಮತ್ತು ಕ್ರಿಯೆ ಮಾಡುವದಕ್ಕೆ ಅಶಕ್ತವಾಗುವದು. ಶಿರಸ್ಸು ಇಲ್ಲದಿದ್ದರೆ, ದೇಹಕ್ಕೆ ನಿಯಂತ್ರಣ, ಮಾರ್ಗದರ್ಶನ, ಮತ್ತು ಆರೈಕೆಯ ಕೊರತೆಯುಂಟಾಗುವದು. ಅಂಗಗಳು ಒಟ್ಟಾಗಿ ಕಾರ್ಯಮಾಡುವಾಗ ಮತ್ತು ಶಿರಸ್ಸಿಗೆ ಸಹಕಾರವನ್ನು ನೀಡುವಾಗ, ದೇಹವು ವೃದ್ಧಿಯಾಗಬಲ್ಲದು ಮತ್ತು ಕ್ರಿಯೆ ಮಾಡಬಲ್ಲದು.

ಜೀರ್ಣಕ್ರಿಯೆ ಅಂಗಗಳು ಆಹಾರವನ್ನು ಜೀರ್ಣಿಸಿ ಇಡೀ ದೇಹಕ್ಕೆ ಪೋಷಣೆಯನ್ನು ಕೊಂಡೊಯ್ಯುವ ರೀತಿಯಲ್ಲಿಯೇ "ಕೀಲುನರಗಳು" ಪೋಷಣೆಯನ್ನು ಒದಗಿಸುವದಿಲ್ಲ. ಪೌಲನು ಪರೋಕ್ಷವಾಗಿ ಆ ಅರ್ಥದಲ್ಲಿ ಹೇಳಿದ್ದಾನೆಂದು ಭಾವಿಸುವವರು ತಪ್ಪು ಗ್ರಹಿಕೆಯಲ್ಲಿರುವವರಾಗಿದ್ದಾರೆ. ಇಡೀ ದೇಹದ ಹಿತಕ್ಕೋಸ್ಕರ ಪ್ರತಿಯೊಂದು ಅಂಗಗಳು ಕಾರ್ಯಮಾಡಬೇಕು ಎಂಬದಾಗಿ ಆತನು ಕಲಿಸುತ್ತಿದ್ದಾನೆ. ಪೋಷಣೆಯಲ್ಲಿ ದೇಹದ ಚಟುವಟಿಕೆಗಳ ಕುರಿತ ನಿಖರವಾದ ವಿವರಣೆಯೇ ಸ್ವತಃ ಪೌಲನ ದಿನದಲ್ಲಿನ ವೈದಕೀಯ ಹಾಗೂ ವೈಜ್ಞಾನಿಕ ಬೋಧನೆಗಿಂಥ ವ್ಯತ್ಯಾಸವಾಗಿತ್ತು.

ಪೌಲನು ಕಲಿಸುತ್ತಿರುವ ಸತ್ಯವೇನೆಂದರೆ ಸುಳ್ಳು ಬೋಧಕರು ಬೆಳವಣಿಗೆಯ ಮೂಲವಾದ ಶಿರಸ್ಸಿನಿಂದ ತಮ್ಮನ್ನು ಬೇರ್ಪಡಿಸಿಕೊಂಡಿದ್ದರು ಎಂಬದೆ. ಈ ಸಂಬಂಧವನ್ನು

ಕಡಿದುಕೊಳ್ಳುವದರ ಫಲಿತವು ಬೆಳವಣಿಗೆ ಸ್ಥಗಿತ ಮತ್ತು ಕ್ರಮೇಣದಲ್ಲಿ ಮರಣವೇ ಆಗಿತ್ತು. ಸಭೆಯು ಯೇಸುವನ್ನು ಹೊಂದಿಕೊಂಡಿದ್ದು ದೇಹದ ಪ್ರತಿಯೊಂದು ಅಂಗದ ಆತ್ಮೀಕ ಅಭಿವೃದ್ಧಿಯನ್ನು ಅಪೇಕ್ಷಿಸುವಾಗ ಮಾತ್ರವೇ ಆತ್ಮೀಕ ವೃದ್ಧಿಯು ಸಂಭವಿಸಬಲ್ಲದು.

ಎಫೆಸ 4:11-16ರಲ್ಲಿ ಸಭೆಯು ಬೆಳೆದು ಭಕ್ತಿವೃದ್ಧಿಗೊಳ್ಳುವಂತೆ ದೇವರು ಕೆಲವೊಬ್ಬ ನಾಯಕರನ್ನು ಸಭೆಯೊಳಗೆ ಇಟ್ಟಿದ್ದಾನೆಂದು ಪೌಲನು ಕಲಿಸುತ್ತಾನೆ. ಬೆಳವಣಿಗೆಗೆ ಸಂಪನ್ಮೂಲಗಳನ್ನು ಒದಗಿಸುವಾತನು ದೇವರೇ: ದೇವರ ವಾಕ್ಯ (1 ಪೇತ್ರ 2:2) ಮತ್ತು ಪವಿತ್ರಾತ್ಮನಿಂದ ಸಹಾಯ (ಎಫೆಸ 3:16). ದೇವರ ಸಹಾಯವಿಲ್ಲದೆ, ದೇಹವು ಫಲವನ್ನು ಕೊಡಲಾರದು (ಯೋಹಾನ 15:4, 5); ಮತ್ತು ಅಂಗಗಳು ಸರಿಯಾಗಿ ಕಾರ್ಯನಿರ್ವಹಿಸದಿದ್ದರೆ, ದೇಹವು ಬೆಳೆಯುವದಿಲ್ಲ. ದೇಹದ ಕ್ಷೇಮವು ಶಿರಸ್ಸಿನ ಮೇಲೆ ಆಧಾರವಾಗಿರುತ್ತದೆ, ಮತ್ತು ಶಿರಸ್ಸಿನ ಬಯಕೆಗಳನ್ನು ನೆರವೇರಿಸುವದು ದೇಹದ ಮೇಲೆ ಆಧಾರವಾಗಿರುತ್ತದೆ. ದೇವರು ಬೆಳವಣಿಗೆಗೆ ಮೂಲವನ್ನು ಒದಗಿಸುತ್ತಾನೆ, ಅದೇ ವೇಳೆಯಲ್ಲಿ ದೇವರ ಪೋಷಣೆಯು ದೇಹದ ಪ್ರತಿಯೊಂದು ಅಂಗಕ್ಕೂ ತಲುಪುವಂತೆ ವಿವಿಧ ಅಂಗಗಳು ನೋಡಿಕೊಳ್ಳುವ ಅಗತ್ಯವಿರುತ್ತದೆ. ದೇಹವು ದೇವರೊಂದಿಗೆ ಸೂಕ್ತವಾಗಿ ಸಹಕರಿಸುವಾಗ ಮತ್ತು ಅದನ್ನು ಬೆಳೆಯುವಂತೆ ಮಾಡುವಂಥದ್ದನ್ನು ಆತನಿಂದ ಪಡೆದುಕೊಳ್ಳುವಾಗ ಮಾತ್ರವೇ ವೃದ್ಧಿಯು ಸಂಭವಿಸಬಲ್ಲದು.

ಶಿರಸ್ಸು, ಕೀಲುಗಳು, ಮತ್ತು ನರಗಳು ಎಂಬುವುಗಳನ್ನು ಅಕ್ಷರಶಃದ ಬದಲಾಗಿ ಸಾಂಕೇತಿಕವೆಂದು ಅರ್ಥಮಾಡಿಕೊಳ್ಳತಕ್ಕದ್ದು. ಪೌಲನು ನೀಡುವ ದೃಷ್ಟಾಂತದಲ್ಲಿ ಶಿರಸ್ಸು ಕ್ರಿಸ್ತನಾಗಿದ್ದರೆ ದೇಹವು – ಅದರ ಕೀಲುನರಗಳ ಸಮೇತ – ಸಭೆ ಆಗಿರುತ್ತದೆ. ದೇಹವು ಶಿರಸ್ಸಿನೊಂದಿಗೆ ಸಹಕರಿಸುವಾಗ ಮತ್ತು ದೇಹದ ಪ್ರತಿಯೊಂದು ಅಂಗವು ಇಡೀ ದೇಹದ ಹಿತಕ್ಕೋಸ್ಕರ ತನ್ನ ಪಾತ್ರವನ್ನು ಮಾಡುವಾಗ ಗರಿಷ್ಠ ಬೆಳವಣಿಗೆಯು ಸಂಭವಿಸುತ್ತದೆ.

## ಪ್ರಾಪಂಚಿಕ ಬೋಧೆಯ ಪಾಲಿಗೆ ಕ್ರಿಸ್ತನೊಂದಿಗೆ ಸಾಯುವದು (2:20-23)

**20ಪ್ರಾಪಂಚಿಕ ಬಾಲಬೋಧೆಯ ಪಾಲಿಗೆ ನೀವು ಕ್ರಿಸ್ತನೊಂದಿಗೆ ಸತ್ತವರಾಗಿದ್ದ ಮೇಲೆ ಇನ್ನೂ ಪ್ರಾಪಂಚಿಕರಾಗಿ ಬದುಕುವವರಂತೆ ಮನುಷ್ಯಕಲ್ಪಿತ ಆಜ್ಞೆಗಳನ್ನೂ ಉಪದೇಶಗಳನ್ನೂ ಅನುಸರಿಸಿ – 21-22ಇದನ್ನು ಹಿಡಿಯಬೇಡ, ಇದನ್ನು ರುಚಿನೋಡಬೇಡ, ಅದನ್ನ ಮುಟ್ಟಬೇಡ ಎನ್ನುವ ನಿಬಂಧನೆಗಳಿಗೆ ನಿಮ್ಮನ್ನು ಒಳಗಾಗಮಾಡಿಕೊಳ್ಳುವದೇಕೆ? ಆ ಪದಾರ್ಥಗಳೆಲ್ಲವೂ ಬಳಸುವದರಲ್ಲಿ ನಾಶವಾಗುತ್ತವೆ. 23ಅಂಥ ಉಪದೇಶಗಳು ಸ್ವಕಲ್ಪಿತಾಚಾರವನ್ನೂ ಅತಿವಿನಯವನ್ನೂ ದೇಹದಂಡನೆಯನ್ನೂ ಬೋಧಿಸುತ್ತಾ ಹೆಸರಿಗೆ ಮಾತ್ರ ಜ್ಞಾನವೆನಿಸಿಕೊಳ್ಳುತ್ತವೆಯಲ್ಲದೆ ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳುವದರಲ್ಲಿ ಯಾವ ಪ್ರಯೋಜನಕ್ಕೂ ಬರುವದಿಲ್ಲ.**

18 ಮತ್ತು 19 ವಚನಗಳಲ್ಲಿ, ಪೌಲನು ಸುಳ್ಳು ಬೋಧನೆಯು ಕೊಲೊಸ್ಸೆಯವರನ್ನು ಕ್ರಿಸ್ತನಿಂದ ದೂರ ನಡಿಸಬಲ್ಲದು ಎಂಬದನ್ನು ಒತ್ತಿ ಹೇಳಿದನು. ಅದು ಸಂಭವಿಸುವಂತೆ ಬಿಡಬೇಡಿರಿ ಎಂದು ಸಹೋದರರನ್ನು ಎಚ್ಚರಿಸುವದಕ್ಕೆ ಮುನ್ನ, ಕ್ರಿಸ್ತನು ದೇವರ

ಪ್ರತಿರೂಪ, ಸೃಷ್ಟಿಕರ್ತನು, ಸಭೆಯೂ ಸೇರಿದಂತೆ ಎಲ್ಲಾದರ ಶಿರಸ್ಸು, ಮತ್ತು ದೇವರೊಂದಿಗೆ ಸಂಧಾನವಾಗುವದಕ್ಕೆ ತಳಹದಿಯಾಗಿದ್ದಾನೆಂದು ಹೇಳುವ ಮೂಲಕ ಪೌಲನು ಆತನ ಸರ್ವೋಚ್ಚತೆಯನ್ನು ದೃಢಪಡಿಸುತ್ತಾನೆ (1:15-20). ಆತನಲ್ಲಿಯೇ ಸಕಲ ಜ್ಞಾನ ಮತ್ತು ತಿಳುವಳಿಕೆಗಳಿರುತ್ತವೆ, ಆತನಲ್ಲಿ ದೇವರ ಸರ್ವಸಂಪೂರ್ಣತೆ ಇರುತ್ತದೆ, ಮತ್ತು ಪರಿಪೂರ್ಣಗೊಳಿಸಲ್ಪಡುವದಕ್ಕಿರುವ ಅವಕಾಶವು ಆತನಲ್ಲಿಯೇ ಇರುತ್ತದೆ. ಕೊಲೊಸ್ಸೆಯಲ್ಲಿರುವ ಕ್ರೈಸ್ತರಿಂದ ಪಾಪಭರಿತ ಅಭಿಲಾಷೆಗಳನ್ನು ತೆಗೆದು ಹಾಕಿ ಅವರ ಪಾಪಗಳೆಲ್ಲಾ ಆತನಲ್ಲಿಯೇ ಕ್ಷಮಿಸಲ್ಪಟ್ಟಿದ್ದವು (2:3-13).

ಈ ಕಾರಣಗಳಿಗಾಗಿ, ಕೊಲೊಸ್ಸೆಯವರು ಯೇಸುವಿನಲ್ಲಿ ನೆಲೆಗೊಂಡು ಆತನೊಬ್ಬನನ್ನೇ ಹಿಂಬಾಲಿಸಬೇಕಾಗಿತ್ತು. ಸುಳ್ಳು ಸಿದ್ಧಾಂತಗಳಿಂದ ದೂರವಿರುವದಕ್ಕೆ ಪೌಲನು ಇನ್ನಷ್ಟು ಕಾರಣಗಳನ್ನು ಕೊಡುತ್ತಾನೆ:

1. ಧರ್ಮಶಾಸ್ತ್ರವು ಇಲ್ಲದಂತಾಗ ಮಾಡಲ್ಪಟ್ಟು ಶಿಲುಬೆಗೆ ಜಡಿಯಲ್ಪಟ್ಟಿದೆ (2:14). ಅದು ಸ್ವಾತಂತ್ರವನ್ನ ಕೊಡಲಿಲ್ಲ, ಆದರೆ ತನ್ನ ಅಧೀನದಲ್ಲಿರುವವರನ್ನು ದಾಸತ್ವಕ್ಕೊಳಪಡಿಸಿತು. ಅದು ಜೀವವನ್ನು ಕೊಡುವದಕ್ಕೆ ಶಕ್ತವಾಗಲಿಲ್ಲ, ಆದರೆ ಬದಲಾಗಿ ಮರಣವನ್ನುಂಟು ಮಾಡಿತು.

2. ಕುಪಂಥದ ಆಚಾರಗಳು, ಅವು ಯೆಹೂದ್ಯ ಅಥವಾ ವಿಗ್ರಹಾರಾಧಕ ಜನಾಂಗಕ್ಕೆ ಸೇರಿದವುಗಳಾಗಿದ್ದರೂ ಸರಿಯೇ, ಸ್ವಾತಂತ್ರ್ಯವನ್ನಾಗಲಿ ಜೀವವನ್ನಾಗಲಿ ಸಹ ಒದಗಿಸುವದಕ್ಕೆ ಸಾಧ್ಯವಿಲ್ಲದವುಗಳು. ಅವುಗಳಲ್ಲಿ ತೊಡಗಿಸಿಕೊಳ್ಳುವ ಜನರನ್ನು ಅವುಗಳು ಕೇವಲ ದಾಸತ್ವದಲ್ಲಿ ಸಿಕ್ಕಿಸುತ್ತವಷ್ಟೆ (2:8). ಅಂಥ ಆಚಾರಗಳನ್ನು ಅನುಸರಿಸುವವರ ಬಹುಮಾನ ಅಪಹರಿಸಲ್ಪಡುವದು.

ಈ ಸತ್ಯಗಳು 20 ರಿಂದ 23 ವಚನಗಳಲ್ಲಿನ ಪೌಲನ ಬೋಧನೆಗೆ ಹಿನ್ನಲೆಯನ್ನು ಒದಗಿಸಿದವು. ಇಲ್ಲಿ, ಆತನು ಶಾರೀರಿಕ ಇಚ್ಛೆಗಳನ್ನ ನಿಗ್ರಹಿಸಿಕೊಳ್ಳುವದಕ್ಕೆ ಪ್ರಪಂಚವು ಕೊಟ್ಟ ಉಪದೇಶಗಳು ಶಾರೀರಿಕ ಭೋಗಗಳ ಮೇಲೆ ಸ್ವಾತಂತ್ರ್ಯವನ್ನು ನೀಡಲಿಲ್ಲ. ಬದಲಾಗಿ ಪ್ರಾಪಂಚಿಕ ಬೋಧೆಯು ತನ್ನನ್ನು ಹಿಂಬಾಲಿಸುವವರನ್ನು ದಾಸತ್ವಕ್ಕೆ ಒಳಪಡಿಸಿತು. ಕೊಲೊಸ್ಸಯವರು ಪ್ರಾಪಂಚಿಕ ಬೋಧೆಯ ಪಾಲಿಗೆ ಕ್ರಿಸ್ತನೊಂದಿಗೆ ಸತ್ತವರಾಗಿದ್ದರು. ಪೌಲನು ಸೂಚಿಸಿದ ನಿಯಮಗಳು ನಾಶವಾಗುವಂಥವುಗಳಾದ್ದರಿಂದ ಅವು ನಿಜವಾದ ಪ್ರಯೋಜನವಿಲ್ಲದ ಸಂಗತಿಗಳಾಗಿದ್ದವು.

ಸ್ವಾತಂತ್ರ್ಯ ಮತ್ತು ಸ್ವನಿಗ್ರಹಕ್ಕೆ ಏಕೈಕ ಮೂಲನಾದ ಕ್ರಿಸ್ತನನ್ನೇ ಅಂಟಿಕೊಂಡಿರುವದು ಆತ್ಮೀಕ ಬೆಳವಣಿಗೆಯನ್ನು, ಕ್ರೈಸ್ತ ಸ್ವಾತಂತ್ರ್ಯ ಹೊಂದಿಕೊಳ್ಳಲು, ಮತ್ತು ಪರಲೋಕವನ್ನು ಪ್ರವೇಶಿಸುವದಕ್ಕೆ ದಾರಿಯಾಗಿರುತ್ತದೆ. ಯೇಸುವು ಕೊಡುವಂಥದ್ದನ್ನು ಜೀವನದ ಬೇರೆ ಯಾವ ದಾರಿಯೂ ಒದಗಿಸಲಾರದು.

### “ಪ್ರಾಪಂಚಿಕ ಬಾಲಬೋಧೆಯ ಪಾಲಿಗೆ ನೀವು ಕ್ರಿಸ್ತನೊಂದಿಗೆ ಸತ್ತವರಾಗಿದ್ದ ಮೇಲೆ” (2:20)

ಕೊಲೊಸ್ಸೆಯವರು **ಕ್ರಿಸ್ತನೊಂದಿಗೆ ಸತ್ತವರಾಗಿದ್ದರು.** ಅವರ ಹೊಸ ಜೀವನವು ಕ್ರಿಸ್ತನಿಗೆ ಸಮರ್ಪಣೆಯಿಂದಿರಬೇಕಾದರೆ ಅವರ ಹಳೇ ಜೀವಿತವು ಅಂತ್ಯಗೊಂಡಿರಬೇಕಿತ್ತು. ಒಂದು ಸಾಂಕೇತಿಕ ಅರ್ಥದಲ್ಲಿ, ಅವರು ಆತನ ಮರಣದಲ್ಲಿ ಮತ್ತು ಆತನ ಮರಣದ

ಉದ್ದೇಶದಲ್ಲಿ – ಪಾಪದಿಂದ ಬಿಡುಗಡೆ – ಪಾಲುಗಾರರಾಗಿದ್ದರು. ಅವರು ಪಾಪಭರಿತ ಪ್ರಾಪಂಚಿಕ ಆಚಾರಗಳಿಂದ ತಪ್ಪಿಸಿಕೊಂಡಿರಬೇಕಿತ್ತು ಮತ್ತು ಈ ಕಾರಣದಿಂದ ಪ್ರಾಪಂಚಿಕ ಬಾಲಬೋಧೆಯ ಬದಲಾಗಿ ಯೇಸುವಿಗಾಗಿ ಬದುಕುವವರಾಗಬೇಕು.

ಪೌಲನು ರೋಮಾ 6:3ರಲ್ಲಿ ದೀಕ್ಷಾಸ್ನಾನವನ್ನು ಕ್ರಿಸ್ತನ ಮರಣದೊಂದಿಗೆ ಸಂಬಂಧಗೊಳಿಸುವವನಾಗಿ, ದೀಕ್ಷಾಸ್ನಾನವು ಜನರನ್ನು ಯೇಸುವಿನ ಮರಣದೊಳಗೆ ಸೇರಿಸುತ್ತದೆಂದು ಬರೆಯುತ್ತಾನೆ. ಆತನು ಇನ್ನೂ ಮುಂದುವರೆದು ಹೇಳಿದ್ದೇನೆಂದರೆ "ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು . . . ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತು" (ರೋಮಾ 6:4–6). ತಾನು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದ್ದೇನೆಂದು ಹೇಳುವ ಮೂಲಕ ಆತನು ಇದೇ ಯೋಚನೆಯನ್ನು ವ್ಯಕ್ತಪಡಿಸುತ್ತಾನೆ (ಗಲಾತ್ಯ 2:20). ಇದು ಆತನ ಜೀವನದ ಮೇಲೆ ಬಹಳವಾಗಿ ಪ್ರಭಾವವನ್ನು ಬೀರಿತ್ತು, ಯಾಕೆಂದರೆ ಆತನು ಹೀಗೆ ಬರೆಯುತ್ತಾನೆ, "ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ." ಕೊಲೊಸ್ಸೆ 2:20ದಲ್ಲಿನ "ಸತ್ತವರಾಗಿದ್ದ" ಎಂಬುದು ಒಂದು ಅನಿಶ್ಚಿತ ಭೂತಕಾಲ ರೂಪದ ಪದದಿಂದ ಅನುವಾದಿಸಲ್ಪಟ್ಟಿದ್ದು, ಅದು ಕ್ರಿಸ್ತನೊಂದಿಗೆ ಅನುಭವಿಸಿದ ಮರಣವು ಸಂಪೂರ್ಣ ಮತ್ತು ಅಂತಿಮವಾದದ್ದು ಎಂಬ ಅರ್ಥವನ್ನು ಕೊಡುತ್ತದೆ. ಗಲಾತ್ಯ 2:20ರಲ್ಲಿ ತಾನು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದ್ದಾನೆ ಮತ್ತು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟ ಸ್ಥಿತಿಯಲ್ಲಿ ಮುಂದುವರೆದಿರುತ್ತಾನೆಂಬ ಅರ್ಥ ಬರುವ ಒಂದು ಕೃದಂತ ರೂಪದ ಪದವನ್ನು ಪೌಲನು ಬಳಸುತ್ತಾನೆ.

ಕ್ರೈಸ್ತರು ಇನ್ನು ಮೇಲೆ ಪಾಪಕ್ಕೆ ದಾಸರಾಗಿರಬಾರದೆಂದು ಪೌಲನು ಕಲಿಸಿದನು (ರೋಮಾ 6:1–7). ದೀಕ್ಷಾಸ್ನಾನದಲ್ಲಿ ಯೇಸುವಿನ ಮರಣದಲ್ಲಿ ಪಾಳುಗಾರರಾಗಿರುವವರು ಪಾಪದ ಪಾಲಿಗೆ ಸತ್ತವರಾಗಿದ್ದಾರೆ. ಕೊಲೊಸ್ಸೆಯವರು ಹೊಸ ರೀತಿಯ ಜೀವನವನ್ನು ನಡಿಸುವವರಾಗುವಂತೆ ಪಾಪದ ದೊರೆತನದೊಳಗಿಂದ ಬಿಡಿಸಲ್ಪಟ್ಟಿದ್ದರು. ಅವರು ಕ್ರಿಸ್ತನೊಂದಿಗೆ ಸಾಯುವಂಥದ್ದು **ಪ್ರಾಪಂಚಿಕ ಬಾಲಬೋಧೆಯ ಪಾಲಿಗೆ** ಅವರು ಸತ್ತವರಾಗಿರುವದರಲ್ಲಿ ಫಲಿತಗೊಳ್ಳಬೇಕು ಎಂಬುದನ್ನು ಪೌಲನು ಅವರಿಗೆ ಜ್ಞಾಪಿಸುತ್ತಾನೆ.

ಪ್ರಾಪಂಚಿಕ ನಿಯಮಗಳಲ್ಲಿ ಯಾವ ಜೀವವೂ ಸಿಕ್ಕುವದಿಲ್ಲ. ಕೊಲೊಸ್ಸೆಯವರು ಪ್ರಾಪಂಚಿಕ ಬಾಲಬೋಧೆಯ ಪಾಲಿಗೆ ಸಾಯುವ ಮೂಲಕ ಅದರಿಂದ ತಪ್ಪಿಸಿಕೊಂಡಿದ್ದರು. ಅವರ ಪೂರ್ವದ ಜೀವಿತಗಳಲ್ಲಿ ಅವರು ಕ್ರಿಸ್ತನಿಂದಾಗುವ ಜೀವದ ಪಾಲಿಗೆ ಸತ್ತವರಾಗಿ ಪ್ರಪಂಚದ ಪಾಲಿಗೆ ಜೀವಂತವಾಗಿದ್ದರು; ಅವರ ಈಗಿನ ಜೀವಿತಗಳಲ್ಲಿ, ಅವರು ಲೋಕದ ಪಾಲಿಗೆ ಸತ್ತಿದ್ದರು ಆದರೆ ಕ್ರಿಸ್ತನಿಗಾಗು ಬದುಕುವವರಾಗಿದ್ದರು. ಅವರು ಪ್ರಪಂಚದ ನಿಯಮಗಳಿಗೆ ಸತ್ತವರಾಗಿದ್ದರು ಮತ್ತು ಅವರು ಇನ್ನು ಮೇಲೆ ಅವುಗಳನ್ನು ಅನುಸರಿಸಿ ಬದುಕುವವರಾಗಿರಕೂಡದಿತ್ತು.

ಇಲ್ಲಿ **ಗಿದ್ದ ಮೇಲೆ** ಎಂಬ ಬಳಸುವದರಿಂದ ಪೌಲನು ಕ್ರಿಸ್ತನೊಂದಿಗೆ ಅವರು ಮರಣಿಸಿರುವದನ್ನು ಪ್ರಶ್ನಿಸುತ್ತಿದ್ದಾನಂದು ಅರ್ಥವಾಗುವದಿಲ್ಲ: "ಗ್ರೀಕ್ ಒಂದು ಸಂಭವನಾತ್ಮಕ ವಾಕ್ಯಭಾಗ, 'ಸತ್ತವರಾಗಿದ್ದ ಮೇಲೆ' (RSV), ಇದೊಂದು

ವಾಗ್ಮಿತಾಕಲೆಯ ಸಾಧನವಾಗಿದೆ ಮತ್ತು ಅದು ಯಾವದೇ ಸಂಶಯವನ್ನು ಸೂಚಿಸುವದಿಲ್ಲ; ಕೆಲವೊಂದು ಪರಿಣಾಮಗಳುಂಟು ಮಾಡಲ್ಪಡುವಂಥ ಒಂದು ವಾಸ್ತವಾಂಶವನ್ನು ಹೇಳುವ ರೀತಿ ಇದಾಗಿರುತ್ತದೆ."[14]

ಅವರು "ಕ್ರಿಸ್ತನೊಂದಿಗೆ ಸತ್ತವರಾಗಿ" ಇದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಪ್ರಶ್ನಿಸುವ ಬದಲಾಗಿ, ಅವರು ಕ್ರಿಸ್ತನೊಂದಿಗೆ ಸತ್ತದ್ದರ ಫಲಿತವು ಏನಾಗಿರಬೇಕಿತ್ತೆಂಬುದನ್ನು ಪೌಲನು ಅವರಿಗೆ ತೋರಿಸಿ ಕೊಡುತ್ತಿದ್ದಾನೆ. ಅವರು ದೀಕ್ಷಾಸ್ನಾನದಲ್ಲಿ ಕ್ರಿಸ್ತನ ಕೂಡ ಹೂಣಲ್ಪಟ್ಟು ಎಬ್ಬಿಸಲ್ಪಟ್ಟ ವೇಳೆ ಅವು ಜೀವನದ ವಿಷಯದಲ್ಲಿ ಅನುಸರಿಸುವ ದಾರಿಯಲ್ಲಿ ಒಂದು ಬದಲಾವಣೆಯು ಸಂಭವಿಸಿರಬೇಕಾಗಿತ್ತು (ವ. 12). ಅದರ ಫಲಿತಾಂಶವು "ಪ್ರಾಪಂಚಿಕ ಬಾಲಬೋಧೆಯ" ಪಾಲಿಗೆ ಸಾಯುವದು ಆಗಿರಬೇಕು, ಅದರ ನಂತರ ಕ್ರಿಸ್ತನಿಗಾಗಿ ಹೊಸ ಜೀವನವನ್ನು ಜೀವಿಸುವದು ಸಂಭವಿಸತಕ್ಕದ್ದು.

20 ವಚನದಲ್ಲಿನ "ಪ್ರಾಪಂಚಿಕ ಬಾಲಬೋಧೆ" (στοιχείων τοῦ κόσμου, *stoicheiōn tou kosmou*) ಇನ್ನು ಮೇಲೆ ಅವರನ್ನು ನಿಯಂತ್ರಿಸಕೂಡದು ಎಂಬುದನ್ನು ಕೊಲೊಸ್ಸೆಯವರು ಅರ್ಥಮಾಡಿಕೊಳ್ಳಬೇಕೆಂಬುದು ಪೌಲನ ಬಯಕೆಯಾಗಿತ್ತು (2:8 ರ ಮೇಲಿನ ಚರ್ಚೆಯನ್ನು ನೋಡಿರಿ). ಕೊಲೊಸ್ಸೆಯವರು ಕ್ರಿಸ್ತನ ಮರಣ ಹಾಗೂ ಹೂಣಲ್ಪಡುವಿಕೆಗಳಲ್ಲಿ ಪಾಲುಗಾರರಾಗುವ ಮೂಲಕ ಈ ಬಾಲಬೋಧೆಗಳ ಪಾಲಿಗೆ ಸತ್ತವರಾಗಿದ್ದರು. ಲೋಕದ ತತ್ವಜ್ಞಾನಗಳ ಪಾಲಿಗೆ ಸತ್ತವರಾದ ಬಳಿಕ, ಅವುಗಳು ಯೇಸು ಕ್ರಿಸ್ತನೊಂದಿಗಿನ ಸಂಬಂಧಕ್ಕೆ ಪ್ರಯೋಜನಕರವಾಗಿರುತ್ತವೇನೋ ಎಂಬಂತೆ ಸಹೋದರರು ಅವುಗಳಿಗೆ ತಮ್ಮನ್ನು ಅಧೀನಪಡಿಸಿಕೊಳ್ಳಕೂಡದಾಗಿತ್ತು.

## ". . . ಎನ್ನುವ ನಿಬಂಧನೆಗಳಿಗೆ ನಿಮ್ಮನ್ನು ಒಳಗಾಗಮಾಡಿಕೊಳ್ಳುವದೇಕೆ?" (2:21, 22)

ಅಪೊಸ್ತಲರ ವಿಷಯದಲ್ಲಿ ಯೇಸು ಹೀಗೆ ಹೇಳಿದ್ದನು, "ಆದರೆ ನೀವು ಲೋಕದ ಕಡೆಯವರಲ್ಲದೆ ಇರುವದರಿಂದಲೂ ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡಿದ್ದರಿಂದಲೂ" (ಯೋಹಾನ 15:19). ಆತನು ತಂದೆಗೆ ಮಾಡಿದ ಪ್ರಾರ್ಥನೆಯಲ್ಲಿ ಹೀಗೆ ಹೇಳಿದನು, "ಇವರು ಲೋಕದಲ್ಲಿರುತ್ತಾರೆ . . ." (ಯೋಹಾನ 17:11); "ಇವರೂ ಲೋಕದವರಲ್ಲ" (ಯೋಹಾನ 17:14, 16). ಕ್ರೈಸ್ತರಿಗಿರುವ ಗುರಿಯು ಇಹಲೋಕದ ನಡವಳಿಕೆಯನ್ನು ಅನುಸರಿಸದೆ ಲೋಕದಲ್ಲಿ ಜೀವಿಸುವದೇ ಆಗಿದೆ (ರೋಮಾ 12:2).

ನಾವು ಪಾಪ ಮಾಡುವಂತೆ ಮಾಡುವ ಎಲ್ಲಾ ಶೋಧನೆಗಳ ಜೊತೆಯಾಗಿ ಲೋಕದಲ್ಲಿರುತ್ತೇವೆ, ಆದರೆ ನಾವು ಅದಕ್ಕೆ ಸೇರಿದವರಲ್ಲ. ನಾವು **ಲೋಕದಲ್ಲಿ ಜೀವಿಸುವದನ್ನು** ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವಾದಾಗ್ಯೂ, ಲೋಕವನ್ನು ನಮ್ಮ ಜೀವಿತಗಳೊಳಗಿಂದ ಹೊರಕ್ಕೆ ಹಾಕಲು ಸಾಧ್ಯವಿರುತ್ತದೆ. ನಾವು ಗ್ರಹಿಸಿಕೊಳ್ಳತಕ್ಕದ್ದೇನೆಂದರೆ ಲೋಕದಲ್ಲಿ ಜೀವಿಸುವ ವೇಳೆ (ζῶντες, *zōntes*, "ಜೀವಿಸುವದನ್ನು ಮುಂದುವರೆಸುವದು"), ನಾವು ಲೋಕವನ್ನು ಆಳುವಂಥ ಅದೇ ಮೂಲತತ್ವಗಳಿಂದ ನಡಿಸಲ್ಪಡಕೂಡದು ಎಂಬದೆ.

ಪೌಲನು 1:6ರಲ್ಲಿ "ಲೋಕ" (κόσμος, *kosmos*) ಎಂಬುದಾಗಿ ಭೌಗೋಳಿಕ

ಕ್ಷೇತ್ರವನ್ನು ಸೂಚಿಸಿ ಹೇಳಿದನು. ಈ ವಾಕ್ಯಭಾಗದಲ್ಲಿ ಪೌಲನ ಅದೇ ಪದವನ್ನು ಕೊಲೊಸ್ಸೆಯವರು ಜೀವಿಸುತ್ತಿದ್ದ ಸಮಾಜವನ್ನು ಸೂಚಿಸುವದಕ್ಕೆ ಬಳಸುತ್ತಾನೆ.

**ನಿಬಂಧನೆಗಳಿಗೆ [ನಿಮ್ಮನ್ನು] ಒಳಗಾಗಮಾಡಿಕೊಳ್ಳುವದು** ಎಂಬ ಪದಗುಚ್ಛವು ಗ್ರೀಕ್‌ನ δογματίζεσθε (*dogmatizesthe*) ಎಂಬ ಏಕ ಪದದಿಂದ ಅನುವಾದಿಸಲ್ಪಟ್ಟಿರುತ್ತದೆ. ಈ ಕ್ರಿಯಾಪದವು 2:14ರಲ್ಲಿನ δόγματα (*dogmata*, "ಆಜ್ಞೆಗಳು") ಎಂಬ ನಾಮಪದದೊಂದಿಗೆ ನೆಂಟು ಹೊಂದಿದೆ. ಈ ಎರಡು ಪದಗಳು ಒಂದೇ ಮೂಲ ಪದದ ಮೇಲೆ ರಚಿತಗೊಂಡಿವೆಯಾದರೂ, ಪೌಲನು 20ನೇ ವಚನದಲ್ಲಿ ಬಳಸಿದ ವಿಧಿಗಳು ಎಂಬಂತೆಯೇ ಆಗಿರುವದಿಲ್ಲ. ಆತನು 2:14ರಲ್ಲಿ ದೇವರು ಮೋಶೆಗೆ ಕೊಟ್ಟ ಧರ್ಮಶಾಸ್ತ್ರದ ಕಟ್ಟಳೆಗಳು ಮತ್ತು ವಿಧಿಗಳು ಎಂಬದನ್ನು ಸೂಚಿಸಿ ಹೇಳಿದನು. 20 ವಚನದಲ್ಲಿ ಆತನು ಧರ್ಮಶಾಸ್ತ್ರದ ಅಥವಾ ಪ್ರಾಪಂಚಿಕ ಬುದ್ಧಿಯಿಂದ ಕಲ್ಪಿಸಲಾಗಿರುವ ವಿಧಿಗಳನ್ನು ಕುರಿತು ಮಾತಾಡುತ್ತಿದ್ದಾನೆ.

ದೇವರ ಕಟ್ಟಳೆಗಳಿಂದ ದೂರ ಹೋಗುವವರು ಸ್ವಾತಂತ್ರ್ಯವನ್ನು ಹುಡುಕುವದಕ್ಕಾಗಿಯೇ ಹಾಗೆ ಮಾಡುತ್ತಾರೆ; ಆತನ ಕಟ್ಟಳೆಗಳು ಅತ್ಯಂಥ ನಿರ್ಬಂಧಕರವಾದವುಗಳೆಂದು ಅವರು ಯೋಚಿಸುತ್ತಾರೆ. ಅವರು ಸ್ವಾತಂತ್ರ ಸಿಕ್ಕುತ್ತದೆಂದು ಆರಿಸಿಕೊಂಡ ನಿಯಮಗಳು ಅವರಿಗೆ ಸ್ವಾತಂತ್ರ್ಯವನ್ನು ಕೊಡುವದಿಲ್ಲ, ಆದರೆ ವಾಸ್ತವಿಕದಲ್ಲಿ ಅವರನ್ನು ದಾಸತ್ವಕ್ಕೊಳಪಡಿಸುತ್ತವೆಂಬುದನ್ನು ಅವರು ಗ್ರಹಿಸಿಕೊಳ್ಳದೆ ಹೋಗುತ್ತಾರೆ (2 ಪೇತ್ರ 2:19; ನೋಡಿರಿ ಯೋಹಾನ 8:34; ರೋಮಾ 6:16). ಸಂತೋಷದ ಜೀವನಕ್ಕೆ ಒಳ್ಳೇ ನಿಮಯಗಳು ಸಾರಭೂತವಾಗಿರುತ್ತವೆ. ಯಾವ ನಿಯಮಗಲೂ ಇಲ್ಲದಿರುವಿಕೆಯು ಕೇವಲ ಆತ್ಮೀಕ ಹಾಗೂ ಶಾರೀರಿಕ ದಾಸತ್ವವನ್ನು ತರುವಂಥದ್ದಾಗಿದೆ. ಯಾವದೇ ಟ್ರಾಪಿಕ್ ನಿಯಮಗಳಿಲ್ಲದಂಥ ಒಂದು ಬೃಹತ್ ನಗರದಲ್ಲಿ ವಾಹನ ಚಲಾಯಿಸುತ್ತಿರುವದನ್ನು ಊಹಿಸಿಕೊಳ್ಳಿರಿ. ಅಪಘಾತಗಳು ಅನಿವಾರ್ಯವಾಗುತ್ತವೆ, ಮತ್ತು ವಾಹನಗಳು ನಿಂತಲ್ಲೇ ನಿಲ್ಲಬೇಕಾಗುತ್ತದೆ. ಯೇಸುವಿನ ಬೋಧನೆ ಮಾತ್ರವೇ ಲೋಕದ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳುವಂತೆ, ಪಾಪದ ಮೇಲೆ ಜಯವನ್ನು ಸಾಧಿಸುವಂತೆ, ಮತ್ತು ಆತ್ಮೀಕ ಸ್ವಾತಂತ್ರ್ಯವನ್ನು ಹೊಂದಿಕೊಳ್ಳುವಂತೆ ನಮ್ಮನ್ನು ಶಕ್ತರನ್ನಾಗಿಸುತ್ತದೆ.

### "ಇದನ್ನು ಹಿಡಿಯಬೇಡ, ಇದನ್ನು ರುಚಿನೋಡಬೇಡ, ಅದನ್ನು ಮುಟ್ಟಬೇಡ" (2:21, 22)

ಅವರು ಎದುರಿಸಿದ ಒಳಗಾಗಿಸುವಂಥ ಕೆಲವು ನಿಯಮಗಳು ಯಾವವು? ಪೌಲನು ಈ ಉದಾಹರಣೆಗಳನ್ನು ನೀಡುತ್ತಾನೆ: **ಇದನ್ನು ಹಿಡಿಯಬೇಡ, ಇದನ್ನು ರುಚಿನೋಡಬೇಡ, ಅದನ್ನು ಮುಟ್ಟಬೇಡ.** ಈ ನಿಯಮಗಳ ಕೆಳಮುಖವಾದ ಕ್ರಮಾಂಕದಲ್ಲಿ ಕೊಡಲ್ಪಟ್ಟಿರುತ್ತವೆ; "ಹಿಡಿಯಬೇಡ" ಎಂಬುದು ಅತ್ಯಂಥ ಬಲವಾದ ಪದವಾಗಿದ್ದು, ನಂತರ "ರುಚಿನೋಡು" ಮತ್ತು "ಮುಟ್ಟು" ಎಂಬ ಪದಗಳು ಬರುತ್ತವೆ. ಸುಮ್ಮನೆ ಮುಟ್ಟುವಂಥದ್ದು ರುಚಿ ನೋಡುವಷ್ಟರ ಮಟ್ಟಿಗೆ ತೊಡಗಿಸಿಕೊಂಡಂತಾಗುವದಿಲ್ಲ, ಅಥವಾ ರುಚಿ ನೋಡುವದು ಹಿಡಿಯುವದು ಎಂಬದರಷ್ಟು ತೊಡಗಿಸಿಕೊಂಡದ್ದಾಗಿರುವದಿಲ್ಲ. ಕೊಲೊಸ್ಸೆಯವರಿಗೆ ಪರಿಚಿತವಿದ್ದ ನಿಯಮಗಳು ಹಿಡಿಯುವದನ್ನು, ರುಚಿ ನೋಡುವದನ್ನು ಮತ್ತು ಮುಟ್ಟುವದನ್ನು

ನಿಷಿದ್ಧಗೊಳಿಸಿದ್ದವು.

ಸುಳ್ಳು ಬೋದಕರ ಬಳಿಯಲ್ಲಿ "ಇಂಥಿಂಥದ್ದನ್ನು ಮಾಡಬೇಡ" ಎಂಬ ನಿಯಮಗಳ ಒಂದು ಪಟ್ಟಿಯೇ ಇತ್ತು. ಯೇಸುವಿನ ಬೋಧನೆಯ ಈ ರೀತಿಯಲ್ಲಿರುವದಿಲ್ಲ. ನಕಾರಾತ್ಮಕಗಳ ಒಂದು ಪಟ್ಟಿಯಲ್ಲಿರುವವುಗಳಿಂದ ದೂರವಿದ್ದು ಬಿಟ್ಟರೆ ಸಕಾರಾತ್ಮಕ ಜೀವನವು ಉಂಟಾಗುವದಿಲ್ಲ. ಸಕಾರಾತ್ಮವಾದದ್ದಕ್ಕೆ ಒತ್ತು ಕೊಡುವದೇ ನಕಾರಾತ್ಮಕವಾದದ್ದನ್ನು ಅಳಿಸಿ ಹಾಕುವದಕ್ಕೆ ಉತ್ತಮ ದಾರಿಯಾಗಿರುತ್ತದೆ (ರೋಮಾ 13:8-11); ಹೇಗೂ, ಕ್ರೈಸ್ತತ್ವದಲ್ಲಿ "ಇಂಥಿಂಥದ್ದನ್ನು ಮಾಡಬೇಡ" ನಿಮಯಗಳು ಮಾತ್ರವಲ್ಲದೆ "ಇಂಥಿಂಥದ್ದನ್ನು ಮಾಡು" ಎಂಬ ಬೋಧನೆಯು ಸಹ ಇರುತ್ತದೆ.

ಹೊಸ ಒಡಂಬಡಿಕೆಯನ್ನು ಗಮನವಿಟ್ಟು ಓದುವಾಗ ಯೇಸು ಪದೇ ಪದೇ "ಇಂಥಿಂಥದ್ದನ್ನು ಮಾಡಬೇಡ" ಎಂದು ಹೇಳಿರುವದು ತಿಳಿದು ಬರುತ್ತದೆ. ಪರ್ವತದ ಮೇಲಿನ ಪ್ರಸಂಗದಲ್ಲಿ (ಮತ್ತಾಯ 5-7), ಆತನು ಹೀಗೆ ಹೇಳಿದನು,

"ಆಣೆಯನ್ನೇ ಇಡಬೇಡ" (5:34).
"ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ" (6:3).
"ಹೇಳಿದ್ದನ್ನೇ ಸುಮ್ಮಸುಮ್ಮನೆ ಹೇಳಬೇಡ" (6:7).
"ನೀವು ಅವರ ಹಾಗೆ ಆಗಬೇಡಿರಿ" (6:8).
"ಭೂಲೋಕದಲ್ಲಿ ನಿಮಗೋಸ್ಕರ ಗಂಟುಮಾಡಿ ಇಟ್ಟುಕೊಳ್ಳಬೇಡಿರಿ" (6:19).
"ಚಿಂತೆಮಾಡಬೇಡಿರಿ" (6:25; ನೋಡಿರಿ ವಚನಗಳು 31, 34).
"ತೀರ್ಪುಮಾಡಬೇಡಿರಿ" (7:1).
"ದೇವರ ವಸ್ತುಗಳನ್ನು ನಾಯಿಗಳಿಗೆ ಹಾಕಬೇಡಿರಿ" (7:6).

ಪ್ರಸಂಗದಲ್ಲಿರುವ ಇನ್ನು ಕೆಲವು ಹೇಳಿಕೆಗಳು ತಪ್ಪಾದದ್ದನ್ನು ಮಾಡಬಾರದೆಂದು ಎಚ್ಚರಿಸುತ್ತವೆ. ಏನನ್ನು ಮಾಡಬೇಕೆಂದು ಹೇಳುವಂಥ ಸಕಾರಾತ್ಮಕ ಬೋಧನೆಯು ಪ್ರಾಮುಖ್ಯವಾದದ್ದು, ಆದರೆ ಒಬ್ಬ ಬೋಧಕನು ಜನರಿಗೆ ಅವರು ಏನು ಮಾಡಬಾರದು ಎಂಬುದನ್ನು ಸಹ ಹೇಳತಕ್ಕದ್ದು.

ಪೌಲನ ಕೆಲವೊಂದನ್ನು ಪ್ರಸ್ತಾಪಿಸುವ ಮೂಲಕ ಕೊಲೊಸ್ಸೆಯವರು ದೂರವಿರಬೇಕಾದ ಕೆಲವು ನಿಬಂಧನೆಗಳನ್ನು ದೃಷ್ಟಾಂತಗೊಳಿಸಿರುತ್ತಾನೆ. ಬಹುಶಃ ಇದು ಕೊಲೊಸ್ಸೆಯವರಿಗೆ ಪರಿಚಿತವಾಗಿದ್ದ ರೂಢಿಯಲ್ಲಿದ್ದ ಪಟ್ಟಿಯಾಗಿರಬಹುದಾಗಿದೆ. ಆತನ ಉದ್ದೇಶವು ಸಮುದಾಯದಲ್ಲಿ ಕಲಿಸಲಾಗುತ್ತಿದ್ದ ಎಲ್ಲಾ ನಿಯಮಗಳ ಪಟ್ಟಿ ಮಾಡುವದಾಗಿರಲಿಲ್ಲ, ಆದರೆ ತನ್ನ ಮನಸ್ಸಿನಲ್ಲಿದ್ದ ಎಂಥ ನಿಬಂಧನೆಗಳಿದ್ದವೆಂಬುದಕ್ಕೆ ಕೆಲವು ಮಾದರಿಗಳನ್ನು ಒದಗಿಸುತ್ತಾನೆ. H. C. G. Moule ನು ಈ ನಿಯಮಗಳು "ಮೋಶೆಯ ಧರ್ಮಶಾಸ್ತ್ರದ . . . ನಿಷಿದ್ಧತೆಗಳು, ಫರಿಸಾಯರ ಶಾಲೆಗಳಿಂದ ಅಭಿವೃದ್ಧಿಗೊಳಿಸಲ್ಪಟ್ಟಿದ್ದವು ಮತ್ತು ಮಿತಿಮೀರಿ ದೊಡ್ಡದುಗೊಳಿಸಲ್ಪಟ್ಟಿದ್ದವು."[15] ಅವುಗಳು ಕೆಲವರಿಂದ ಧರ್ಮಶಾಸ್ತ್ರದಿಂದ ಬಂದವುಗಳೆಂದು ಹೇಳಲ್ಪಡುವ ಮನುಷ್ಯರ ಆಜ್ಞೆಗಳಾಗಿದ್ದಿರಬಹುದಾದ ಸಾಧ್ಯತೆ ಅಧಿಕವಾಗಿರುತ್ತದೆ. ಈ ನಿರ್ದಿಷ್ಟವಾದ ವಿಧಿಗಳು

ಅತ್ಯಂಥ ನಿಷಿದ್ಧಾತ್ಮಕ ಮತ್ತು ಕೆಲವು ಸಾರಿ ದೇಹದಂಡನೆ ಮಾಡಿಕೊಳ್ಳುವಂಥ ಆಚರಣೆಗಳ ಮೂಲಕ ಭಕ್ತಿಯನ್ನುಂಟು ಮಾಡಿಕೊಳ್ಳುವದಕ್ಕಾಗಿ ರಚಿಸಲ್ಪಟ್ಟಿದ್ದವು. Moule ಅದರ ಬಗ್ಗೆ ಇನ್ನಷ್ಟು ಬರೆಯುತ್ತಾನೆ,

> ಸ್ಪಷ್ಟವಾಗಿ, ಅವುಗಳು ಯಾವದಾದರೂ ಮೋಶೆಯ ಧರ್ಮಶಾಸ್ತ್ರದಿಂದ ಬಂದವುಗಳಾಗಿದ್ದಲ್ಲಿ, ಸಂತ. ಪೌಲನು *ಅವುಗಳ ಸ್ವಂತ ಕಾಲ ಮತ್ತು ಅವುಗಳ ಸ್ವಂತ ಉದ್ದೇಶದಲ್ಲಿ* ಅವುಗಳಿಗಿರುವ ದೈವಿಕ ಅಧಿಕಾರವನ್ನು ಪೂರ್ಣವಾಗಿ ಗುರುತಿಸಿರುತ್ತಿದ್ದನು. ಆದರೆ ಆ ಕಾಲವು ಅಂತ್ಯಗೊಂಡಿತ್ತು, ಯಾಕೆಂದರೆ ಉದ್ದೇಶವು ಕ್ರಿಸ್ತನಲ್ಲಿ ನೆರವೇರಿತ್ತು. ಈಗ ಅವುಗಳನ್ನು ಕೈಕೊಂಡು ನಡೆಯುವಂತೆ ವಿಧಿಸುವದೆಂದರೆ ಅದು ದೇವರ ಆದೇಶವನ್ನು ಮನುಷ್ಯನ ಸ್ವೇಚ್ಛಾನುಸಾರದ ಬಳಕೆಗೆ ಬಿಟ್ಟು ಕೊಟ್ಟಂತಾಗಿರುತ್ತಿತ್ತು.[16]

ಕ್ರೈಸ್ತ ಯುಗದಲ್ಲಿ ಯಾವನಾದರೂ ಹಳೆಯ ಒಡಂಬಡಿಕೆಯ ಕಟ್ಟಳೆಗಳನ್ನು ಜನರ ಮೇಲೆ ವಿಧಿಸುವದಾದರೆ, ಆತನು ಅದನ್ನು ಮನುಷ್ಯನ ಅಧಿಕಾರದಿಂದ ಮಾಡುವವನಾಗಿದ್ದಾನೆಯೇ ಹೊರತು ದೇವರ ಅಧಿಕಾರದಿಂದಲ್ಲ.

ಪೌಲನು ಇಲ್ಲಿ ಮಾನವರಿಂದ ರಚಿತವಾದ ನಾಗರಿಕ ಕಾನೂನುಗಳನ್ನು ಸೂಚಿಸಿ ಹೇಳುತ್ತಿದ್ದಾನೆಂದು ಕೆಲವರು ಯೋಚಿಸುತ್ತಾರೆ. ಹೇಗೂ, ಇದು ಆತನ ಬೋಧನೆಯಾಗಿರಲಾರದು, ಯಾಕೆಂದರೆ ಕ್ರೈಸ್ತರಿಗೆ ಸರ್ಕಾರಿ ವಿಧಿಗಳನ್ನು ಕೈಕೊಂಡು ನಡೆಯುವಂತೆ ಆಜ್ಞಾಪಿಸಲಾಗಿರುತ್ತದೆ. "ಪ್ರತಿ ಮನುಷ್ಯನು ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನನಾಗಿರಲಿ . . ." (ರೋಮಾ 13:1-4; ನೋಡಿರಿ ತೀತನಿಗೆ 3:1); "ಮನುಷ್ಯರು ನೇಮಿಸಿರುವ ಯಾವ ಅಧಿಕಾರಕ್ಕಾದರೂ ಕರ್ತನ ನಿಮಿತ್ತ ಅಧೀನರಾಗಿರಿ" (1 ಪೇತ್ರ 2:13). ಇಲ್ಲಿ ಪೌಲನಿಂದ ಪ್ರಸ್ತಾಪಿಸಲ್ಪಟ್ಟಿರುವ ನಿಯಮಗಳು ಸರ್ಕಾರದ ಕಾನೂನುಗಳಾಗಿರುವದಿಲ್ಲ; ಬದಲಾಗಿ, ಆತನು ಯಾವದೇ ನೈತಿಕ ಪ್ರಯೋಜನಗಳಿಲ್ಲದಂಥ ಕ್ಷುಲ್ಲಕವಾದ ನೈತಿಕ ಹಾಗೂ ಧಾರ್ಮಿಕ ನಿಯಮಗಳನ್ನು ಸೂಚಿಸಿ ಹೇಳುತ್ತಿದ್ದಾನೆ.

ಪೌಲನು ಪಟ್ಟಿ ಮಾಡಿದ ಮೂರು ನಿಷಿದ್ಧತೆಯ ನಿಯಮಗಳಲ್ಲಿ ವ್ಯತ್ಯಾಸವನ್ನು ಗುರುತಿಸುವದು ಸುಲಭವಾಗಿರುವದಿಲ್ಲ. ಆತನು ಶಾರೀರಿಕ ನಿಗ್ರಹಗಳ ಬಗ್ಗೆ ಮಾತಾಡುತ್ತಿದ್ದಾನೆ, ಹೊರತು ನಿತ್ಯವಾದ, ಅದೃಶ್ಯವಾದ, ಆತ್ಮೀಕ ಮಂಡಲದ ಸಂಗತಿಗಳ ಕುರಿತಾಗಿ ಅಲ್ಲ (2 ಕೊರಿಂಥ 4:18). ಪ್ರಶ್ನೆಯಲ್ಲಿರುವ ನಿಯಮಗಳು ನಾಶವಾಗುವ ಮಂಡಲವಾದ ಶಾರೀರಿಕ ಪ್ರಪಂಚದಲ್ಲಿನ ಸಂಗತಿಗಳನ್ನೊಳಗೊಂಡಿದ್ದವು, ಮತ್ತು ಆತ್ಮೀಕತೆಯನ್ನುಂಟು ಮಾಡುವ ಯಾವದೇ ಸ್ವಭಾವತಃ ಪ್ರಯೋಜನವನ್ನು ಹೊಂದಿರಲಿಲ್ಲ.

1. "ಹಿಡಿ" (ἅψῃ *hapsē*, ಇದು ἅπτω, *haptō* ಎಂಬ ಪದದಿಂದ ಬಂದದ್ದಾಗಿದೆ) ಎಂಬುದರ ಅರ್ಥವು ಸ್ತ್ರೀಯೊಬ್ಬಳನ್ನು ಮುಟ್ಟುವದಕ್ಕೆ ಸಂಬಂಧಿಸಿದಂತೆ ಬಳಸುವದಾದರೆ "ಲೈಂಗಿಕ ಸಂಪರ್ಕ" ಎಂದಾಗಿರುತ್ತದೆ (1 ಕೊರಿಂಥ 7:1). ಬಹಳಷ್ಟು ಸಾರಿ, ಈ ಪದವು "ಮುಟ್ಟು" (ಮತ್ತಾಯ 8:3, 15) ಅಥವಾ "ಅಂಟಿಕೊ" (ಯೋಹಾನ 20:17), ಮತ್ತು ಕೆಲವು ಸಾರಿ ಈ ವಚನದಲ್ಲಿರುವ ಪ್ರಕಾರ "ರುಚಿನೋಡು" ಅಥವಾ "ಹಿಡಿ" ಎಂಬ ಅರ್ಥವನ್ನು ಕೊಡುತ್ತದೆ. ಇದು ಲೈಂಗಿಕ ಸಂಬಂಧಗಳು ಮತ್ತು ಆಹಾರ ಎರಡನ್ನೂ ಒಳಗೊಂಡಿರಬಲ್ಲದು. ಮದುವೆಯಾಗಬಾರದೆಂತಲೂ ಇಂಥಿಂಥ ಆಹಾರವನ್ನು

ತಿನ್ನಬಾರದೆಂತಲೂ ಜನರಿಗೆ ಆಜ್ಞಾಪಿಸಲಾಗುವದು ಎಂಬದಾಗಿ ಪೌಲನು ಪ್ರವಾದಿಸಿದನು (1 ತಿಮೊಥೆ 4:3). ಪೌಲನು *hapsē* ಎಂಬ ಪದವನ್ನು ಬಳಸುವ ಮೂಲಕ ಕೇವಲ ಲೈಂಗಿಕ ಸಂಬಂಧಗಳೆಂಬ ಅರ್ಥದಲ್ಲಿ ಹೇಳಿದನೆಂದು ಕೆಲವರು ನಿರ್ಧಾರಕ್ಕೆ ಬರುತ್ತಾರೆ. ಇದರಲ್ಲಿ ಲೈಂಗಿಕ ಆಚಾರಗಳು ಸೇರಿರಬಹುದಾದಾಗ್ಯೂ, ಇದರ ಅರ್ಥವು ಇಲ್ಲಿ ಹೆಚ್ಚು ಸಾಮಾನ್ಯವಾಗಿರಬಹುದಾಗಿದೆ.

*Hapsē,* "ಹಿಡಿ," ಎಂಬುದು ಲೈಂಗಿಕ ಸಂಬಂಧಗಳಿಗೆ ಸೀಮಿತವಾಗಿರುವದಿಲ್ಲ ಎಂಬುದಕ್ಕೆ O'Brien ಮೂರು ಕಾರಣಗಳನ್ನು ಕೊಡುತ್ತಾನೆ:

> ಮೊದಲನೆಯದಾಗಿ, ಈ ಪತ್ರಿಕೆಯಲ್ಲಿ ಎಲ್ಲಿಯೂ ಸಹ ಲೈಂಗಿಕ ಸಂಬಂಧಗಳ ನಿಷಿದ್ಧದ ಸಣ್ಣದಾದ ಸುಳಿವೂ ಇರುವದಿಲ್ಲ (1 ತಿಮೊಥೆ 4:3ರ ಸುಳ್ಳು ಬೋಧಕರು ಮದುವೆಯಾಗುವದನ್ನು ನಿಷೇಧಗೊಳಿಸಿದರು ಆದರೆ ಅಲ್ಲಿ γαμέω, "ಮದುವೆಯಾಗು" ಎಂಬ ಪದ ಬಳಸಲ್ಪಟ್ಟಿದೆ). ಎರಡನೆಯದಾಗಿ, ಗ್ರೀಕ್ ಪದವಾದ ἅπτομαι ["ಹಿಡಿ"] ಎಂಬುದು ಬಳಸಲ್ಪಟ್ಟಾಗ, ಕ್ರಿಯಾಪದದ ಲಕ್ಷ್ಯವು ಸರಳವಾಗಿ ತಿಳಿಸುವದೇನೆಂದರೆ ಇಲ್ಲಿ ಅರ್ಥವು ["ಹಿಡಿ"] ಎಂದಾಗಿರುತ್ತದೆ ಎಂಬ ಸೂಚ್ಯಾರ್ಥವನ್ನೊಳಗೊಂಡಿರುತ್ತದೆ (ಆದಿಕಾಂಡ 20:4, 6; ಜ್ಞಾನೋಕ್ತಿ 6:29; 1 ಕೊರಿಂಥ 7:1). ಕ್ರಿಯಾಪದವು ಸ್ವತಃ ವ್ಯಾಪಕವಾದ ಕ್ಷೇತ್ರಗಳಿಗೆ ಅನ್ವಯಿಸಿಕೊಳ್ಳಬಲ್ಲದ್ದಾಗಿದೆ. ಮೂರನೆಯದಾಗಿ, ಅದರ ತಕ್ಷಣದಲ್ಲಿ ಬರುವ ಮಾತುಗಳು (ವ. 22, "ಆ ಪದಾರ್ಥಗಳು ಬಳಸುವದರಲ್ಲಿ ನಾಶವಾಗುತ್ತವೆ") ಸೂಚಿಸುವದೇನೆಂದರೆ ಆಹಾರ ಹಾಗೂ ಪಾನಗಳಂತಹ ಭೌತಿಕ ವಸ್ತುಗಳು ದೃಷ್ಟಿಯಲ್ಲಿರುತ್ತವೆಂಬುದೆ: ಲೈಂಗಿಕ ಸಂಬಂಧಗಳು ಎಂಬ ಅರ್ಥದಲ್ಲಿ ಹೇಳಲ್ಪಟ್ಟಿದ್ದಲ್ಲಿ, 22 ವಚನವು ಅನ್ವಯವಾಗುವದಿಲ್ಲ.[17]

2. "ರುಚಿನೋಡು" (γεύω, *geuō,* ಎಂಬುದು), ಸಾಮಾನ್ಯ ಅರ್ಥದಲ್ಲಿ, ಆಹಾರ ಅಥವಾ ಪಾನಕ್ಕೆ ಸಂಬಂಧಿಸಿದಂತೆ "ಏನೋ ಒಂದನ್ನು ಬಾಯಿಂದ ರುಚಿ ನೋಡು" ಎಂದಾಗಿರುತ್ತದೆ (ಮತ್ತಾಯ 27:34; ಲೂಕ 14:24). ಒಂದು ಸಾಂಕೇತಿಕ ಅರ್ಥದಲ್ಲಿ, ಅದು ಏನೋ ಒಂದನ್ನು "ಅನುಭವ ಮಾಡು" ಎಂಬ ಅರ್ಥವನ್ನು ಕೊಡಬಲ್ಲದು (ಇಬ್ರಿಯ 6:4, 5; 1 ಪೇತ್ರ 2:3), ಉದಾಹರಣೆಗೆ ಮರಣ (ಮತ್ತಾಯ 16:28; ಯೋಹಾನ 8:52; ಇಬ್ರಿಯ 2:9).

3. "ಮುಟ್ಟು" (θιγγάνω, *thinganō*), "ಹಿಡಿ" ಎಂಬುದರ ರೀತಿಯ ಅರ್ಥವನ್ನೇ ಹೊಂದಿದ್ದಾಗ್ಯೂ, ಲೌಕಿಕ ಬರಹಗಳಲ್ಲಿ ನೈತಿಕ ಸೂಚ್ಯಾರ್ಥವನ್ನು ಹೊಂದಿರುತ್ತದೆ. ಇಬ್ರಿಯ 11:28ರಲ್ಲಿ ಅದೇ ಪದವು ಸಂಹರಿಸು ಎಂದು ಮತ್ತು ಇಬ್ರಿಯ 12:20ರಲ್ಲಿ ದೇವರು ಧರ್ಮಶಾಸ್ತ್ರವನ್ನು ಕೊಡುವ ಸಂದರ್ಭದಲ್ಲಿ ಒಂದು ಮೃಗವು ಸಿನಾಯ್ ಪರ್ವತ ಮುಟ್ಟುವದನ್ನು ಸೂಚಿಸುತ್ತದೆ. 2:21-22ರಲ್ಲಿ ಪೌಲನ ತಾತ್ಪರ್ಯವು ಜೀವನದ ನಾಶವಾಗಬಲ್ಲ ಸಂಗತಿಗಳ ಸಂಪರ್ಕದಿಂದ ದೂರವಿರಿ ಎಂದಾಗಿರುತ್ತದೆ.

ದೇಹವನ್ನು ನಿರ್ಲಕ್ಷ ಮಾಡುವದರಿಂದ ಮತ್ತು ದಂಡಿಸಿಕೊಳ್ಳುವದರಿಂದ ಪವಿತ್ರತೆ ಉಂಟಾಗಲಾರದು ಅಥವಾ ಆತ್ಮದ ಬಲಹೀನತೆಯನ್ನು ಗುಣಪಡಿಸಲಾರದು. ಈ ಸಾಮರ್ಥ್ಯವು ಒಳಗಿನಿಂದ ಬರುತ್ತದೆ ಮತ್ತು ದೇಹದಲ್ಲಿ ಅನುಭವಿಸಲ್ಪಡುವಂಥದ್ದಾಗಿದೆ. ದೇಹದ ಮೂಲಕ ಶೋಧನೆಗಳು ಬರುತ್ತಾವಾದಾಗ್ಯೂ, ಸ್ವತಃ ದೇಹವೇ ಕೆಟ್ಟತನ ಮೂಲ ಆಗಿರುವದಿಲ್ಲ.

**“ಆ ಪದಾರ್ಥಗಳೆಲ್ಲವೂ ಬಳಸುವದರಲ್ಲಿ ನಾಶವಾಗುತ್ತವೆ” (2:21, 22)**

ಇಲ್ಲಿ ಸರಿಯಾಗಿಯೇ ಅನುವಾದಿಸಲ್ಪಟ್ಟಿರುವ ಪ್ರಕಾರ, ಇದೊಂದು ಪ್ರಕ್ಷೇಪ ರೂಪದ ಹೇಳಿಕೆಯಾಗಿರುತ್ತದೆ; ಇಲ್ಲವಾದರೆ, ಈ ಸನ್ನಿವೇಶದಲ್ಲಿ ಈ ಪದಗುಚ್ಛವನ್ನು ವಿವರಿಸುವದು ಕಷ್ಟಕರವಾಗುವದು. ಪೌಲನು ತಾತ್ಕಾಲಿಕ, ಶಾರೀರಿಕ ಸ್ವಭಾವದ ಸಂಗತಿಗಳನ್ನು, ಹಿಡಿಯಬಹುದಾದ, ಮುಟ್ಟಬಹುದಾದ, ಮತ್ತು ರುಚಿನೋಡಬಹುದಾದ ಸಂಗತಿಗಳನ್ನು ಸೂಚಿಸಿ ಹೇಳುತ್ತಿದ್ದಾನೆ. ಈ ಪದಾರ್ಥಗಳು ಬಳಸಲ್ಪಡುತ್ತವೆ ಮತ್ತು ಅಂತ್ಯಗೊಳ್ಳುತ್ತವೆ, ಆದರೆ ಆತ್ಮೀಕ ಕಾರ್ಯಗಳು ಎಂದಿಗೂ ಅಂತ್ಯಗೊಳ್ಳದವುಗಳಾಗಿವೆ (1 ಯೋಹಾನ 2:15–17). 22ಮತ್ತು 23 ವಚನಗಳಲ್ಲಿ, ತಾನು 20ನೇ ವಚನದಲ್ಲಿ ಪ್ರಸ್ತಾಪಿಸಿದ ಮತ್ತು 21ನೇ ವಚನದಲ್ಲಿ ದೃಷ್ಟಾಂತಗೊಳಿಸಿದ ನಿಬಂಧನೆಗಳನ್ನು ಅನುಸರಿಸಬಾರದೆಂಬದಕ್ಕೆ ಮೂರು ಕಾರಣಗಳನ್ನು ಕೊಟ್ಟನು.

ಮೊದಲನೆಯದಾಗಿ, ಈ ನಿಬಂಧನೆಗಳು ನಿತ್ಯವಾದ ಕಾರ್ಯಗಳಿಗೆ ಸಂಬಂಧಿಸಿದವುಗಳಲ್ಲ ಆದರೆ, ಲೋಕದ ತಾತ್ಕಾಲಿಕ ಸಂಗತಿಗಳಾಗಿವೆ, ಬಳಸಲ್ಪಟ್ಟು ನಂತರ ಇನ್ನೆಂದಿಗೂ ಪ್ರಯೋಜನಕ್ಕೆ ಬಾರದವುಗಳಾದ ನಾಶಗೊಳ್ಳುವ ಪದಾರ್ಥಗಳಾಗಿವೆ. ಅಂಥ ನಿಬಂಧನೆಗಳನ್ನು ಅನುಸರಿಸುವವರು ನಿತ್ಯತ್ವದ ಮೌಲ್ಯವುಳ್ಳದ್ದು ಯಾವದೆಂಬುದನ್ನು ಅರ್ಥಮಾಡಿಕೊಳ್ಳದವರಾಗಿರುತ್ತಾರೆ. ಅವರು ಜೀವನದಲ್ಲಿ ಯಾವದು ಪ್ರಾಮುಖ್ಯ ಎಂಬುದರ ಕುರಿತಾಗಿ ಸುಳ್ಳಾದ ಅರ್ಥವನ್ನು ಹೊಂದಿದ್ದಾರೆ. ಅವರು ಶಾಶ್ವತ ಪ್ರಯೋಜನವುಳ್ಳ ಸಂಗತಿಗಳು ತಾತ್ಕಾಲಿಕವಾದವುಗಳ, ಮತ್ತು ನಿತ್ಯತ್ವದ ದೃಷ್ಟಿಯಲ್ಲಿ ನೋಡಿದರೆ, ನಿಷ್ಪ್ರಯೋಜಕವಾದವುಗಳ ನಿಯಂತ್ರಣದಲ್ಲಿರುತ್ತವೆಂದು ಭಾವಿಸಿಕೊಳ್ಳುವ ಕೊಲೊಸ್ಸೆಯ ವರನ್ನು ನಡಿಸುವರು.

ಅಪೊಸ್ತಲನು ಇಲ್ಲಿ ಅನುಸರಿಸುವ ದಾರಿಯು ಯೆಹೂದ್ಯರ ಮನುಷ್ಯ ಕಲ್ಪಿತ ಆಜ್ಞೆಗಳನ್ನು ಯೇಸುವು ಖಂಡನೆ ಮಾಡುವದರೊಂದಿಗೆ ಉತ್ತಮವಾಗಿ ಸರಿಹೊಂದುತ್ತದೆ. ಅವರ ಸಂಪ್ರದಾಯಗಳಲ್ಲಿದ್ದ ನಿಷಿದ್ಧಗೊಳಿಸಲ್ಪಟ್ಟವುಗಳು ದೇವರ ಆಜ್ಞೆಗಳ ಉಲ್ಲಂಘನೆಯಾಗಿದ್ದವು (ಮಾರ್ಕ 7:7, 8). ಅವರ ಸಂಪ್ರದಾಯಗಳಲ್ಲಿ ಸ್ವಚ್ಛತೆಯ ನಿಯಮಗಳು ಮತ್ತು ಆಹಾರದ ನಿಷೇಧಗಳು ಸೇರಿದ್ದವು, ಅವುಗಳನ್ನು ಆಚರಣೆ ಮಾಡುವವರಲ್ಲಿ ಭಕ್ತಿವೃದ್ಧಿಯುಂಟಾಗುತ್ತದೆಂದು ಭಾವಿಸಿಕೊಂಡವರಾಗಿ ಅವರು ಅವುಗಳನ್ನು ಅಳವಡಿಸಿಕೊಂಡು ಬೇರೆಯವರ ಮೇಲೆ ನಿರ್ಬಂಧಗೊಳಿಸಿದ್ದರು. ಆ ರೀತಿಯ ಶಾರೀರಿಕವಾದ ನಿಷಿದ್ಧತೆಗಳು ಭಕ್ತಿಯೊಂದಿಗೆ ಯಾವದೇ ಸಂಬಂಧ ಹೊಂದಿರುವದಿಲ್ಲ ಎಂಬದನ್ನು ಯೇಸು ಪ್ರಕಟಗೊಳಿಸುತ್ತಾನೆ:

> ಹೊರಗಿನಿಂದ ಮನುಷ್ಯನೊಳಕ್ಕೆ ಹೋಗುವಂಥದು ಅವನ ಹೃದಯದೊಳಕ್ಕೆ ಸೇರದೆ ಹೊಟ್ಟೆಯಲ್ಲಿ ಸೇರಿ ಬಹಿರ್ದೇಶಕ್ಕೆ ಹೋಗುವದೆಂದು ನಿಮಗೆ ತಿಳಿಯಲಿಲ್ಲವೇ . . . ಮನುಷ್ಯನೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆಮಾಡುವದು (ಮಾರ್ಕ 7:18–20).

ಬೇರೊಂದು ಕಡೆಯಲ್ಲಿ, ಪೌಲನು ದೇವರ ರಾಜ್ಯವು ಆತ್ಮೀಕವಾದದ್ದು, ಅದು “ತಿನ್ನುವದೂ ಕುಡಿಯುವದೂ ಅಲ್ಲ” ಎಂಬುದನ್ನು ಒತ್ತಿ ಹೇಳಿದನು (ರೋಮಾ 14:17). ದೇವರು ಹೊಟ್ಟೆ ಮತ್ತು ಭೋಜನ ಎರಡನ್ನೂ “ತೆಗೆದು ಹಾಕುವನು” (1 ಕೊರಿಂಥ 6:13).

ಈ ವಾಕ್ಯಭಾಗದಲ್ಲಿ ಆತನು ಸ್ವ-ನಿರಾಕರಣೆಯು ಯಾವದೇ ಆತ್ಮೀಕ ಪ್ರಯೋಜನವಿಲ್ಲದ್ದೆಂಬ ಸತ್ಯವನ್ನು ಒತ್ತಿ ಹೇಳುವ ಮೂಲಕ ವಿರಕ್ತರ ಮನೋಭಾವಕ್ಕೆ ಉತ್ತರಿಸುತ್ತಿದ್ದಾನೆ. ಕ್ರೈಸ್ತ ಜೀವನವು ದೇವರ ಆತ್ಮೀಕ ಕಾರ್ಯಗಳ ಮೇಲೆ ನಿರ್ಮಿತವಾಗಿರುತ್ತದೆ; ಅದು ಜೀವನದಲ್ಲಿ ನಾಸಗೊಳ್ಳುವ ಪದಾರ್ಥಗಳು ಆತ್ಮೀಕ ಜೀವಿತವನ್ನುಂಟು ಮಾಡಬಲ್ಲವೆಂದು ಅವರು ಯೋಚಿಸುವ ಮನುಷ್ಯ ಕಲ್ಪಿತ ನಿಯಮಗಳ ಮೇಲೆ ಆಧಾರವಾಗಿರುವದಿಲ್ಲ. ಶಾರೀರಿಕ ಜೀವಿತಕ್ಕೆ ಕೆಲವೊಂದು ಪದಾರ್ಥಗಳು ಸಾರಭೂತವಾಗಿರುತ್ತವೆ, ಆದರೆ ಕ್ರೈಸ್ತರ ಜೀವಿತಗಳಲ್ಲಿ ಭಕ್ತಿಯನ್ನುಂಟು ಮಾಡುವದರಲ್ಲಿ ಇವುಗಳಿಗೆ ಯಾವ ಸಂಬಂಧವೂ ಇರುವದಿಲ್ಲ. ಭೌತಿಕ ಕಾರ್ಯಗಳ ಮೇಲೆ ದೃಷ್ಟಿಯಿಟ್ಟು ಜೀವಿಸುವದು ಆತ್ಮೀಕತೆಗೆ ಅಡ್ಡಿಯನ್ನುಂಟು ಮಾಡುತ್ತದೆ. ಯೇಸು ಹೀಗೆ ಹೇಳಿದನು, "ಯಾವನೂ ಇಬ್ಬರು ಯಜಮಾನರಿಗೆ ಸೇವೆಮಾಡಲಾರನು" (ಮತ್ತಾಯ 6:24).

### "ಮನುಷ್ಯಕಲ್ಪಿತ ಆಜ್ಞೆಗಳನ್ನೂ ಉಪದೇಶಗಳನ್ನೂ ಅನುಸರಿಸಿ" (2:20)

ಪೌಲನು ಈ ಮುಂಚೆ ಹೇಳಿದ ನಿಬಂಧನೆಗಳನ್ನು ಅನುಸರಿಸದಿರುವದಕ್ಕೆ ಈ ಪದಗುಚ್ಛವು ಎರಡನೆಯ ಕಾರಣವನ್ನು ಒದಗಿಸುತ್ತದೆ: ಅಂಥ ನಿಯಮಗಳು ಕೈಕೊಂಡು ನಡೆಯತಕ್ಕವುಗಳಲ್ಲ ಯಾಕೆಂದರೆ ಅವುಗಳು ಮನುಷ್ಯರಿಂದ ಉತ್ಪತ್ತಿಯಾದವುಗಳು ಮತ್ತು ಮನುಷ್ಯರನ್ನು ತಮ್ಮ ಮೂಲವಾಗಿ ಹೊಂದಿರುವವುಗಳಾಗಿವೆ. **ಮನುಷ್ಯರ ಆಜ್ಞೆಗಳನ್ನೂ ಉಪದೇಶಗಳನ್ನೂ** ಎಂಬ ಪದಗುಚ್ಛವು ಬೈಬಲಿನಲ್ಲಿರುವ ಇತರ ಪದವಿನ್ಯಾಸದೊಂದಿಗೆ ಹೋಲಿಕೆಯಲ್ಲಿರುತ್ತದೆ. ಮತ್ತಾಯ 15:9 ಮತ್ತು ಮಾರ್ಕ 7:7ರಲ್ಲಿ, ಯೇಸು ಯೆಶಾಯ 29:13ರ ಪ್ರವಾದನೆಯನ್ನು ದೇವರ ಆಜ್ಞೆಗಳಿಗೆ ತಮ್ಮದೇ ಆಗಿರುವ ಆಜ್ಞೆಗಳನ್ನೂ ಸಂಪ್ರದಾಯಗಳನ್ನು ಸೇರ್ಪಡೆಗೊಳಿಸಿದ ಯೆಹೂದ್ಯರಿಗೆ ಅನ್ವಯಗೊಳಿಸುತ್ತಾನೆ. ಅವರು ದೇವರ ಕಟ್ಟಳೆಗಳಿಗೆ ವಿಧೇಯರಾಗುವ ಬದಲಾಗಿ, ತಮ್ಮ ಸ್ವಂತ ಸಂಪ್ರದಾಯಗಳನ್ನು ಹಿಂಬಾಲಿಸುವದಕ್ಕೋಸ್ಕರ ಅವುಗಳನ್ನು ಅಸಡ್ಡೆ ಮಾಡುವವರಾಗಿದ್ದಾರೆಂದು ಆತನು ಹೇಳುತ್ತಾನೆ (ಮಾರ್ಕ 7:8). ಈ ವಿಧದಲ್ಲಿ, ಅವರು ದೇವರ ಆಜ್ಞೆಗಳನ್ನು ವ್ಯರ್ಥಮಾಡುವವರಾಗಿದ್ದರು (ಮಾರ್ಕ 7:13).

ಪೌಲನು ಇಲ್ಲಿ ಕೆಲವು ಯೆಹೂದ್ಯರ ವಿರಕ್ತ ಆಚಾರಗಳನ್ನು ಅಥವಾ ಸನ್ಯಾಸತ್ವ ಮತ್ತು ಕಟ್ಟುನಿಟ್ಟಿನ ಆಹಾರ ಪದ್ಧತಿಯ ನಿಯಮಗಳನ್ನು ಅನುಸರಿಸುತ್ತಿದ್ದಂಥ ಎಸ್ಸೇನರ ಜೀವನಶೈಲಿಯನ್ನು ಸೂಚಿಸಿ ಹೇಳುತ್ತಿದ್ದಾನೆಂದು ಕೆಲವರು ಭಾವಿಸುತ್ತಾರೆ. ಇದು ನಿಜವಾಗಿರಬಹುದಾಗಿದೆ, ಯಾಕೆಂದರೆ ಈ ಎರಡು ಗುಂಪುಗಳು ತಮ್ಮ ಹಿಂಬಾಲಕರ ಮೇಲೆ ಕಟ್ಟುನಿಟ್ಟಿನ ಆಹಾರ ನಿಯಮಗಳನ್ನು ಹೇರುತ್ತಿದ್ದರು; ಹೇಗೂ, ಯಾರಿಗೂ ಖಚಿತವಾಗಿ ತಿಳಿಯದು.

"ಮನುಷ್ಯರ" ಎಂಬುದರ ಅನುವಾದಿತ ಪದವಾದ ἄνθρωποι (*anthrōpoi*) ಎಂಬುದರ ಅರ್ಥವು "ಮಾನವರು" ಎಂದಾಗಿರುತ್ತದೆ. ಇದರಲ್ಲಿ ಪುರುಷರು ಮತ್ತು ಸ್ತ್ರೀಯರು ಇಬ್ಬರೂ ಸೇರಿದ್ದಾರೆ. ಕೇವಲ ಒಬ್ಬ ಪುರುಷ ಅಥವಾ ಗಂಡನನ್ನು ಸೂಚಿಸುವ ἀνήρ (*anēr*) ಎಂಬ ಗ್ರೀಕ್ ಪದವು ಹೊಸ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಕೇವಲ ಎರಡು ಸಾರಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, ಅಲ್ಲಿ ಅದು "ಗಂಡಂದಿರು" ಎಂದು ಅನುವಾದಿಸಲ್ಪಟ್ಟಿರುತ್ತದೆ (3:18, 19). ಮನುಷ್ಯ ಆಜ್ಞೆಗಳು ಮತ್ತು ಉಪದೇಶಗಳು

ಪುರುಷರು ಹಾಗೂ ಸ್ತ್ರೀಯರಿಬ್ಬರ ಪ್ರಭಾವದ ಫಲಿತವಾಗಿರುತ್ತವೆ. ಕ್ರೈಸ್ತರು ಅನುಸರಿಸಿ ಜೀವಿಸಬೇಕಾದ ಮಾನದಂಡವು ಸಮಾಜವಾಗಿರುವದಿಲ್ಲ. ಏಕೈಕ ಧರ್ಮಶಾಸ್ತ್ರದಾಯಕನಾದ ಯೇಸು (ಯಾಕೋಬ 4:12) ಮಾತ್ರವೇ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಸಕಲ ಅಧಿಕಾರವನ್ನು ಹೊಂದಿದ್ದಾನೆ (ಮತ್ತಾಯ 28:18), ಮತ್ತು ತನಗೆ ವಿಧೇಯರಾಗುವವರಿಗೆ ನಿತ್ಯವಾದ ರಕ್ಷಣೆಯನ್ನು ಒದಗಿಸುತ್ತಾನೆ (ಇಬ್ರಿಯ 5:9).

ಪೌಲನು ಕೊಲೊಸ್ಸೆಯವರಿಗೆ ಕೊಟ್ಟ ಬೋಧನೆಯು ಈಗಿನ ಕಾಲಕ್ಕೆ ಅನ್ವಯಿಕೆಯನ್ನು ಹೊಂದಿದೆ. ದೇವರ ಆರಾಧನೆ ಮತ್ತು ಸೇವೆಯೊಳಗೆ ತಾವು ಇಷ್ಟ ಪಡುವ ಯಾವದನ್ನೇ ಆಗಲಿ ಮತ್ತು ಎಲ್ಲವನ್ನೂ ಆಗಲಿ ಸೇರ್ಪಡೆಗೊಳಿಸುವಂಥವರ ಬಗ್ಗೆ ಕ್ರೈಸ್ತರು ಎಚ್ಚರಿಕೆಯಾಗಿರಬೇಕು. ತಂದೆಯು "ಆತ್ಮದಲ್ಲಿಯೂ ಸತ್ಯದಲ್ಲಿಯೂ" ಆರಾಧಿಸಲ್ಪಡತಕ್ಕದ್ದೆಂದು ಯೇಸು ಹೇಳಿದನು (ಯೋಹಾನ 4:23, 24). ಅಲ್ಲದೆ ಶಿಷ್ಯರಾಗುವವರಿಗೆ ತಾನು ಉಪದೇಶಿಸಿರುವದನ್ನೆಲ್ಲಾ "ಕೈಕೊಂಡು ನಡೆಯುವಂತೆ" ಬೋಧಿಸಬೇಕೆಂದು ಸಹ ಆತನು ಅಪೊಸ್ತಲರಿಗೆ ಅಪ್ಪಣೆ ಕೊಟ್ಟನು (ಮತ್ತಾಯ 28:20). ಆದಿ ಸಭೆಯು "ಅಪೊಸ್ತಲರ ಬೋಧನೆಯನ್ನು" ಕೇಳುವದರಲ್ಲಿ ನಿರತವಾಗಿತ್ತು (ಅಪೊಸ್ತಲರ ಕೃತ್ಯಗಳು 2:42).

2ನೇ ಅಧ್ಯಾಯವು ಯೇಸುವನ್ನು – ಮತ್ತು ಆತನೊಬ್ಬನನ್ನೇ – ಹಿಂಬಾಲಿಸಬೇಕು ಎಂಬದನ್ನು ಒತ್ತಿ ಹೇಳುತ್ತದೆ. ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳೆಲ್ಲಾ ಆತನಲ್ಲಿಯೇ ಇರುತ್ತವೆ (ವ. 3). ಕ್ರೈಸ್ತರಾಗಿ, ನಾವು ಆತನಲ್ಲಿದ್ದುಕೊಂಡು ನಡೆಯುವವರಾಗಿರಬೇಕು (ವ. 6) ಮತ್ತು ಆತನಲ್ಲಿದ್ದುಕೊಂಡು ಭಕ್ತವೃದ್ಧಿಯನ್ನು ಹೊಂದಬೇಕು (ವ. 7); ನಾವು ಮನುಷ್ಯರ ಸಂಪ್ರದಾಯಗಳನ್ನು ಮತ್ತು ಪ್ರಾಪಂಚಿಕ ಬಾಳಬೋಧೆಯನ್ನು ಅನುಸರಿಸಕೂಡದು (ವ. 8). ನಾವು ತೆಗೆದುಹಾಕಲ್ಪಟ್ಟಿರುವಂಥ ವಿಧಿಗಳನ್ನು ಅನುಸರಿಸದಿರುವ ವಿಷಯದಲ್ಲಿ ನಮ್ಮನ್ನು ದೋಷಿಗಳೆಂದು ಎಣಿಸುವದಕ್ಕೆ ಯಾರಿಗೂ ಅವಕಾಶ ಕೊಡಬಾರದು (ವಚನಗಳು 14, 16). ಯೇಸುವನ್ನು ಹೊಂದಿಕೊಂಡಿರುವದರ ಬದಲಾಗಿ ಸುಳ್ಳು ಆರಾಧನೆಯ ಮೂಲಕವಾಗಿ ಅಪಹರಿಸಲ್ಪಟ್ಟವರಾಗುವದರಿಂದ ದೂರವಿರಬೇಕು (ವ. 18), ಮತ್ತು ನಾವು ಮನುಷ್ಯರ ಆಜ್ಞೆಗಳನ್ನೂ ಉಪದೇಶವನ್ನೂ ಅನುಸರಿಸದಂತೆ ದೂರವಿರಬೇಕು (ವ. 22).

## "ಅಂಥ ಉಪದೇಶಗಳು . . . ಹೆಸರಿಗೆ ಮಾತ್ರ ಜ್ಞಾನವೆನಿಸಿಕೊಳ್ಳುತ್ತವೆಯಲ್ಲದೆ" (2:23)

ಕೆಲವರು ಈ ವಾಕ್ಯವನ್ನು ಪುನಾರಚನೆ ಮಾಡುವದಕ್ಕೆ ಪ್ರಯತ್ನಿಸುತ್ತಾ ತೊಡಕಿನಿಂದ ಕೂಡಿದ ವಿವರಣೆಗಳನ್ನು ಕೊಡುವದಕ್ಕೆ ನೋಡುತ್ತಾರೆ; ಆದರೆ ಯು ಅತ್ಯುತ್ತಮವಾದ ಅನುವಾದವನ್ನು ನೀಡುತ್ತದೆ.

ಸ್ಪಷ್ಟವಾಗಿ, ಈ ಪಟ್ಟಿಯನ್ನು ಅಂಗೀಕಾರವಾಗದಂಥ ಎಲ್ಲಾ ಮನುಷ್ಯ ಕಲ್ಪಿತ ಆಜ್ಞೆಗಳನ್ನು ಒಳಗೊಂಡದ್ದೆಂಬದಾಗಿ ಅರ್ಥೈಸಿಕೊಳ್ಳಬೇಕೆಂಬುದು ಪೌಲನ ಉದ್ದೇಶವಾಗಿರಲಿಲ್ಲ. **ಅಂಥ** ಎಂಬ ಪದದ ವಿಷಯದಲ್ಲಿ Moule ಸರಿಯಾದ ಅಭಿಪ್ರಾಯ ವ್ಯಕ್ತಪಡಿಸುತ್ತಾ ಹೀಗೆ ಬರೆಯುತ್ತಾನೆ, "ಹೆಚ್ಚು ನಿಖರವಾಗಿ, ಪದವು ಸಹಿಸಿಕೊಳ್ಳಲ್ಪಡುವದಾದಲ್ಲಿ, *ಅವು ಈ ರೀತಿಯ* [ಇಂತಹ] *ಸಂಗತಿಗಳು*; ಮೇಲೆ ಕೊಡಲಾದ ನಿಷಿದ್ಧತೆಗಳು, ವ. 21, ಮತ್ತು ಇದೇ ಮೂಲತತ್ವದ ಮೇಲೆ ಆಧಾರವಾಗಿರುವ

ಇತರ ಎಲ್ಲಾ ಸಂಗತಿಗಳು."[18] ಪಟ್ಟಿ ಮಾಡಲಾಗಿರುವ ರೀತಿಯ ಇತರ ಯಾವದೇ ತತ್ವಜ್ಞಾನಗಳು ಕೊಲೊಸ್ಸೆಯವರಿಗೆ ಅನುಸರಿಸುವದಕ್ಕಾಗಿ ಇರುವಂಥವುಗಳಲ್ಲ. ಬೇರೊಂದು ಕಡೆಯಲ್ಲಿ, ಪೌಲನು ಶರೀರಭಾವದ ಅಂಗೀಕರಿಸಲ್ಪಡಲಾಗದ ಚಟುವಟಿಕೆಗಳನ್ನು ಪಟ್ಟಿ ಮಾಡಿದ ಬಳಿಕ "ಇಂಥವುಗಳೇ" ಎಂಬದಾಗಿ ಸೇರ್ಪಡೆಗೊಳಿಸುತ್ತಾನೆ (ಗಲಾತ್ಯ 5:21), ಹೀಗೆ ಪಟ್ಟಿಯು ಅಪೂರ್ಣವಾದದ್ದು ಆದರೆ ಶರೀರಭಾವದ ಇತರ ಕೃತ್ಯಗಳಿಗೆ ಪ್ರಮಾಣವಾಗಿ ಬಳಸಲ್ಪಡಬಹುದು ಎಂಬ ಅರ್ಥವಾಗಿರುತ್ತದೆ.

**ಹೆಸರಿಗೆ** ಎಂಬುದು λόγος (*logos*) ಎಂಬ ಪದದಿಂದ ಅನುವಾದಿಸಲ್ಪಟ್ಟಿರುತ್ತದೆ, ಸಾಮಾನ್ಯವಾಗಿ ಅದು "ವಾಕ್ಯ" ಎಂದು ಅನುವಾದಿಸಲ್ಪಡುತ್ತದೆ. ಇಲ್ಲಿ, ಯೋಚನೆಯು ಒಂದು "ಅಭಿವ್ಯಕ್ತಗೊಳಿಸುವಿಕೆ," "ಪ್ರತಿನಿಧಿಸುವಿಕೆ," ಅಥವಾ ಜ್ಞಾನದ ವಾಸ್ತವಿಕತೆಗೆ ತದ್ವಿರುದ್ಧವಾಗಿ ಅದರ "ತೋರಿಕೆ" ಎಂಬದಾಗಿರುತ್ತದೆ. ಲೋಕದ ದೃಷ್ಟಿಯಿಂದ ನೋಡಿದರೆ, ಮನುಷ್ಯರಿಂದ ಕಲ್ಪಿಸಲಾಗಿರುವ ಆಜ್ಞೆಗಳು ಜ್ಞಾನವೆಂಬಂತೆ ಕಾಣಿಸಬಹುದು, ಯಾಕೆಂದರೆ ಅವುಗಳು ಆತ್ಮೀಕತೆಗೆ ಅಗತ್ಯವಾಗಿರುವ ಸ್ವ – ನಿಗ್ರಹವನ್ನು ಒದಗಿಸುವಂತೆ ತೋರುತ್ತವೆ. ಹೇಗೂ, ಅಂತಹ ಸ್ವ – ನಿರಾಕಣೆಯು ಕೆಟ್ಟ ಸಂಗತಿಗಳಿಂದ ದೂರವಿರುವದಕ್ಕೆ ಪ್ರೇರಣೆಯನ್ನು ಒದಗಿಸುವದಿಲ್ಲ, ಪರಿಶುದ್ಧತೆಯ ವೃದ್ಧಿಯನ್ನು ಖಾತ್ರಗೊಳಿಸುವದೂ ಇಲ್ಲ. ಒಬ್ಬನು ತಪ್ಪು ಮಾಡುವದರಿಂದ ದೂರವಿರುತ್ತಾನೆಂಬ ವಾಸ್ತವಾಂಶವು ಅವಶ್ಯಕವಾಗಿ ಆತನು ಸಕಾರಾತ್ಮಕ, ನ್ಯಾಯವಾದ ಜೀವಿತದಲ್ಲಿ ತೊಡಗಿಸಿಕೊಂಡಿರುತ್ತಾನೆಂಬ ಅರ್ಥವನ್ನು ಕೊಡುವದಿಲ್ಲ. ಆತನು ಕಳ್ಳತನ ಮಾಡದಿರಬಹುದು, ಸುಳ್ಳು ಹೇಳದಿರಬಹುದು, ವ್ಯಭಿಚಾರ, ಅಥವಾ ನರಹತ್ಯೆ ಮಾಡದಿರಬಹುದು – ಆದರೆ ಇದರರ್ಥವು ಆತನು ನೆರೆಯವರ ಸೇವೆಯನ್ನು ಮಾಡುವನು ಮತ್ತು ದೇವರೊಂದಿಗೆ ನಿಕಟವಾದ ಸಂಬಂಧವನ್ನು ಅಭಿವೃದ್ಧಿಪಡಿಸಿಕೊಳ್ಳುವನೆಂದಾಗುವದಿಲ್ಲ. ಭಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವದರಲ್ಲಿ, ಶಾರೀರಿಕ ನಡವಳಿಕೆಯನ್ನು ನಿಗ್ರಹಿಸುವಂತಹ ಕೆಲವೊಂದು ನಿಯಮಗಳಿಗಿಂತಲೂ ಅಧಿಕವಾದದ್ದರ ಅಗತ್ಯವಿರುತ್ತದೆ.

ನಿಯಮಗಳು ಸಮಾಜವನ್ನು ನಿಯಂತ್ರಿಸುವದಾಗಿದ್ದಲ್ಲಿ, ಆರಕ್ಷಕ ಪಡೆಗಳ ಹಾಗೂ ಸಮುದಾಯದ ಒತ್ತಡದ ಅಗತ್ಯವಿರುತ್ತಿರಲಿಲ್ಲ. ಒಂದು ಸಮಾಜಕ್ಕೆ ಸಮಾಜವನ್ನು ಹಾನಿಗೊಳಿಸಬಹುದಾದ ಪ್ರತಿಯೊಂದು ಸಂಭವಣೀಯವಾದ ಪರಿಸ್ಥಿತಿಗೆ ಸಂಬಂಧಪಡುವಂತಹ ಕಾನೂನುಗಳಷ್ಟೆ ಅಗತ್ಯವಿರುತ್ತದೆ; ಆಗ ಯಾವ ಅಪರಾಧಗಳೂ ಮಾಡಲ್ಪಡುವದಿಲ್ಲ. ಕಾನೂನುಗಳು ಪ್ರಾಮುಖ್ಯವಾಗಿವೆ, ಆದರೆ ಕಾನೂನಿಗಿಂತಲೂ ಅಧಿಕವಾಗಿ ಸಮುದಾಯದಲ್ಲಿ ಸ್ವ – ನಿಗ್ರಹ, ಪ್ರಶಾಂತತೆ, ಮತ್ತು ಸಾಮರಸ್ಯಗಳನ್ನು ಉಂಟು ಮಾಡುವ ಅವಶ್ಯಕತೆಯಿರುತ್ತದೆ.

## "ಸ್ವಕಲ್ಪಿತಾಚಾರವನ್ನೂ ಅತಿವಿನಯವನ್ನೂ ದೇಹದಂಡನೆಯನ್ನೂ ಬೋಧೀಸುತ್ತಾ" (2:23)

ಪೌಲನು ಸ್ವಂತವಾಗಿ ವಿಧಿಸಲ್ಪಟ್ಟಿರುವ ಮೂರು ಮನುಷ್ಯ ಆಚಾರಗಳನ್ನು ಹೆಸರಿಸುತ್ತಾನೆ: (1) **ಸ್ವಕಲ್ಪಿತಾಚಾರವನ್ನೂ**, (2) **ಅತಿವಿನಯವನ್ನೂ**, ಮತ್ತು (3) **ದೇಹದಂಡನೆಯನ್ನೂ**. "ಸ್ವಕಲ್ಪಿತಾಚಾರ" ಎಂಬುದರ ಅನುವಾದಿತ (ἐθελοθρησκία,

*ethelothrēskia*) ಪದವು TEV ತರ್ಜುಮೆಯಲ್ಲಿ "ದೇವದೂತರ ಆರಾಧನೆ" ಎಂದು ಅನುವಾದಿಸಲ್ಪಟ್ಟಿರುತ್ತದೆ; ಇದು Schweizerನಿಂದ ಅಭಿಪ್ರಾಯಪಡಲ್ಪಟ್ಟಿರುವ ಅನುವಾದವು ಸಹ ಆಗಿರುತ್ತದೆ.[19] ಇದು 18ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಂಥ, ದೇವದೂತರ ಆರಾಧನೆಯನ್ನು ಸೂಚಿಸಿ ಹೇಳುವದಾಗಿದೆ ಎಂದು ಕೆಲವರು ಯೋಚಿಸುತ್ತಾರೆ. ಈ ಪದದ ಮೂಲವು ತಿಳಿದು ಬಂದಿರುವದಿಲ್ಲ, ಮತ್ತು ಇದನ್ನು ಪೌಲನು ಬಳಸುವ ಮುಂಚೆ ಇದು ಸಾಹಿತ್ಯಗಳಲ್ಲಿ ಕಂಡು ಬಂದಿರುವದಿಲ್ಲ. ಆದುದರಿಂದ, ಆತನೇ ಇದನ್ನು ಹುಟ್ಟುಹಾಕಿದನೆಂದು ಕೆಲವು ನಿರ್ಧಾರಕ್ಕೆ ಬಂದಿರುತ್ತಾರೆ. ಹೊಸ ಒಡಂಬಡಿಕೆಯಲ್ಲಿ ಇದು ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತಾದ್ದರಿಂದ, ಅದರ ಅರ್ಥವನ್ನು ನಿರ್ಧರಿಸುವದಕ್ಕೋಸ್ಕರ ಇತರ ದಸ್ತಾವೇಜುಗಳಲ್ಲಿ ಅದರ ಬಳಕೆಯನ್ನ ಪರಿಗಣಿಸತಕ್ಕದ್ದು. ಇದೊಂದು ಸಂಯುಕ್ತ ಪದವಾಗಿದ್ದು θρεσκεία (*thrēskeia*) ಎಂಬುದನ್ನು ಒಳಗೊಂಡಿರುತ್ತದೆ, ಇದು ಒಂದು ನಾಮಪದವಾಗಿದ್ದು "ಧರ್ಮ" (ಯಾಕೋಬ 1:26, 27) ಎಂದು ಅನುವಾದಿಸಲ್ಪಟ್ಟಿದೆ. ಆರಾಧನೆಗೆ ಅನ್ವಯಿಸುವದಾದಲ್ಲಿ, *ethelothrēskia* ಎಂಬುದು ದೀನತೆಯಿಂದ ಕೂಡಿದ ಯಥಾರ್ಥ ಭಕ್ತಿಗೆ ವಿರುದ್ಧವಾಗಿ ಆತ್ಮೀಕ ಆಶೀರ್ವಾದಗಳನ್ನು ಗಳಿಸಿ ಕೊಡುವಂಥ ಮನುಷ್ಯ ಅರ್ಹತೆಯ ಮೇರೆಗೆ ಮಾಡಲ್ಪಡುವ ಧಾರ್ಮಿಕ ಸೇವೆ ಎಂಬ ಅರ್ಥವನ್ನು ಕೊಡುತ್ತದೆ.

ಎರಡೂ ವಾಕ್ಯಭಾಗಗಳಲ್ಲಿ ಅರ್ಥವು ಸ್ವ-ನಿರಾಕರಣೆ ಜೊತೆಯಲ್ಲಿ ಕಠಿಣವಾದ ಉಪವಾಸ ಎಂಬುದನ್ನು ಒಳಗೊಂಡಿರಬಹುದಾಗಿದೆ. O'Brien ಹೀಗೆ ಅಭಿಪ್ರಾಯ ಪಡುತ್ತಾನೆ, "ಈ ರೀತಿಯ ವಿರಕ್ತ ಆಚಾರಗಳು ಒಂದು ರೀತಿಯ 'ವಿನತೆಯ ತಂತ್ರ' ಆಗಿದ್ದವು ಮತ್ತು ಪರಲೌಕಿಕ ದರ್ಶನಗಳನ್ನು ಹೊಂದಿಕೊಳ್ಳುವದರಲ್ಲಿ ಪರಿಣಾಮಕಾರಿ ಎಂದು ಪರಿಗಣಿಸಲ್ಪಟ್ಟಿದ್ದವು."[20] ಬಹುಶಃ ಕೆಲವು ಜನರು ಯಾರ ದೇಹವು ಅತ್ಯಂಥ ಹೆಚ್ಚಾಗಿ ದಂಡಿಸಲ್ಪಟ್ಟಿರುವದಾಗಿ ಕಾಣುತ್ತದೋ ಅವರೇ ಹೆಚ್ಚು ಧಾರ್ಮಿಕವಾದವರೆಂದು ನಂಬಿದ್ದರು.

ದೇಹದ (ಕಠಿಣ) "ದಂಡನೆ" (ἀφειδία, *apheidia*, ಅಕ್ಷರಶಃ ದೇಹದ "ವಿಫುಲವಾದ" ಬಳಕೆ) ಸಹ ವಿರಕ್ತರಿಂದ ಬಹಳ ಶಿಫಾರಸ್ಸು ಮಾಡಲ್ಪಟ್ಟಿತ್ತು. ಕಠಿಣವಾಗಿ ದೇಹ ದಂಡನೆಯನ್ನು ಆಚರಿಸುವದ ಮೂಲಕವಾಗಿ ಧಾರ್ಮೀಕ ವೈರಾಗ್ಯ ಮತ್ತು ಸಮರ್ಪಣೆಯನ್ನು ಸಾಧಿಸಬಹುದು ಎಂಬದಾಗಿ ಅವರು ಭಾವಿಸಿಕೊಂಡಿದ್ದರು. ದೇಹವನ್ನು ಆತ್ಮದ ಕಾರಾಗೃಹ, ಅದರ ಕಷ್ಟಗಳಿಗೆ ಒಪ್ಪಿಸಿಕೊಂಡು ಅನುಭವಿಸಬೇಕಾದ ಒಂದು ಭಾರ ಎಂದು ಪರಿಗಣಿಸಲ್ಪಟ್ಟಿತ್ತು. ಆತ್ಮ ಮತ್ತು ದೇಹಗಳು ಒಂದಕ್ಕೊಂದು ಹೊಂದಾಣಿಕೆಯಾಗದವುಳೆಂದು ಪರಿಗಣಿಸಲಾಗಿತ್ತು. ದೇಹವನ್ನು ಕಠಿಣವಾಗಿ ದಂಡಿಸಿಕೊಳ್ಳುವದರಿಂದ, ಆತ್ಮವನ್ನು ದೇಹದ ದುರ್ಬಲಗೊಳಿಸುವ ಇಚ್ಛೆಗಳಿಂದ ವಿಮುಕ್ತಗೊಳಿಸುವದರಿಂದ ಪರಿಶುದ್ಧತೆಯನ್ನು ಗಳಿಸಿಕೊಳ್ಳಬಹುದೆಂದು ಭಾವಿಸಲಾಗುತ್ತಿತ್ತು. ಪೌಲನು ತಿಮೊಥೆಗೆ ಬರೆದ ತನ್ನ ಪತ್ರಿಕೆಯಲ್ಲಿ "ಮದುವೆಯಾಗಬಾರದೆಂತಲೂ ಇಂಥಿಂಥ ಆಹಾರವನ್ನು ತಿನ್ನಬಾರದೆಂತಲೂ" ಹೇಳುವವರ ವಿಷಯದಲ್ಲಿ ಬರೆಯುತ್ತಾ ಇಂಥವರನ್ನು ಸೂಚಿಸುತ್ತಾನೆ (1 ತಿಮೊಥೆ 4:3).

ಬಾಳ್‌ನ ವಿಗ್ರಹಾರಾಧಕ ಯಾಜಕರು ತಮ್ಮ ದೇಹಗಳನ್ನು ಕಡಿದುಕೊಳ್ಳುವದರಿಂದ ಬಾಳ್‌ನ ಗಮನವನ್ನು ಸೆಳೆಯಬಹುದೆಂದು ಮತ್ತು ಸಹಾಯಕ್ಕಾಗಿ ತಾವು ಮಾಡುತ್ತಿರುವ

ವಿಜ್ಞಾಪನೆಯನ್ನು ಕೇಳುವಂತೆ ಮಾಡುವದೆಂದು ಭಾವಿಸಿಕೊಂಡರು (1 ಅರಸು 18:26-28). ಇಂದು ಕೆಲವು ಧರ್ಮಗಳಲ್ಲಿ, ದೈಹಿಕ ಹಾನಿಗೊಳಿಸಿಕೊಳ್ಳುವಿಕೆ ಮತ್ತು ಯಜ್ಞ ಮಾಡುವಿಕೆಗಳನ್ನು ಭಕ್ತಿ, ಆಶೀರ್ವಾದಗಳನ್ನು, ಮತ್ತು ದೇವರ ದಯೆಯನ್ನು ಸಂಪಾದಿಸಿಕೊಳ್ಳಲು ದಾರಿಗಳೆಂದು ಪರಿಗಣಿಸಲ್ಪಟ್ಟಿರುತ್ತವೆ.

ದೇಹದ ದಂಡನೆಯನ್ನು ಆಚರಿಸುವವರು ಬಹುಶಃ ಹೆಚ್ಚಿನ ಕಾರ್ಯಗಳನ್ನು ಆಚರಣೆ ಮಾಡುವದರಿಂದ ದೇವರ ದಯೆಯನ್ನು ಮತ್ತು ಶ್ಲಾಘ್ಯವನ್ನು ಗಳಿಸಿಕೊಳ್ಳಬಹುದೆಂಬ ಮನೋಭಾವವನ್ನು ಬೆಳೆಸಿಕೊಂಡಿದ್ದರೆಂದು ತೋರುತ್ತದೆ. ಅತ್ಯುನ್ನತವಾದ ಪರಿಶುದ್ಧತೆಯನ್ನುಂಟು ಮಾಡುವದರ ಬದಲಾಗಿ, ಅಂತಹ ದಾರಿಯು ಅಹಂಕಾರ ಹಾಗೂ ಗರ್ವಕ್ಕೆ ನಡಿಸುವದಾಗಿತ್ತು. ಮನುಷ್ಯ ತತ್ವವನ್ನು ಅನುಸರಿಸುವದರಿಂದ, ಈ ನಿಯಮಗಳನ್ನು ಕೈಕೊಂಡು ನಡೆಯುವದರಲ್ಲಿ ಅತ್ಯಂಥ ಯಶಸ್ವಿಯಾದ ವ್ಯಕ್ತಿಯು ಸುಲಭವಾಗಿ "ನೀನಗಿಂತ ನಾನು ಪರಿಶುದ್ಧನು" ಎಂಬ ಮನೋಭಾವವನ್ನು ಬೆಳೆಸಿಕೊಳ್ಳುವ ಸಾಧ್ಯತೆಯಿರುತ್ತದೆ.

## "ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸುವದರಲ್ಲಿ ಯಾವ ಪ್ರಯೋಜನಕ್ಕೂ ಬರುವದಿಲ್ಲ" (2:23)

ವೇದ ಪಂಡಿತರು ಈ ಪದಗುಚ್ಛವನ್ನು ಮೂರು ಬೇರೆ ಬೇರೆ ವಿಧಗಳಲ್ಲಿ ಅರ್ಥೈಸಿಕೊಳ್ಳುತ್ತಾರೆ:

1. *ಈ ನಿಯಮಗಳು ಯಾವ ಪ್ರಯೋಜನವನ್ನೂ ಹೊಂದಿರುವದಿಲ್ಲ, ಕೇವಲ ಶಾರೀರಿಕ ಇಚ್ಛೆಗಳನ್ನು ತೃಪ್ತಿಪಡಿಸುವದಕ್ಕಷ್ಟೆ ಇರುತ್ತವೆ.* ಈ ಅರ್ಥನಿರೂಪಣೆಯು **ಶಾರೀರಿಕ ಇಚ್ಛೆಗಳನ್ನು** ಎಂಬುದನ್ನು ಶಾರೀರಿಕ ತೃಪ್ತಿಯನ್ನು ಪಡೆದುಕೊಳ್ಳುವ ಒಂದು ಪ್ರಯತ್ನವೆಂಬುದನ್ನು ಸೂಚಿಸುತ್ತದೆಂಬದಾಗಿ ಕಾಣುತ್ತದೆ. ಈ ಯೋಚನೆಯ ಪ್ರಕಾರವಾಗಿ, ಈ ನಿಯಮಗಳು ಅವುಗಳನ್ನು ಕೈಕೊಂಡು ನಡೆಯುವವರಿಗೆ ಶಾರೀರಿಕ ಆನಂದವನ್ನು ಕೊಡುವದಕ್ಕೆ ಅಶಕ್ತವಾಗಿದ್ದವೆಂಬುದು ಪೌಲನ ತಾತ್ಪರ್ಯವಾಗಿತ್ತು ಎಂದಾಗಿದೆ.

2. *ಈ ನಿಯಮಗಳನ್ನು ಅನುಸರಿಸುವದರಿಂದ ಶಾರೀರಿಕ ತೃಪ್ತಿಯು ದೊರಕುತ್ತದೆ ಮತ್ತು ಅವುಗಳನ್ನು ಆಚರಿಸುವವರಿಗೆ ಹೆಚ್ಚು ಆತ್ಮೀಕರಾಗುವಂತೆ ಕಾರಣವಾಗುವದಿಲ್ಲ.* Πρός (*pros*, "ವಿರುದ್ಧ") ಎಂಬುದಕ್ಕೆ ಅದರ ರೂಢಿಯಲ್ಲಿರುವ "ಗೆ" ಎಂಬ ಅರ್ಥವನ್ನು ಒದಗಿಸುವದಕ್ಕಾಗಿ ಈ ನಿಲುವು ತೆಗೆದುಕೊಳ್ಳಲ್ಪಟ್ಟಿರುತ್ತದೆ. O'Brien ಹೀಗೆ ವಿವರಿಸುತ್ತಾನೆ,

> ಅವರ ಎಲ್ಲಾ ಪರಿಶ್ರಮಗಳ – ಕಟ್ಟುನಿಟ್ಟಿನ ನಿಬಂಧನೆಗಳ ಆಚರಣೆ, ದೊರೆತನಗಳಿಗೂ ಅಧಿಕಾರಗಳಿಗೂ ಕೊಡಲ್ಪಟ್ಟ ಘನತೆ ಮತ್ತು ಗೌರವ – ಲಕ್ಷ್ಯ ಮತ್ತು ಗುರಿ (πρός) ಯು ಸಂತೃಪ್ತಿಯನ್ನು ಹೊಂದುವದೇ ಆಗಿತ್ತು. ಆದರೆ ಸಂತೃಪ್ತಿಯನ್ನು ಹೊಂದಿದ್ದು ಮಾತ್ರ "ಶರೀರ" (τῆς, σαρκός) ಆಗಿತ್ತು. ಅವರ ಚೈತನ್ಯಭರಿತ ಧಾರ್ಮಿಕ ಪರಿಶ್ರಮಗಳು ಶರೀರವನ್ನು ನಿಗ್ರಹಿಸುವದಕ್ಕೆ ಶಕ್ತವಾಗಲಿಲ್ಲ. ಸಂಪೂರ್ಣ ತದ್ವಿರುದ್ಧವಾಗಿತ್ತು. ಈ ಮನುಷ್ಯಕಲ್ಪಿತ ನಿಬಂಧನೆಗಳು ವಾಸ್ತವಿಕದಲ್ಲಿ ಶಾರೀರಿಕ ದುರಿಚ್ಛೆಗಳಿಗೆ ಮತ್ತಷ್ಟು ಉತ್ತೇಜನವನ್ನು ನೀಡಿದ್ದವು.[21]

ಈ ನಿಲುವನ್ನು ಬೆಂಬಲಿಸಲು ಮತ್ತು *pros* ನ್ನು "ಗೆ" ಎಂದು ಭಾವಾನುವಾದಗೊಳಿಸಲು, ಪದಗುಚ್ಛವನ್ನು KJV ಯಲ್ಲಿರುವ ರೀತಿಯಲ್ಲಿ ಅನುವಾದಿಸಬಹುದಾಗಿದೆ: "ಶರೀರವನ್ನಲ್ಲದೆ ಬೇರೆ ಯಾವ ವಿಧದಲ್ಲಿಯೂ ತೃಪ್ತಿಯನ್ನು ಪಡಿಸಲಾರವು." RSV ಯಲ್ಲಿ "ಶರೀರದ ಇಚ್ಛೆಗಳನ್ನು ನಿಯಂತ್ರಣದಲ್ಲಿಡುವದರಲ್ಲಿ ಯಾವ ಪ್ರಯೋಜನವಿಲ್ಲದವುಗಳು" ಎಂದಿರುತ್ತದೆ, ಅಡಿಟಿಪ್ಪಣಿಯಲ್ಲಿ "ಯಾವ ಪ್ರಯೋಜವಿಲ್ಲದವುಗಳಾಗಿವೆ, ಶರೀರದ ಇಚ್ಛೆಗಳಿಗೆ ಮಾತ್ರ ಸೇವೆ ಮಾಡುವಂಥವುಗಳು" ಎಂದಿರುತ್ತದೆ. ಪೌಲನ ತಾತ್ಪರ್ಯವು ಇದೇ ಆಗಿರಬಹುದಾಗಿದೆ.

3. *ಶಾರೀರಿಕ ಅಭಿಲಾಷೆಗಳನ್ನು ನಿಗ್ರಹಿಸುವದರಲ್ಲಿ ಈ ನಿಯಮಗಳು ಯಾವ ಪ್ರಯೋಜನವೂ ಇಲ್ಲದವುಗಳಾಗಿವೆ.* ಮನುಷ್ಯ ನಿಯಮಗಳು ದೇಹವನ್ನು ಕಠಿಣವಾಗಿ ದಂಡಿಸಿಕೊಳ್ಳಬೇಕೆಂದು ಕೇಳುತ್ತವೆ, ಆದರೆ ಅವುಗಳು ಶಾರೀರಿಕ ಅಭಿಲಾಷೆಗಳನ್ನು ತಡೆಯಲಾರವು. ಪೌಲನು ಇಲ್ಲಿ ಮನುಷ್ಯರ ವಿಧಿಗಳು, ಸ್ವಕಲ್ಪಿತ ಧರ್ಮ, ಅತಿವಿನಯ, ಮತ್ತು ದೇಹವನ್ನು ಕಠಿಣವಾಗಿ ದಂಡಿಸಿಕೊಳ್ಳುವದು ಇವುಗಳು, ಶಾರೀರಿಕ ಇಚ್ಛೆಗಳನ್ನು ನಿಯಂತ್ರಿಸುವದರಲ್ಲಿ ಯಾವ ಪ್ರಯೋಜನವನ್ನೂ ಹೊಂದಿರುವದಿಲ್ಲ ಎಂಬ ಅರ್ಥದಲ್ಲಿ ಹೇಳಿರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇತ್ತೀಚಿನ ಬಹುಪಾಲು ತರ್ಜುಮೆಗಳು ಮಾಡುವ ಪ್ರಕಾರವಾಗಿಯೇ, NASBಯು ಈ ಅರ್ಥವನ್ನು ನೀಡಿರುತ್ತದೆ.

ಮೊದಲ ವಿವರಣೆಯನ್ನು ತಿರಸ್ಕರಿಸತಕ್ಕದ್ದು ಯಾಕೆಂದರೆ ಮುಂದಿನ "ದೇಹ ದಂಡನೆ" ಎಂಬ ನಿಬಂಧನೆಯು ಶಾರೀರಿಕ ಸಂತೃಪ್ತಿಗೆ ತಳಹದಿಯಾಗಿರುವದಕ್ಕೆ ಸಾಧ್ಯವೇ ಇಲ್ಲ. ಪೌಲನು ಸ್ವತಃ ದೇಹವನ್ನು ಸಂತೃಪ್ತಿಯನ್ನು ಸೂಚಿಸಿ ಹೇಳಲಿಲ್ಲ, ಆದರೆ ಶರೀರಭಾವದ ಅಭಿಲಾಷೆಗಳನ್ನು – ಮಾನವರ ನೆಲೆಯ ಆಲೋಚನೆಗಳಿಂದ ಹೊರಡುವ ಇಚ್ಛೆಗಳು – ಸೂಚಿಸಿ ಹೇಳಿದನು. ಎರಡನೆಯ ವಿವರಣೆಯು ಕೆಲವು ವಿಧಗಳಲ್ಲಿ ಪ್ರಶಂಸನೀಯವಾಗಿವೆಯಾದರೂ, ಪೌಲನ ತಾತ್ಪರ್ಯವು ಅದಾಗಿರುವದಕ್ಕೆ ಸಾಧ್ಯವಿರುವದಿಲ್ಲ. ಮೂರನೆಯ ವಿವರಣೆಯು ಸನ್ನಿವೇಶಕ್ಕೆ ಹೊಂದಾಣಿಕೆಯಾಗುವಂತೆ ತೋರುತ್ತದೆ.

πλησμονή (*plēsmonē*, "ಇಚ್ಛೆಗಳನ್ನು ಪೂರೈಸಿಕೊಳ್ಳುವಿಕೆ") ಎಂಬ ಪದವು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, LXX ನಲ್ಲಿ ಇಪ್ಪತ್ತೆಂಟು ಸಾರಿ ಕಾಣಿಸಿಕೊಳ್ಳುತ್ತದೆ. ಇದು "ಇಚ್ಛೆಯನ್ನು ತೀರಿಸಿಕೊಳ್ಳುವಿಕೆ" ಅಥವಾ "ಸಂತೃಪ್ತಿ" ಎಂಬ ಅರ್ಥದಲ್ಲಿ ಬಳಸಲ್ಪಟ್ಟರೆ "ಸಂಪೂರ್ಣತೆ" ಎಂದರ್ಥವಾಗುತ್ತದೆ. ಅಲ್ಲದೆ, ಇದು ಅತಿಯಾಗಿ ತಣಿಸಿಕೊಳ್ಳುವಿಕೆಯೆಂಬ ಅರ್ಥದಲ್ಲಿ, ಪೂರ್ಣವಾಗಿ ತೊಡಗಿಸಿಕೊಳ್ಳುವದು ಎಂಬರ್ಥವನ್ನು ಸಹ ಕೊಡಬಲ್ಲದಾಗಿದೆ.

20ನೇ ವಚನದಲ್ಲಿ ಹೇಳಲ್ಪಟ್ಟಿರುವ ನಿಬಂಧನೆಗಳು ಶಾರೀರಿಕ ಇಚ್ಛೆಗಳನ್ನು ತಡೆಯುವದಕ್ಕೆ ಶಕ್ತವಾಗಲಿಲ್ಲ. ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳುವ ಸಾಮರ್ಥ್ಯವು ಸ್ವಕಲ್ಪಿತಧರ್ಮದಿಂದಾಗಲಿ, ಅತಿವಿನಯ, ಅಥವಾ ದೇಹದಂಡನೆಯಿಂದಾಗಲಿ ಬರುವದಿಲ್ಲ ಎಂಬುದನ್ನು ಪೌಲನು ಕಲಿಸುತ್ತಿದ್ದಾನೆ. ಪರಿಶುದ್ಧತೆ, ನಿರ್ಮಲತೆ, ಮತ್ತು ದೇವರೊಂದಿಗೆ ನಿಕಟತೆ ಇವುಗಳು ದೇಹವನ್ನು ಕಠಿಣವಾಗಿ ದಂಡಿಸಿಕೊಳ್ಳುವದರಿಂದಾಗಲಿ ಅಥವಾ ಶಾರೀರಿಕ ಇಚ್ಛೆಗಳಿಗೆ ಒಳಪಡಿಸಿಕೊಳ್ಳುವದರಿಂದಾಗಲ ಬರುವದಿಲ್ಲ.

ದೇಹಸಾಧನೆಯು ಸ್ವಲ್ಪಮಟ್ಟಿಗೆ ಪ್ರಯೋಜನವಾಗಿದೆ, ಭಕ್ತಿಯಾದರೋ ಎಲ್ಲಾ ವಿಧದಲ್ಲಿ ಪ್ರಯೋಜನವಾದದ್ದು (1 ತಿಮೊಥೆ 4:8). ಭಕ್ತಿಯ ಜೀವನವು ಪವಿತ್ರಾತ್ಮನ ಫಲಗಳಿಂದ ಬರುತ್ತದೆ (ಗಲಾತ್ಯ 5:22, 23), ಅದರ ಮೂಲಕ ಕ್ರೈಸ್ತರು ಆತ್ಮೀಕ ಬಲವನ್ನು ಪಡೆದುಕೊಳ್ಳುತ್ತಾರೆ (ಎಫೆಸ 3:16) ಮತ್ತು ಲೋಕವನ್ನು ಜಯಿಸುವ ಶಕ್ತಿಯನ್ನು ಹೊಂದಿಕೊಳ್ಳುವರು (1 ಯೋಹಾನ 4:4). ದೇವಜನರಿಗೆ ಅವರ ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳುವದಕ್ಕೆ ಒಂದಿಷ್ಟು ನಿಯಮಗಳಿಗಿಂತಲೂ ಅಧಿಕವಾದದ್ದರ ಅಗತ್ಯವಿರುತ್ತದೆ. "ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ" (ರೋಮಾ 8:13).

ಕ್ರೈಸ್ತರು ಆತ್ಮಪ್ರೇರಿತವಾದ (ಅಥವಾ ಪವಿತ್ರಾತ್ಮಪ್ರೇರಿತವಾದ) ಹೊಸ ರೀತಿಯಲ್ಲಿ ಸೇವೆ ಮಾಡುತ್ತಾರೆ ಹೊರತು ಶಾಸ್ತ್ರದ ಹೊರಗಣ ಅರ್ಥಕ್ಕೆ ಅನುಕೂಲವಾದ ಹಳೇ ರೀತಿಯಲ್ಲಿ ಅಲ್ಲ (ರೋಮಾ 2:29; 7:6; 2 ಕೊರಿಂಥ 3:6). ಧರ್ಮಶಾಸ್ತ್ರವು, ತನ್ನ ಎಲ್ಲಾ ವಿಧಿಗಳ ಮೂಲಕ ಶಾರೀರಿಕ ಇಚ್ಛೆಗಳನ್ನು ನಿಯಂತ್ರಿಸುವದಕ್ಕೆ ಸಾಕಾಗಲಿಲ್ಲ (ರೋಮಾ 8:3). ಬದಲಾಗಿ, ಅದು ಶಾರೀರಿಕ ಇಚ್ಛೆಗಳನ್ನ ಪ್ರಚೋದಿಸಿತು (ರೋಮಾ 7:8). ತಮ್ಮ ಮನಸ್ಸುಗಳನ್ನು ಶಾರೀರಿಕ ಅಭಿಲಾಷೆಗಳ ಮೇಲೆ ಇಡುವವರು ತಮ್ಮ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳಲು ಅಶಕ್ತರಾಗಿರುತ್ತಾರೆ (ರೋಮಾ 8:7). ಪವಿತ್ರಾತ್ಮನಿಂದ ಮಾರ್ಪಡದಂಥ ಮತ್ತು ಪ್ರಭಾವಕ್ಕೊಳಗಾಗಿರದಂಥ ಹೃಯದಗಳನ್ನು ನಿಗ್ರಹಿಸುವದಕ್ಕೆ ಮನುಷ್ಯ ಕಲ್ಪಿತ ನಿಯಮಗಳು ಸಾಕಾದವುಗಳಾಗಿರುವದಿಲ್ಲ. ಆತ್ಮಕ್ಕೆ ಆತ್ಮೀಕ ಸಂಗತಿಗಳನ್ನು ಉಣ ಬಡಿಸುವದರಿಂದ, ಆತ್ಮವನ್ನು ಹಸಿವೆಯಲ್ಲಿ ಬಿಡದಂತೆ ಇರುವದರಿಂದಲೇ ಆತ್ಮೀಕ ವೃದ್ಧಿ ಸಂಭವಿಸುತ್ತದೆ (1 ಪೇತ್ರ 2:2).

ದೇಹದ ಕಠಿಣ ದಂಡನೆ ಮತ್ತು ದಾರಿದ್ರ್ಯತೆಗಳು ಪರಿಶುದ್ಧತೆಗೆ ತಳಹದಿಯಾಗಿರುವದಿಲ್ಲ; ಭಕ್ತಿವೃದ್ಧಿಯನ್ನು ಮಾಡಿಕೊಳ್ಳಲು ಇವುಗಳು ದಾರಿಗಳಲ್ಲ. ಉಪವಾಸವು, ಸಮಾಜದಿಂದ ತಾತ್ಕಾಲಿಕವಾಗಿ ಪ್ರತ್ಯೇಕಗೊಂಡು ಏಕಾಂತದಲ್ಲಿ ಕಳೆಯುವಂಥಹ ಒಂದು ಉದ್ದೇಶವನ್ನು ನೆರವೇರಿಸಬಹುದು. ಒಬ್ಬನ ಜೀವಿತದಿಂದ ಕೆಟ್ಟದ್ದನ್ನು ತೆಗೆದು ಹಾಕಿಕೊಳ್ಳುವದಕ್ಕೆ ಒಂದು ಪ್ರಯತ್ನವನ್ನು ಮಾಡುವದು ಪ್ರಾಮುಖ್ಯವಾದದ್ದು, ಆದರೆ ಒಬ್ಬನ ಜೀವಿತವನ್ನು ಆತ್ಮೀಕ ಸಂಗತಿಗಳಿಂದ ತುಂಬಿಸಿಕೊಳ್ಳುವದು ಇನ್ನು ಹೆಚ್ಚು ಪ್ರಾಮುಖ್ಯವಾಗಿರುತ್ತದೆ. ಯಾವನ ಜೀವಿತವೂ ಒಂದು ಶೂನ್ಯತೆಯಾಗಿರುವದಿಲ್ಲ. ಒಬ್ಬನ ಜೀವಿತವನ್ನು ಯೇಸುವಿನಿಂದ ತುಂಬಿಸಿಕೊಳ್ಳುವದರಿಂದ ಕೆಟ್ಟದ್ದು ತೆಗೆದು ಹಾಕಲ್ಪಡುತ್ತದೆ.

ಯೇಸು ಕೊಲೊಸ್ಸೆಯವರನ್ನು ಧರ್ಮಶಾಸ್ತ್ರದಿಂದ ಮತ್ತು ಪಾಪದ ಅಪರಾಧಿತ್ವ ಹಾಗೂ ದಂಡನೆಯಿಂದ ವಿಮುಕ್ತಗೊಳಿಸಿದ್ದನು. ಅವರು ಆತನೊಂದಿಗೆ ದೀಕ್ಷಾಸ್ನಾನದಲ್ಲಿ ಮರಣಿಸುವ ಮೂಲಕವಾಗಿ ಎಲ್ಲಾ ಧಾರ್ಮಿಕ ನಿಬಂಧನೆಗಳು ಮತ್ತು ಪ್ರಾಪಂಚಿಕ ತತ್ವಜ್ಞಾನಗಳ ಪಾಲಿಗೆ ಸತ್ತವರಾಗಿದ್ದರು. ಅವರು ಯಾವ ಕಾರ್ಯಗಳೊಳಗಿಂದ ವಿಮುಕ್ತಗೊಳಿಸಲ್ಪಟ್ಟಿದ್ದರೋ ಆ ಕಾರ್ಯಗಳ ಕಡೆಗೆ ಪುನಃ ಹಿಂದಿರುಗಬಾರದೆಂಬುದು ಪೌಲನ ಬಯಕೆಯಾಗಿತ್ತು. ಅವರು ಹಾಗೆ ಮಾಡುವದಾಗಿದ್ದರೆ, ಅವರ ಜೀವಿತಗಳಲ್ಲಿ

ಯೇಸುವಿಗೆ ಯಾವ ಸ್ಥಾನವೂ ಇರುತ್ತಿರಲಿಲ್ಲ.

ತಮ್ಮ ಸ್ವಂತ ನಿಯಮಗಳು ಮತ್ತು ಮನುಷ್ಯ ತರ್ಕದ ಮೇಲೆ ತಮ್ಮ ಜೀವಿತಗಳನ್ನು ಕಟ್ಟಿಕೊಳ್ಳುವವರು ಸ್ವಭ್ರಮೆಗೊಳಗಾದವರು ಮತ್ತು ಗರ್ವದಿಂದ ತುಂಬಿದವರು ಆಗಿರುತ್ತಾರೆ. ಕೊಲೊಸ್ಸೆಯವರು ಪ್ರಾಪಂಚಿಕ ಬಾಲಬೋಧೆಯನ್ನು, ಮಾತ್ರವಲ್ಲದೆ ಅನ್ಯೆತಿಕತೆ ಹಾಗೂ ಭಕ್ತಿಹೀನವಾದ ಗುಣಗಳನ್ನು ಸಹ ತಿರಸ್ಕರಿಸಬೇಕಾಗಿತ್ತು. 3ನೇ ಅಧ್ಯಾಯದಲ್ಲಿ ಲೋಕಸಂಬಂಧವಾದ ಕಾರ್ಯಗಳನ್ನು ಬಿಟ್ಟು ಯೇಸುವಿನ ಸ್ವಭಾವದಲ್ಲಿ ಸಿಕ್ಕುವಂಥ ಗುಣಲಕ್ಷಣಗಳನ್ನು ಧರಿಸಿಕೊಳ್ಳುವವರಾಗಿ ಯೇಸುವಿನಲ್ಲಿ ದೊರಕುವ ಅತ್ಯುನ್ನತ ಜೀವನವನ್ನು ಅನುಸರಿಸುವಂತೆ ಪೌಲನು ಕೊಲೊಸ್ಸೆಯವರಿಗೆ ಬುದ್ಧಿವಾದ ಹೇಳುವದನ್ನು ಕಾಣಲಿದ್ದೇವೆ. ಆತನು ಕ್ರೈಸ್ತರಿಗೆ ಭೂಮಿಯ ಮೇಲೆ ಸಮೃದ್ಧಿ ಜೀವನದ ಏಕೈಕ ಮೂಲ ಮತ್ತು ಬರಲಿರುವ ಜೀವನಕ್ಕಾಗಿರುವ ಪರಲೋಕದ ನಿವಾಸಕ್ಕೆ ಏಕೈಕ ನಿರೀಕ್ಷೆಯು ಆಗಿದ್ದಾನೆ.

## ಕೊಲೊಸ್ಸೆ 2ನೇ ಅಧ್ಯಾಯದಲ್ಲಿ ಪೌಲನ ಬುದ್ಧಿವಾದಗಳು

| **ಇವುಗಳಿಂದ ದೂರವಿರಿ:** | **ಯಾಕೆಂದರೆ:** |
|---|---|
| ರಂಜನೆಯಾದ ಮಾತುಗಳು (2:4). | ಸಕಲ ಜ್ಞಾನ ಮತ್ತು ತಿಳುವಳಿಕೆ ಕ್ರಿಸ್ತನಲ್ಲಿರುತ್ತವೆ (2:3). |
| ಮನುಷ್ಯರ ಸಂಪ್ರದಾಯಗಳನ್ನೂ, ಪ್ರಾಪಂಚಿಕ ಬಾಲಬೋಧೆ, ನಿರರ್ಥಕ ತತ್ವಜ್ಞಾನ, ಬೋಧನೆ (2:8). | ಇವುಗಳು ಯೇಸುವಿಗೆ ಅನುಗುಣವಾಗಿರುವದಿಲ್ಲ, ಯಾಕೆಂದರೆ ಆತನಲ್ಲಿ ದೇವರ ಸರ್ವಸಂಪೂರ್ಣತೆಯು ವಾಸಿಸುತ್ತದೆ, ತನ್ನಲ್ಲಿ ಕೊಲೊಸ್ಸೆಯವರನ್ನು ಪರಿಪೂರ್ಣಗೊಳಿಸಿರುತ್ತಾನೆ (2:8-10). |
| ಧರ್ಮಶಾಸ್ತ್ರದ ವಿವಿಧ ವಿಷಯಗಳಲ್ಲಿ ನಿಮ್ಮನ್ನು ದೋಷಿಯೆಂದು ಎಣಿಸಲು ಒಬ್ಬರಿಗೆ ಅವಕಾಶ ಕೊಡುವದರಿಂದ (2:16). | ಈ ವಿಧಿಗಳು ಇಲ್ಲದಂತಾಗ ಮಾಡಲ್ಪಟ್ಟಿವೆ ಮತ್ತು ಕೇವಲ ಛಾಯೆಗಳಾಗಿರುತ್ತವೆ (2:14, 17). |
| ಅತಿವಿನಯ, ದೇವದೂತರ ಪೂಜೆ ಮತ್ತು ದರ್ಶನಗಳು (2:18). | ಇವುಗಳು ಪ್ರಾಪಂಚಿಕ ಬುದ್ಧಿಯಿಂದ ಬರುತ್ತವೆ, ಹೊರತು ಶಿರಸ್ಸಾಗಿರುವ ಕ್ರಿಸ್ತನಿಂದಲ್ಲ (2:18). |
| "ಇದನ್ನು ಹಿಡಿಯಬೇಡ, ಇದನ್ನು ರುಚಿನೋಡಬೇಡ, ಅದನ್ನು ಮುಟ್ಟಬೇಡ" ಎಂಬ ನಿಬಂಧನೆಗಳು (2:20, 21). | ಕೊಲೊಸ್ಸೆಯವರು ಇವುಗಳ ಪಾಲಿಗೆ ಸತ್ತವರಾಗಿದ್ದರು, ಯಾಕೆಂದರೆ ಇವುಗಳು ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳುವದರಲ್ಲಿ ಯಾವ ಪ್ರಯೋಜನಕ್ಕೂ ಬಾರದವುಗಳು (2:20-23). |

# ಹೆಚ್ಚಿನ ಅಧ್ಯಯನಕ್ಕಾಗಿ: “ಆರಾಧನೆ”

ಗ್ರೀಕ್‌ನ ವಿವಿಧ ಪದಗಳು “ಆರಾಧನೆ” ಎಂದು ಅನುವಾದಿಸಲ್ಪಟ್ಟಿರುತ್ತವೆ:

θρησκεία — *thrēskeia,* ಒಂದು ಧಾರ್ಮಿಕ ಆಚರಣೆ ಎಂದು ಅರ್ಥವನ್ನು ಕೊಡುತ್ತದೆ (ಯಾಕೋಬ 1:26, 27).

προσκυνέω — *proskuneō*, “ಅಡ್ಡ ಬಿದ್ದು ಆರಾಧಿಸುವದು, ಭಯಭಕ್ತಿಯನ್ನು ತೋರಿಸು” (ಮತ್ತಾಯ 4:10; ಲೂಕ 4:8).

λατρεύω — *latreuō*, “ಸೇವೆ ಮಾಡು” (ಮತ್ತಾಯ 4:10; ಲೂಕ 4:8).

εὐσεβέω — *eusebeō*, “ಭಯಭಕ್ತಿ ಮತ್ತು ಘನ ಮರ್ಯಾದೆಯನ್ನು ತೋರಿಸು” (ಅಪೊಸ್ತಲರ ಕೃತ್ಯಗಳು 17:23).

θεραπεύω — *therapeuō*, “ಸೇವೆ ಮಾಡು ಮತ್ತು ಸ್ವಾಮಿನಿಷ್ಠೆ ತೋರಿಸು” (ಅಪೊಸ್ತಲರ ಕೃತ್ಯಗಳು 17:25). ಬಹುತೇಕವಾಗಿ, ಹೊಸ ಒಡಂಬಡಿಕೆಯಲ್ಲಿ, ಈ ಪದವು “ಗುಣಪಡಿಸು, ಪುನರಾರೋಗ್ಯ ಕೊಡು” ಎಂಬ ಅರ್ಥವನ್ನು ಕೊಡುತ್ತದೆ (ಮತ್ತಾಯ 4:24; 8:7).

σεβάζομαι — *sebazomai*, “ಪೂಜಿಸು” (ರೋಮಾ 1:25, ಹೊಸ ಒಡಂಬಡಿಕೆಯಲ್ಲಿ ಮಾತ್ರವೇ).

σέβω — *sebō*, “ಆರಾಧನೆಯಲ್ಲಿ ವ್ಯತಾಚಾರದ ಧಾರ್ಮಿಕ ವಿಧಿಗಳು” (ಮತ್ತಾಯ 15:9; ಅಪೊಸ್ತಲರ ಕೃತ್ಯಗಳು 18:13).

ಮೇಲ್ಗಡೆಯಲ್ಲಿ ಪಟ್ಟಿ ಮಾಡಲಾಗಿರುವ ಗ್ರೀಕ್ ಪದಗಳೊಳಗೆ, ಆಂಗ್ಲದ “ಆರಾಧನೆ” ಎಂಬ ಪದಕ್ಕೆ ಹೆಚ್ಚು ಹೋಲಿಕೆಯಾಗುವ ಪದವೆಂದರೆ *proskuneō*, ಅಕ್ಷರಶಃ “ಕಡೆಗೆ ಮುತ್ತಿಡು” ಎಂದರ್ಥವಾಗಿರುತ್ತದೆ. ಇದು ಒಬ್ಬ ಸರ್ವೋಚ್ಚ ಜೀವಿಗೆ ಪೂಜನೀಯವಾಗಿ ಪ್ರಣಾಮ ಸಲ್ಲಿಸುವದು ಎಂಬ ಭಾವಾರ್ಥವನ್ನು ಕೊಡುತ್ತದೆ (ಯೋಹಾನ 4:24). *Latreuō*, ಆರಾಧನೆ ಎಂಬುದಕ್ಕಿಂತಲೂ ವಿಸ್ತಾರವಾದ ಅರ್ಥವನ್ನು ಹೊಂದಿರುತ್ತದೆ, ಅದು ಪ್ರಣಾಮ ಸಲ್ಲಿಸುವದಕ್ಕೆ ಸೀಮಿತವಾಗಿರುವದಿಲ್ಲ. ಅದು ದೇವರಾಗಿರಬಹುದು (ಲೂಕ 1:74) ಅಥವಾ ದೇವರನ್ನು ಬಿಟ್ಟು ಬೇರೊಂದಾಗಿರಬಹುದು (ಅಪೊಸ್ತಲರ ಕೃತ್ಯಗಳು 7:42; ರೋಮಾ 1:25) ದೇವತ್ವವೊಂದಕ್ಕೆ ಸಲ್ಲಿಸುವ ಯಾವದೇ ಸೇವೆಯನ್ನು ಸೂಚಿಸುತ್ತದೆ, ಅಥವಾ ಸಾಮಾನ್ಯ ಅರ್ಥದಲ್ಲಿ ಸೇವೆ ಮಾಡುವದನ್ನು ಸೂಚಿಸುವದಾಗಿದೆ (ಇಬ್ರಿಯ 8:5; 13:10).

ಕ್ರೈಸ್ತರು ಮಾಡುವದೆಲ್ಲವನ್ನೂ “ಆರಾಧನೆ” ಎಂದು ಪರಿಗಣಿಸುವದಕ್ಕಾಗುವದಿಲ್ಲ, ಯಾಕೆಂದರೆ ಎಲ್ಲಾ ಕ್ರಿಯೆಗಳು ದೇವರ ಕಡೆಗೆ ತೋರುವ ಭಕ್ತಿಯಾಗಿರುವದಿಲ್ಲ. ಎಲ್ಲಾ *proskuneō* “ಆತ್ಮದಲ್ಲಿಯೂ ಸತ್ಯದಲ್ಲಿಯೂ” ಮಾಡಲ್ಪಡುತ್ತದೆ (ಯೋಹಾನ 4:23, 24); ಆದುದರಿಂದ, ಅದು ದೇವರಿಂದ ಪ್ರಕಟಗೊಳಿಸಲ್ಪಟ್ಟಿರುವ ಮಾನದಂಡಗಳಿಗೆ ಸೀಮಿತವಾಗಿರುತ್ತದೆ. ಕ್ರೈಸ್ತರಿಗೆ ಅನ್ವಯಿಸುವದಾದರೆ, *latreuō* ಎಂಬುದರ ಅರ್ಥವು, ಯೇಸುವಿನ ಸೇವೆಗೋಸ್ಕರ ಜೀವಿಸುವದರ ಯಾವದೇ ಚಟುವಟಿಕೆಯನ್ನ ಒಳಗೊಂಡದ್ದು ಎಂದಾಗಿರುತ್ತದೆ. ಅಂಥ ಕಾರ್ಯಗಳೆಲ್ಲವೂ ದೇವರಿಗೆ ಭಕ್ತಿ ತೋರಿಸುವ ಅರ್ಥದಲ್ಲಿ

ಆರಾಧನೆಯಾಗಿರುವದಿಲ್ಲ. ಒಬ್ಬನು ತನ್ನ ದೇಹವನ್ನು ಮತ್ತು ಅದರ ಕ್ರಿಯೆಗಳ ಬಗ್ಗೆ ಸಮರ್ಪಕವಾದ ರೀತಿಯಲ್ಲಿ ಆರೈಕೆ ಮಾಡುವಾಗ ದೇವರಿಗೆ ಸೇವೆಯನ್ನು (*latreuō*) ಮಾಡಿದಂತಾಗುವದು. ಅಂಥ ಸೇವೆಗಳನ್ನು ಮಾಡಬೇಕೆಂದು ನಮ್ಮಿಂದ ಎದುರು ನೋಡುತ್ತಾನೆ, ಆದರೆ ಅವುಗಳನ್ನು ದೇವರ ಆರಾಧನೆಯೊಳಗೆ ತರಕೂಡದು. ನ್ಯಾಯವಾಗಿರುವ ಯಾವದೇ ಚಟುವಟಿಕೆಯನ್ನು ಆತನಿಗೆ ಸೇವೆ ರೂಪದಲ್ಲಿ ಮಾಡಬಹುದು; ಹೇಗೂ, ಆರಾಧನೆಯಲ್ಲಿ ಯಾವದನ್ನು ಬಳಸಬೇಕೆಂದು ಯೇಸುವಿಗೆ ಪ್ರಕಟಗೊಳಿಸಿದ್ದಾನೋ ಅದಕ್ಕೆ ಹೊರಗಿರುವದಾದಲ್ಲಿ, ಅದು ದೇವರ ಆರಾಧನೆಗೆ ತಕ್ಕದ್ದಾಗಿರುವದಿಲ್ಲ.

# ಅನ್ವಯಿಸುವಿಕೆ

## ಶಿರಸ್ಸಿಗೆ ಹೊಂದಿಕೊಂಡು ಇರುವದು

ನಾವು ಕಟ್ಟಲ್ಪಡಬೇಕಾದ ಅಸ್ತಿವಾರವು ಯೇಸುವೇ ಎಂಬುದನ್ನು ತಿಳಿಸಿದ ಬಳಿಕ (ನೋಡಿರಿ 1 ಕೊರಿಂಥ 3:10), ಪೌಲನು ಎಲ್ಲಕ್ಕೂ ಮೊದಲು ಇದ್ದವನೂ ಸಮಸ್ತವನ್ನು ಸೃಷ್ಟಿಸಿದಾತನೂ ಮತ್ತು ಎಲ್ಲಾದರಲ್ಲಿ ಪ್ರಮುಖನೂ ಆಗಿರುವ ಯೇಸುವಿನಿಂದ ದೂರ ಹೋಗುವದರ ವಿರುದ್ಧ ಎಚ್ಚರಿಕೆಗಳನ್ನು ಕೊಡಲಾರಂಭಿಸುತ್ತಾನೆ. ಮುಂದಿನ ವಿಭಾಗಗಳಲ್ಲಿ ಆತನು ಕೊಲೊಸ್ಸೆಯವರನ್ನು ರಂಜನೆಯ ಮಾತುಗಳಿಂದ (2:4), ಪ್ರಾಪಂಚಿಕ ಬಾಲಬೋಧೆ, ಅಥವಾ ಮೋಸವಾದ ನಿರರ್ಥಕ ತತ್ವಜ್ಞಾನಗಳಿಂದ ತಮ್ಮನ್ನು ದಾರಿ ತಪ್ಪಿಸುವಂತೆ ಜನರಿಗೆ ಅನುಮತಿಸುವದರ ವಿರುದ್ಧವಾಗಿ ಎಚ್ಚರಿಕೆ ಕೊಡುತ್ತಾನೆ (2:8). 2:16-23ರಲ್ಲಿ ಆತನು ಯೆಹೂದಿ ಆಚಾರಗಳ ಬಗ್ಗೆ (2:16), ಅತಿವಿನಯ (2:18, 23) ದೇವದೂತರ ಆರಾಧನೆ (2:18), ಶಿರಸ್ಸಿಗೆ ಹೊಂದಿಕೊಂಡಿರಲು ವಿಫಲವಾಗುವದರ ಬಗ್ಗೆ (2:19), ಪ್ರಾಪಂಚಿಕ ನಿಬಂಧನೆಗಳು (2:20), ಮತ್ತು ಸ್ವಕಲ್ಪಿತಧರ್ಮಗಳ ಬಗ್ಗೆ ಎಚ್ಚರಿಸುತ್ತಾನೆ (2:23).

*ಯೆಹೂದಿ ಆಚಾರಗಳು.* ಧರ್ಮಶಾಸ್ತ್ರದ ವಿಧಿಗಳು ಶಿಲುಬೆಗೆ ಜಡಿಯಲ್ಪಟ್ಟಿರುತ್ತವೆ (2:14), ಅದು ಕ್ರೈಸ್ತರನ್ನು ಧರ್ಮಶಾಸ್ತ್ರದ ಅಧೀನದೊಳಗಿಂದ ವಿಮುಕ್ತಗೊಳಿಸಿರುತ್ತದೆ (ಗಲಾತ್ಯ 5:1). ಈ ವಾಸ್ತವಾಂಶದ ಬಗ್ಗೆ ರೋಮಾಪುರದವರಿಗೆ, ಗಲಾತ್ಯದವರಿಗೆ, ಮತ್ತು ಇಬ್ರಿಯರಿಗೆ ಬರೆದ ಪತ್ರಿಕೆಗಳಲ್ಲಿ ಬಹಳ ಸವಿಸ್ತಾರವಾಗಿ ವಿವರಿಸಲ್ಪಟ್ಟಿರುತ್ತದೆ. ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ, ಪೌಲನು ಈ ಕೆಳಗಿನವುಗಳನ್ನು ಕಲಿಸಿದನು:

ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ (3:20).

ಧರ್ಮಶಾಸ್ತ್ರವು ದೇವರ ನೀತಿಯನ್ನು ಒದಗಿಸುವದಿಲ್ಲ (3:21).

ಬಾಧ್ಯಸ್ಥರಾಗುವದು ನಂಬಿಕೆಯಿಂದುಂಟಾಗುವ ನೀತಿಯ ಮೇಲೆ ಆಧಾರವಾಗಿರುತ್ತದೆ (4:13).

ಜನರು ಧರ್ಮಶಾಸ್ತ್ರದ ಮೂಲಕ ಬಾಧ್ಯಸ್ತರಾಗುವದಿಲ್ಲ (4:14).

ಧರ್ಮಶಾಸ್ತ್ರವು ಕೋಪಕ್ಕೆ ಗುರಿ ಮಾಡುತ್ತದೆ (4:15)

ನಾವು ಧರ್ಮಶಾಸ್ತ್ರದ ಪಾಲಿಗೆ ಸತ್ತವರಾಗಿದ್ದೇವೆ (7:4)
ನಾವು ಧರ್ಮಶಾಸ್ತ್ರದಿಂದ ವಿಮುಕ್ತಗೊಳಿಸಲ್ಪಟ್ಟಿದ್ದೇವೆ (7:6).
ಕ್ರಿಸ್ತನು ಧರ್ಮಶಾಸ್ತ್ರಕ್ಕೆ ಅಂತ್ಯವಾಗಿರುತ್ತಾನೆ (10:4).

ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ, ಕೆಲವರು ಧರ್ಮಶಾಸ್ತ್ರದ ಮೂಲಕ ನೀತಿವಂತರೆಂಬ ನಿರ್ಣಯ ಹೊಂದುವಕ್ಕೆ ಪ್ರಯತ್ನಿಸುತ್ತಿದ್ದಾರೆಂಬ ಬಗ್ಗೆ ಪೌಲನು ಕಳವಳಗೊಂಡಿದ್ದನು (ಗಲಾತ್ಯ 1:6, 7). ಈ ಪತ್ರಿಕೆಯಲ್ಲಿ ಆತನು ಇವುಗಳನ್ನು ಕಲಿಸಿದನು:

ಒಬ್ಬನು ಧರ್ಮಶಾಸ್ತ್ರದ ಮೂಲಕ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ (2:16).
ಆತನು, ಅಂದರೆ ಪೌಲನು ಧರ್ಮಶಾಸ್ತ್ರದ ಪಾಲಿಗೆ ಸತ್ತವನಾಗಿದ್ದನು (2:19).
ಧರ್ಮಶಾಸ್ತ್ರದಿಂದ ನೀತಿಯುಂಟಾಗುವದಾದರೆ ಕ್ರಿಸ್ತನು ಮರಣವನ್ನು ಹೊಂದಿದ್ದು ಅನಗತ್ಯವಾಗಿದೆ (2:21).
ಧರ್ಮಶಾಸ್ತ್ರದ ಅಧೀನದಲ್ಲಿರುವವರೆಲ್ಲಾ ಶಾಪದ ಅಡಿಯಲ್ಲಿದ್ದಾರೆ (3:10).
ಕ್ರಿಸ್ತನು ಬರುವ ತನಕ ಧರ್ಮಶಾಸ್ತ್ರವು ಜಾರಿಯಲ್ಲಿತ್ತು (3:19).
ಈಗ ಕ್ರಿಸ್ತನಂಬಿಕೆಯು ಬಂದಿರುವದರಿಂದ ಇನ್ನು ಮೇಲೆ ನಾವು ಕಾಯುವವನ ಕೈಕೆಳಗೆ ಇರುವವರಲ್ಲ (3:25).
ನಾವು ಧರ್ಮಶಾಸ್ತ್ರವನ್ನು ಪ್ರತಿನಿಧಿಸುವ ದಾಸಿಯ ಮಕ್ಕಳಲ್ಲ (4:31).

ಇಬ್ರಿಯರಿಗೆ ಬರೆದ ಪತ್ರಿಕೆಯ ಉದ್ದೇಶವು ಯೇಸುವು ಮೊದಲ ಒಡಂಬಡಿಕೆಯೊಂದಿಗೆ ಸಂಬಂಧ ಹೊಂದಿದ್ದ ಕಾರ್ಯಗಳಿಗಿಂತ ಶ್ರೇಷ್ಠನಾಗಿದ್ದಾನೆಂದು ತೋರಿಸಿ ಕೊಡುವದೇ ಆಗಿತ್ತು, ಅವುಗಳಾವವೆಂದರೆ, ಯಾರ ಮೂಲಕವಾಗಿ ಧರ್ಮಶಾಸ್ತ್ರವು ಕೊಡಲ್ಪಟ್ಟಿತೋ ಆ ದೇವದೂತರು (1:4; 2:2); ಮೋಶೆ, ಆತನಿಗೆ ಧರ್ಮಶಾಸ್ತ್ರವು ಕೊಡಲ್ಪಟ್ಟಿತು (3:3); ಧರ್ಮಶಾಸ್ತ್ರದಿಂದ ನೇಮಿಸಲ್ಪಟ್ಟ ಯಾಜಕರು (7:11, 12); ಧರ್ಮಶಾಸ್ತ್ರದ ಒಡಂಬಡಿಕೆ ಮತ್ತು ವಾಗ್ದಾನಗಳು (7:22; 8:6); ಮತ್ತು ದೇವದರ್ಶನ ಗುಡಾರ (9:11). ಯೇಸುವು ಉತ್ತಮವಾದದ್ದನ್ನು ತಂದದ್ದರಿಂದಾಗಿ ಮೋಶೆಯ ಧರ್ಮಶಾಸ್ತ್ರವು ಅಂತ್ಯಗೊಂಡಿತು.

ಧರ್ಮಶಾಸ್ತ್ರವು ಬದಲಾಯಿಸಲ್ಪಟ್ಟಿದೆ (7:12).
ಧರ್ಮಶಾಸ್ತ್ರವು ರದ್ದಾಗಿ ಹೋಯಿತು (7:18, 19).
ಧರ್ಮಶಾಸ್ತ್ರದ ಒಡಂಬಡಿಕೆಯು ಹಳೇದಾಗಿ ಮಾಡಲ್ಪಟ್ಟಿದೆ (8:13).
ಯೇಸುವು ಎರಡನೆಯದನ್ನು ಸ್ಥಾಪಿಸುವದಕ್ಕಾಗಿ ಮೊದಲನೆಯದನ್ನು ತೆಗೆದುಬಿಟ್ಟಿದ್ದಾನೆ (10:9).

ಧರ್ಮಶಾಸ್ತ್ರವು ಕೆಡಿಸಲ್ಪಟ್ಟು, ಇಲ್ಲದಂತಾಗ ಮಾಡಲ್ಪಟ್ಟು, ಶಿಲುಬೆಗೆ ಜಡಿಯಲ್ಪಟ್ಟಿರುತ್ತದಾದ್ದರಿಂದ, ನಾವು ಧರ್ಮಶಾಸ್ತ್ರದ ವಿಧಿಗಳನ್ನು ಕೈಕೊಂಡು ನಡೆಯದಿರುವದಾದರೆ ನಮ್ಮನ್ನು ದೋಷಿಯೆಂದು ಎಣಿಸುವ ಹಾಗೆ ಅಥವಾ ತೀರ್ಪು

ಮಾಡುವಂತೆ ಯಾರಿಗೂ ಅವಕಾಶ ಕೊಡಬಾರದು (ಕೊಲೊಸ್ಸೆ 2:14-16). ಈ ವಿಧಿಗಳು ಮುಂದೆ ಯೇಸುವಿನ ಬೋಧನೆಯಲ್ಲಿ ಬರಲಿದ್ದ ವಾಸ್ತವಿಕತೆಗಳ ಛಾಯೆ ಮಾತ್ರವೇ ಆಗಿರುತ್ತವೆ (2:17; ಇಬ್ರಿಯ 10:1).

*ಅಪಹರಿಸಲ್ಪಡುವದರಿಂದ ದೂರವಿರಿ.* ಲೋಕದ ವಿಚಿತ್ರವಾದ ಆಚಾರಗಳು ಕ್ರೈಸ್ತರ ಬೋಧನೆಗಳಿಗೆ ಬಾಧೆ ಉಂಟು ಮಾಡಿರುತ್ತವೆ. ಅವುಗಳು ಜನರನ್ನು ಯೇಸುವಿನ ಸತ್ಯವಾದ ಪ್ರಮಾಣಗಳಿಂದ ವಿಮುಖಗೊಳಿಸುತ್ತವೆ. ಅವುಗಳು ಸಂನ್ಯಾಸಿಗಳಂತೆ ಹೇರಲ್ಪಟ್ಟಿರುವ ಸ್ವನಿರಾಕರಣೆ ಮತ್ತು ಅತಿವಿನಯತೆಗಳನ್ನು ಒಳಗೊಂಡಿರುತ್ತವೆ. ದೇವದೂತರಿಗೆ ನಿಷ್ಫಲವಾದಂಥ ಗೌರವ ಮತ್ತು ಮರ್ಯದೆಯನ್ನು ಸಲ್ಲಿಸಲಾಗುತ್ತಿದೆ. ಜೋಸೇಫ್ ಸ್ಮಿತ್ ತನಗೆ ಮರೋನಿ ಎಂಬ ದೇವದೂತನು ಕಾಣಿಸಿಕೊಂಡನು ಹೇಳಿದ ಹಾಗೆಯೇ, ಅನೇಕರು ದೇವದೂತರು ಕಾಣಿಸಿಕೊಂಡು ಸಂದೇಶವೊಂದನ್ನು ಕೊಟ್ಟಿದ್ದಾರೆಂದು ಕೆಲವರು ವಾದಿಸುತ್ತಾರೆ. ಅಲ್ಲದೆ ಅದರಲ್ಲಿ ಕ್ಯಾಥೋಲಿಕ್ ಚರ್ಚ್ ಮತ್ತು ಇತರರು ತಮಗೆ ಆದವೆಂದು ಹೇಳಿಕೊಳ್ಳುವ ದರ್ಶನಗಳು ಸಹ ಸೇರಿರುತ್ತವೆ.

ಈ ರೀತಿ ಹೇಳಿಕೊಳ್ಳುವಿಕೆಗಳನ್ನು, ವಿಶೇಷವಾಗಿ ಅಂಥವರ ಬೋಧನೆಗಳು ಸ್ಪಷ್ಟವಾಗಿ ಬೈಬಲಿನ ಉಪದೇಶಕ್ಕೆ ವಿರುದ್ಧವಾಗಿರುವಾದ, ನಾವು ಅವುಗಳಿಂದ ಮರಳಾಗಬಾರದು. ಬೇರೊಂದು ಸುವಾರ್ತೆಯನ್ನು ಸಾರುವವರಿಗೆ, ಅವರು ಅಪೊಸ್ತಲರಾಗಿದ್ದರೂ ಸರಿಯೇ, ದೇವದೂತರು, ಅಥವಾ ಬೇರೆ ಯಾರಾಗಿದ್ದರೂ ಸರಿಯೇ, ಅವರಿಗೆ ಪರಲೋಕದಿಂದ ಶಾಪವುಂಟಾಗುವದು (ಗಲಾತ್ಯ 1:8, 9).

*ಶಿರಸ್ಸನ್ನು ಹೊಂದಿಕೊಂಡು ಇರದಿರುವದು.* ಹೊಸ ಒಡಂಬಡಿಕೆಯ ವಿವಿಧ ವಾಕ್ಯಭಾಗಗಳಲ್ಲಿ, ಯೇಸುವು ಶಿರಸ್ಸು ಎಂದು ಘೋಷಿಸಲ್ಪಟ್ಟಿದ್ದಾನೆ: ಆತನು ಪುರುಷನಿಗೆ ತಲೆ ಆಗಿದ್ದಾನೆ (1 ಕೊರಿಂಥ 11:3), ಸಭೆಗೆ ಶಿರಸ್ಸು (ಎಫೆಸ 1:22; 5:23), ದೇಹಕ್ಕೆ ಶಿರಸ್ಸು (ಕೊಲೊಸ್ಸೆ 1:18), ಮತ್ತು ಎಲ್ಲಾ ದೊರೆತನಗಳಗೂ ಅಧಿಕಾರಗಳಿಗೂ ಶಿರಸ್ಸು (ಕೊಲೊಸ್ಸೆ 2:10). ಬೇರೊಂದು ಕಡೆಯಲ್ಲಿ, ಆತನು ಕೇವಲ ಶಿರಸ್ಸು ಎಂದು ಹೇಳಲ್ಪಟ್ಟಿದ್ದಾನೆ (ಎಫೆಸ 4:15; ಕೊಲೊಸ್ಸೆ 2:19).

ಯೇಸು ತನ್ನ ಆತ್ಮೀಕ ದೇಹವಾದ ಸಭೆಗೆ ಶಿರಸ್ಸಾಗಿದ್ದಾನೆ. ನಾವು ಎಲ್ಲಿಯ ವರೆಗೆ ಆತನನ್ನು ಹೊಂದಿಕೊಂಡಿರುತ್ತೇವೋ ಅಲ್ಲಿಯ ವರೆಗೆ ನಾವು ಅಪಹರಿಸಲ್ಪಡುವಿಕೆಯಿಂದ ದೂರವಿರುತ್ತೇವೆ. ನಾವು ಮನುಷ್ಯರ ಬೋಧನೆಗಳನ್ನು ಹಿಡಿದುಕೊಳ್ಳಲು ಆತನ ಸತ್ಯದಿಂದ ದೂರ ಹೋಗುವದಾದರೆ ಅನೇಕ ವಿಚಿತ್ರವಾದ ಬೋಧನೆಗಳಿಗೆ ಮತ್ತು ಆಚಾರಗಳಿಗೆ ನಡಿಸಲ್ಪಡುವೆವು.

ನಾವು ಯೇಸುವನ್ನು ಗಟ್ಟಿಯಾಗಿ ಅಂಟಿಕೊಂಡಿರಬೇಕಾದ ಜವಾಬ್ದಾರಿಯನ್ನು ಹೊಂದಿದ್ದೇವೆ. ಆತನು ನಮ್ಮನ್ನು ಎಂದಿಗೂ ತೊರೆಯುವದೂ ಇಲ್ಲ ಕೈಬಿಡುವದೂ ಇಲ್ಲ, ಆದರೆ ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವ ವರೆಗೂ ಆತನು ನಮ್ಮನ್ನು ಪ್ರೀತಿಸುತ್ತಲೇ ಇರುವನು (ಯೋಹಾನ 15:9, 10). ನಾವು ಎಲ್ಲಿಯ ವರೆಗೆ ಆತನನ್ನು ಹಿಡಿದುಕೊಂಡಿರುತ್ತೇವೋ ಅಲ್ಲಿಯ ವರೆಗೆ ಯೇಸು ನಮ್ಮನ್ನು ಹಿಡಿದುಕೊಂಡಿರುವನು.

ಯೇಸು ಒಳ್ಳೇ ಕುರುಬನು (ಯೋಹಾನ 10:11; 1 ಪೇತ್ರ 5:4). ನಾವು ಆತನ ಕುರಿಗಳಾಗಿರುವದಾದರೆ, ಆತನ ಸ್ವರವನ್ನು ಕೇಳಿ ಆತನನ್ನು

ಹಿಂಬಾಲಿಸುವವರಾಗಿರುತ್ತೇವೆ. ನಾವು ಅಪರಿಚಿತರನ್ನು ಹಿಂಬಾಲಿಸುವದಿಲ್ಲ (ಯೋಹಾನ 10:2-5). ಆತನನ್ನು ಹಿಂಬಾಲಿಸುವ ಮೂಲಕ, ನಾವು ಎಂದಿಗೂ ದಾರಿ ತಪ್ಪಿಸಲ್ಪಡುವದಿಲ್ಲ. ನಮಗೆ ಹಿಂಬಾಲಿಸುವದಕ್ಕೆ ಏಕೈಕ ಕುರುಬನಿರುತ್ತಾನೆ ಮತ್ತು ನಾವು ಸದಸ್ಯರಾಗಿರುವಂಥ ಏಕೈಕ ಮಂದೆಯು ಇರುತ್ತದೆ (ಯೋಹಾನ 10:16).

ಒಂದು ಅರ್ಥದಲ್ಲಿ, ಕುರುಬನು ಕುರಿಗಳ ಶಿರಸ್ಸು. ಆತನು ಅವುಗಳ ಮುಂದೆ ಹೋಗಬೇಕು ಮತ್ತು ಅವುಗಳನ್ನು ನಡಿಸಬೇಕು ಎಂದು ಆತನನ್ನು ಎದುರು ನೋಡುತ್ತವೆ. ಆತನು ಅವುಗಳ ನಾಯಕನು, ಅವರ ಶಿರಸ್ಸು, ಆದ್ದರಿಂದ ಅವುಗಳಿಗೆ ಆತನ ಸ್ವರವು ಗೊತ್ತಿರುವದರಿಂದ ಆತನನ್ನು ಹಿಂಬಾಲಿಸುವವು (ಯೋಹಾನ 10:27).

ನಾವು ಯೇಸುವಿಗೆ ಸಭೆಯ ಶಿರಸ್ಸೆಂದು ಗೌರವ ಕೊಡತಕ್ಕದ್ದು. ಅದಕ್ಕೆ ಭೂಲೋಕದ ಬೇರೆ ಯಾವ ಶಿರಸ್ಸು ಇರುವದಿಲ್ಲ, ಕೇವಲ ಪರಲೋಕದ ಶಿರಸ್ಸು ಮಾತ್ರವೇ ಇರುತ್ತದೆ. ಯಾವ ಗುಂಪಾಗಲಿ ಅಥವಾ ವ್ಯಕ್ತಿಯಾಗಲಿ ಸಭೆಯ ಮೇಲೆ ಶಿರಸ್ಸಾಗಿರುವದಕ್ಕೆ ಅಪೇಕ್ಷಿಸುವದಾದರೆ, ಸಭೆಯ ಕುರುಬನೂ ಶಿಸ್ಸರೂ ಆಗಿರುವ ಯೇಸುವಿಗೆ ಪೈಪೋಟಿಯಾಗಿ ಆ ರೀತಿಯಲ್ಲಿ ಮಾಡುವವರಾಗಿರುತ್ತಾರೆ. ನಮ್ಮ ಆತ್ಮೀಕ ಶಿರಸ್ಸಾಗಿ ಆತನಿಗೆ ನಾವು ಹೊಂದಿಕೊಂಡಿರಬೇಕು ಮತ್ತು ನಾವು ಆತನಿಂದ ಬರದ ಬೇರೆ ಯಾವ ಬೋಧನೆಯೊಳಗೆ ನಡಿಸಲ್ಪಡಕೂಡದು.

*ಲೋಕದ ಕಟ್ಟಳೆಗಳು*. ದೀಕ್ಷಾಸ್ನಾನದಲ್ಲಿ ನಾವು ಪ್ರಪಂಚದ ಕಟ್ಟಳೆಗಳ ಪಾಲಿಗೆ ಸಾಯುವವರಾಗಿರಬೇಕು, ಅವುಗಳು ಯೇಸುವಿನಿಂದ ಮಾಡಲ್ಪಡದಂಥ ನಿರ್ಬಂಧಗಳಾಗಿರುತ್ತವೆ. ಧರ್ಮಗಳು ಎರಡು ಅತಿರೇಕಗಳನ್ನೊಳಗೊಂಡಿರುತ್ತವೆ: ದೇವರಿಂದ ಕೊಡಲ್ಪಡದವುಗಳನ್ನು ಕಟ್ಟಳೆಗಳನ್ನಾಗಿ ಮಾಡುವದು ಮತ್ತು ದೇವರು ಕೊಟ್ಟಿರುವ ಕಟ್ಟಳೆಗಳನ್ನು ತಳ್ಳಿ ಹಾಕುವದು. ಇವೆರೆಡೂ ತಪ್ಪು ಆಗಿರುತ್ತವೆ. 2:16-23ರಲ್ಲಿ ಪೌಲನು ಮನುಷ್ಯ ಕಲ್ಪಿತ ನಿಯಮಗಳ ಬಗ್ಗೆ ಎಚ್ಚರಿಸುತ್ತಾನೆ.

ನಾವು ಯೇಸುವಿನ ಬೋಧನೆಯನ್ನು ಅನುಸರಿಸುವ ಹಂಗಿನಲ್ಲಿದ್ದೇವೆ (ಮತ್ತಾಯ 28:20), ಹೊರತು ಲೋಕದ ನಿಬಂಧನೆಗಳನ್ನಲ್ಲ. ಇವುಗಳು ದೇವರೊಂದಿಗೆ ನಮ್ಮ ಸಂಬಂಧವನ್ನು ವೃದ್ಧಿಪಡಿಸುವದರಲ್ಲಿ ಸಹಾಯ ಮಾಡುವದಕ್ಕೆ ಪ್ರಯೋಜನವುಳ್ಳವುಗಳೆಂದು ಕಾಣಬಹುದು, ಆದರೆ ನಮ್ಮನ್ನು ಆತನಿಗೆ ನಿಕಟವಾಗಿ ತರುವದರಲ್ಲಿ ಅವುಗಳಿಂದ ಯಾವ ಪ್ರಯೋಜನವೂ ಇರುವದಿಲ್ಲ. ಧಾರ್ಮಿಕ ಆಚಾರಗಳು ನಮಗೆ ಹಿಡಿಸುವಂತೆಯೂ ಜ್ಞಾನವೆಂಬಂತೆಯೂ ಕಾಣಿಸುತ್ತವೆಂದ ಮಾತ್ರಕ್ಕೆ ಅವುಗಳು ದೇವರ ಜ್ಞಾನದ ಮೇಲೆ ಆಧಾರವಾದವುಗಳೆಂದು ಅರ್ಥವಾಗುವದಿಲ್ಲ.

*ಸ್ವಕಲ್ಪಿತ ಧರ್ಮ*. ಕೆಲವು ಧರ್ಮಗಳು ಉಪವಾಸದಿಂದ, ಬ್ರಹ್ಮಚರ್ಯ, ವಿವಾಹಿತರು ಲೈಂಗಿಕತೆಯಿಂದ ದೂರವಿರುವಿಕೆ, ದೇಹದಂಡನೆ, ಮತ್ತು ಅತಿವಿನಯದ ಶಾರೀರಿಕ ನಿಗ್ರಹಗಳಿಂದ ನೀತಿಯು ದೊರಕುತ್ತದೆಂದು ಕಲಿಸುತ್ತವೆ. ಸ್ವತಃ ಇವುಗಳಾವವೂ ಭಕ್ತಿಯನ್ನುಂಟು ಮಾಡಲಾರವು.

ನಾವು ಎಲ್ಲಾ ಧರ್ಮಗಳ ಆಚಾರಗಳನ್ನು ಯೇಸುವಿನ ಬೋಧನೆಗಳಿಂದ ತುಲನೆ ಮಾಡಬೇಕು. ಎಲ್ಲಾ ವಿಷಯಗಳಲ್ಲಿಯೂ ನಾವು ಕ್ರಿಸ್ತನನ್ನು ಹಿಡಿದುಕೊಂಡವರಾಗಿರಬೇಕು ಮತ್ತು ಯೆಹೂದಿ ಆಚಾರಗಳು, ಮನುಷ್ಯ ಕಲ್ಪಿತ ಧರ್ಮಗಳು, ಅಥವಾ ಪ್ರಾಪಂಚಿಕ

ತತ್ವಗಳು ಇವುಗಳಿಂದ ದಾರಿ ತಪ್ಪಿಸಲ್ಪಡಕೂಡದು. ಯೇಸು ಮಾತ್ರವೇ ನಮ್ಮ ನಾಯಕನು, ಕುರುಬನು, ಮತ್ತು ಶಿರಸ್ಸು ಆಗಿರತಕ್ಕದ್ದು.

## ಕ್ರಿಸ್ತನು ನಮ್ಮನ್ನು ಧರ್ಮಶಾಸ್ತ್ರದಿಂದ ವಿಮುಕ್ತಗೊಳಿಸಿದ್ದಾನೆ (2:16, 17)

ಕ್ರೈಸ್ತರು ಧರ್ಮಶಾಸ್ತ್ರದ ವಿಧಿಗಳಿಂದ ವಿಮುಕ್ತರಾಗಿರುತ್ತಾರೆ. ಆಹಾರ, ಹಬ್ಬ, ಮತ್ತು ಸಬ್ಬತ್ ಕಟ್ಟಳೆಗಳು ನಮಗೆ ಅನ್ವಯಿಸುವದಿಲ್ಲ. ಧರ್ಮಶಾಸ್ತ್ರದ ವಿಧಿಗಳನ್ನು ನಿರ್ಮೂಲನಗೊಳಿಸಿದ್ದಕ್ಕಾಗಿ ನಾವು ಯೇಸು ಕ್ರಿಸ್ತನಿಗೆ ಕೃತಜ್ಞತೆ ಸಲ್ಲಿಸಬೇಕು (ಎಫೆಸ 2:14, 15).

ಧರ್ಮಶಾಸ್ತ್ರವು ರದ್ದುಗೊಳಿಸಲ್ಪಟ್ಟಿದ್ದರಿಂದ ಕ್ರೈಸ್ತರು ಪಾಪಭರಿತ ಜೀವಿತಗಳಲ್ಲಿ ಮುಂದುವರೆಯುವದಕ್ಕೆ ಮುಕ್ತರು ಎಂದರ್ಥವಾಗುವದಿಲ್ಲ (ರೋಮಾ 6:1-3). ಕೃಪೆಯು ಒಬ್ಬನನ್ನು ಕರ್ತನಾಗಿರುವ ಯೇಸುವಿನಿಂದ ಅಥವಾ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದರಿಂದ ಸ್ವತಂತ್ರಗೊಳಿಸುವದಿಲ್ಲ (ಮತ್ತಾಯ 28:18-20; ಯೋಹಾನ 14:15, 21; 15:10; 1 ಕೊರಿಂಥ 7:19).

ಧರ್ಮಶಾಸ್ತ್ರವು ಯೇಸುವಿನ ಮೂಲಕ ಬಂದ ವಾಸ್ತವಿಕತೆಗಳಿಗೆ ಕೇವಲ ಛಾಯೆಯಾಗಿತ್ತು (ಇಬ್ರಿಯ 10:1). ಕ್ಷಮಾಪಣೆಯು ರಕ್ತ ಸುರಿಸಲ್ಪಡುವಿಕೆ ಮೇಲೆ ಆಧಾರವಾಗಿರುತ್ತದೆಂಬದಾಗಿ ದೇವರು ಮೋಶೆಯ ಧರ್ಮಶಾಸ್ತ್ರದ ಮೂಲಕ ಕಲಿಸಿದನು (ಇಬ್ರಿಯ 9:22). ಹಳೆಯ ಧರ್ಮಶಾಸ್ತ್ರವು ವಾಸ್ತವಿಕತೆಯಾದ ಯೇಸುವು ಬಂದಾಗ, ಆತನ ಅಗತ್ಯತೆಯನ್ನು ಗುರುತಿಸಿಕೊಳ್ಳುವಂತೆ ಮಾನವರನ್ನು ಸಿದ್ಧಗೊಳಿಸಿತ್ತು (ಗಲಾತ್ಯ 3:24, 25).

ಹೇಗೂ, ಮೋಶೆಯ ಧರ್ಮಶಾಸ್ತ್ರವು ಕ್ಷಮಾಪಣೆಯನ್ನು ಒದಗಿಸಲಿಲ್ಲ, ಯಾಕೆಂದರೆ ಪ್ರಾಣಿಗಳ ಯಜ್ಞವು ಪಾಪಗಳನ್ನು ಕ್ಷಮಿಸುವದಕ್ಕೆ ಅಶಕ್ತವಾಗಿತ್ತು (ಇಬ್ರಿಯ 10:4). ಧರ್ಮಶಾಸ್ತ್ರದಿಂದ ನೀತಿವಂತನೆಂದು ನಿರ್ಣಯಿಸಲ್ಪಡಬೇಕೆಂದರೆ ಒಬ್ಬ ವ್ಯಕ್ತಿಯ ಕ್ರಿಯೆಗಳು ಪಾಪರಹಿತವಾಗಿರತಕ್ಕದ್ದು. ಧರ್ಮಶಾಸ್ತ್ರದ ಅಧೀನದಲ್ಲಿರುವವರೆಲ್ಲರೂ ಪಾಪ ಮಾಡಿದರು, ಇದು ಯಾವನೂ ಕ್ರಿಯೆಗಳಿಂದ ರಕ್ಷಿಸಲ್ಪಡಲಾರನೆಂಬುದನ್ನು ತೋರಿಸಿತು (ಗಲಾತ್ಯ 2:16). ಮಾನರಿಗೆ ನಂಬಿಕೆಯ ಮೂಲಕ ರಕ್ಷಣೆಯ ಅಗತ್ಯವಿದೆ ಹೊರತು ಕ್ರಿಯೆಗಳಿಂದಲ್ಲ ಎಂಬುದನ್ನು ದೇವರು ಎಲ್ಲಾ ಸಮಯಗಳಲ್ಲಿಯೂ ನಿರೂಪಿಸಿದನು. ಆತನು ಅಬ್ರಹಾಮನನ್ನು ಆರಿಸಿಕೊಂಡನು – ಕರ್ತನ ಮಾರ್ಗವನ್ನು ಕೈಕೊಂಡು ನಡೆಯುವಂತೆ ತನ್ನ ಮಕ್ಕಳಿಗೆ ಕಲಿಸಿ ಕೊಡುವಂಥ ಒಬ್ಬ ನೀತಿಯುಳ್ಳ ಮನುಷ್ಯನಾಗಿದ್ದನು (ಆದಿಕಾಂಡ 18:19) – ಮತ್ತು ಆತನ ಸಂತತಿಯವರನ್ನು ಅವರ ಸುತ್ತಲಿನ ಕೆಟ್ಟ ಪರಿಸರದಿಂದ ಪ್ರತ್ಯೇಕಗೊಳಿಸಿದನು (ಧರ್ಮೋಪದೇಶಕಾಂಡ 7:3, 4). ಈ ಲಾಭವು ಇದ್ದಾಗ್ಯೂ, ಅವರು ಅನ್ಯಜನರಂತೆಯೇ, ದೇವರ ವಿರುದ್ಧವಾಗಿ ಪಾಪ ಮಾಡಿದರು (ರೋಮಾ 3:9, 10).

ಇಸ್ರಾಯೇಲ್ಯರನ್ನು ಒಂದು ಅನುಕೂಲರವಾದ ಹಿನ್ನಲೆಯಲ್ಲಿ ಧರ್ಮಶಾಸ್ತ್ರಾಧೀನರಾಗಿ ಜೀವಿಸುವಂತೆ ಅನುಮತಿಸುವ ಮೂಲಕ, ಯಾವ ಮನುಷ್ಯನೂ ಪಾಪರಹಿತ ಜೀವನವನ್ನು ನಡಿಸುವದಕ್ಕೆ ಸಾಧ್ಯವಿಲ್ಲವೆಂಬುದನ್ನು ದೇವರು ಸಾಭಿತುಪಡಿಸಿದನು.

## ಕ್ರಿಸ್ತನು ನಮ್ಮ ಬೆಳವಣಿಗೆಯ ಮೂಲನು (2:18, 19)

ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳುವದರಲ್ಲಿ ಪ್ರಾಪಂಚಿಕ ತತ್ವಜ್ಞಾನಗಳು ಯಾವ ಪ್ರಯೋಜನಕ್ಕೂ ಬಾರದವುಗಳಾಗಿವೆ. ಕ್ರೈಸ್ತರು ಸಹಾಯಕ್ಕಾಗಿ ಯೇಸುವನ್ನು ದೃಷ್ಟಿಸತಕ್ಕದ್ದು. ಆತನು ಆತ್ಮೀಕ ವೃದ್ಧಿಗೆ ಮೂಲನಾಗಿದ್ದು ಅದರ ಮೂಲಕ ನಾವು ಲೋಕದ ಶೋಧನೆಗಳ ಪಾಲಿಗೆ ಸಾಯುವದಕ್ಕೆ ಶಕ್ತರಾಗುವೆವು.

ಕ್ರೈಸ್ತನಿಗೆ ಅಗತ್ಯವಾಗುವ ಎಲ್ಲವನ್ನೂ ಕ್ರಿಸ್ತನು ಒದಗಿಸುತ್ತಾನೆ. ಲೋಕದ ತತ್ವಜ್ಞಾನನಿಗಳು ಮತ್ತು ಪ್ರಸಿದ್ಧ ಬೋಧಕರು ಯೇಸುವಿನ ಬೋಧನೆಗಳಿಗೆ ಹೆಚ್ಚಿನದೇನನ್ನೂ ಕೂಡಿಸಲಾರರು. John Greenleaf Whittier ಹೀಗೆ ಬರೆದನು,

> ನಾವು ಸತ್ಯಕ್ಕಾಗಿ ಲೋಕವನ್ನು ಹುಡುಕುತ್ತೇವೆ;
> ಒಳ್ಳೇದು, ನಿರ್ಮಲ, ಸುಂದರ,
> ಕೆತ್ತಿದ ಕಲ್ಲಿನಿಂದ ಹಿಡಿದು, ಬರೆದ ಸುರುಳಿಯಿಂದ ಹೆಕ್ಕುತ್ತೇವೆ,
> ಆತ್ಮದ ಎಲ್ಲಾ ಹೊಲಗಳ ಹಳೇ ಹೂಗಳಿಂದ;
> ಮತ್ತು, ಅತ್ಯುತ್ತಮವಾದದ್ದನ್ನು ಹುಡುಕಿ ಬಳಲಿದವರಾಗಿ,
> ನಾವು ನಮ್ಮ ಅನ್ವೇಷಣೆಯಿಂದ ಭಾರ ಹೊತ್ತವರಾಗಿ ಬಂದರೆ,
> ಋಷಿಗಳು ಹೇಳಿದ್ದೆಲ್ಲವೂ ನಮ್ಮ ತಾಯಿ ಓದಿದ ಪುಸ್ತಕದಲ್ಲಿಯೇ ಇರುತ್ತದೆಂದು ತಿಳಿಯುತ್ತೇವೆ.[22]

ಪ್ರತಿ ಸದಸ್ಯನು ಸಭೆಯ ಬೆಳವಣಿಗೆಗೆ ತನ್ನ ಕೊಡುಗೆಯನ್ನು ನೀಡತಕ್ಕದ್ದು. ಕ್ರೈಸ್ತರು ಹೊಂದಿರುವಂಥ ಎರಡು ರೀತಿಯಾಗಿರುವ ಸಂಬಂಧವು – ಕ್ರಿಸ್ತನ ಸಂಗಡದ ಸಂಬಂಧ ಮತ್ತು ಪರಸ್ಪರರೊಂದಿಗೆ ಹೊಂದಿರುವ ಸಂಬಂಧ – ಆತ್ಮೀಕ ಬೆಳವಣಿಗೆಗೆ ಅಗತ್ಯವಾದ ಪೋಷಣೆಯನ್ನು ಒದಗಿಸುತ್ತದೆ. Missouriಯಲ್ಲಿ Eleven Point ನದಿಯು ಏಳು ಬುಗ್ಗೆಗಳಿಂದ ನೀರು ತುಂಬಿಸಿಕೊಳ್ಳುತ್ತದೆ, ಏಳು ಜಲಮೂಲಗಳು ಸೇರಿ ಒಂದು ನದಿಯಾಗಿರುತ್ತದೆ. ಕ್ರೈಸ್ತರ ವಿಷಯದಲ್ಲಿ ಅದಕ್ಕೆ ತದ್ವಿರುದ್ಧವಾದದ್ದು ಸತ್ಯವಾಗಿದೆ: ಒಂದೇ ಮೂಲದಿಂದ ಅನೇಕ ಕ್ರೈಸ್ತರಿಗೆ ಬಲವು ಹರಿದು ಬರುತ್ತದೆ. ನಾವು ಮೂಲವಾಗಿರುವ, ಯೇಸುವಿನಿಂದ ಪಡೆಯುತ್ತೇವೆ, ಮತ್ತು ಒಬ್ಬರಿಗೊಬ್ಬರು ಪೋಷಣೆಯನ್ನು ಒದಗಿಸುತ್ತೇವೆ.

ಕ್ರೈಸ್ತ ಬೆಳವಣಿಗೆಗೆ ಏಕೈಕ ಸತ್ಯವಾದ ಮೂಲವು ಯೇಸುವೇ. ಆತನು ಎಂದಿಗೂ ಮುಗಿದ ಹೋಗದಂಥ ಆತ್ಮೀಕ ಬಲದ ಪೂರೈಕೆಯಾಗಿದ್ದಾನೆ. ಆತನು ಸಾಕಾದವನು, ಎಂದಿಗೂ ಆಶಾಭಂಗಗೊಳಿಸುವವನಲ್ಲ, ಮತ್ತು ಯಾವಾಗಲೂ ಲಭ್ಯನಿರುತ್ತಾನೆ. ಆತನನ್ನು ದೃಷ್ಟಿಸುವ ಮೂಲಕ, ಕ್ರೈಸ್ತರು ತಮ್ಮ ಬೆಳವಣಿಗೆಗೆ ಭರವಸೆಯನ್ನು ಪಡೆಯಬಲ್ಲರು ಮತ್ತು ಕ್ರಿಸ್ತನಿಗಾಗಿ ಬೆಳೆಯುವಂತೆ ಬೇರೆಯವರಿಗೆ ಸಹಾಯ ಮಾಡಬಲ್ಲರು.

## ಕ್ರಿಸ್ತನು ನಮ್ಮನ್ನು ಮನುಷ್ಯ ನಿಯಮಗಳಿಂದ ವಿಮುಕ್ತಗೊಳಿಸುತ್ತಾನೆ (2:20-22)

ಕ್ರೈಸ್ತರು ಮನುಷ್ಯರ ಆಜ್ಞೆಗಳು ಹಾಗೂ ಬೋಧನೆಗಳ ಪಾಲಿಗೆ ಸತ್ತವರಾಗಿದ್ದಾರೆ. ಸ್ವಭಾವಿಕವಾಗಿ ಬೇರೆಯವರು ಜೀವಿಸುವ ರೀತಿಯಲ್ಲಿ ಜೀವಿಸಬೇಕೆಂಬ, ಅವರು ಮಾಡುವದನ್ನೇ ಮಾಡಬೇಕೆಂಬ, ಮತ್ತು ನಮ್ಮ ಸುತ್ತಲಿನರ ಜೀವಿತಗಳಲ್ಲಿ ಆಳಿಕೆ ಮಾಡುವ ತತ್ವಗಳನ್ನು ಅನುಸರಿಸಬೇಕೆಂಬ ಒಲವು ಇರುತ್ತದೆ. ಇದು ಜೀವಿತವನ್ನು

"ಗುಂಪು ಅನುಕರಣೆ" ಮಾಡಿ ಜೀವಿಸುವ ರೀತಿಯಾಗಿರುತ್ತದೆ. ಬಹುಪಾಲು ಜನರ ಯೋಚನೆ ಏನೆಂಬುದನ್ನು ಸಮೀಕ್ಷೆಗಳು ತಿಳಿಯಪಡಿಸುತ್ತವೆ. ರಾಜಕೀಯದಲ್ಲಿ ಮತ್ತು ಜೀವನದ ಕೆಲವೊಂದು ಕ್ಷೇತ್ರಗಳಲ್ಲಿ ಬಹುಜನರ ಅಭಿಪ್ರಾಯವನ್ನು ಅಂಗೀಕರಿಸಬಹುದು, ಆದರೆ ಯಾವುದ ನೈತಿಕವಾಗಿ ಮತ್ತು ಆತ್ಮೀಕವಾಗಿ ಸರಿ ಎಂಬುದನ್ನು ಸಾರ್ವಜನಿಕ ಅಭಿಪ್ರಾಯವು ನಿರ್ಧರಿಸುವದಕ್ಕೆ ಸಾಧ್ಯವಿಲ್ಲ. ಕ್ರಿಸ್ತನಿಗಾಗಿ ಹೇಗೆ ಜೀವಿಸಬೇಕೆಂದು ನಮಗೆ ಹೇಳುವದಕ್ಕೆ ಬೈಬಲ್‌ಗೆ ಮಾತ್ರವೇ ಅಧಿಕಾರವಿರುತ್ತದೆ.

ಸ್ವಂತವಾಗಿ ವಿಧಿಸಿಕೊಳ್ಳಲ್ಪಟ್ಟಿರುವ ನಿಯಮಗಳು ಮೂರ್ಖತನವಾಗಿವೆ ಯಾಕೆಂದರೆ ಅವುಗಳು ಇಂದ್ರೀಯ ಇಚ್ಛೆಗಳನ್ನು ನಿಗ್ರಹಿಸಿಲಾರವು. ಅವುಗಳು ನಾಶವಾಗತಕ್ಕ ಸಂಗತಿಗಳ ಬಳಕೆಯನ್ನು ನಿಗ್ರಹಿಸುವದಕ್ಕೆ ರಚಿಸಲ್ಪಟ್ಟವುಗಳಾಗಿವೆ; ಆತ್ಮೀಕ ಬೆಳವಣಿಗೆಗೆ ಸಹಾಯ ಮಾಡುವದರಲ್ಲಿ ಅವುಗಳು ಯಾವ ಪ್ರಯೋಜನಕ್ಕೂ ಬರುವದಿಲ್ಲ. ಅದಕ್ಕೆ ದೇಹಸಾಧನೆಯು ಒಂದು ಉದಾಹರಣೆಯಾಗಿರುತ್ತದೆ. ಗರಿಷ್ಠ ಮಾಂಸಖಂಡಗಳ ದಾರ್ಢ್ಯತೆಯನ್ನು ಬೆಳೆಸಿಕೊಳ್ಳಲು ಕಠಿಣವಾದ ನಿಯಮಗಳನ್ನು ಪಾಲಿಸಬೇಕಾಗುತ್ತದೆ, ಆದರೆ ಅತ್ಯಂಥ ಆಕರ್ಷಕವಾದ ಮೈಕಟ್ಟು ಸಹ ಒಂದು ದಿನ ಸಮಾಧಿಯೊಳಗೆ ನಾಶಗೊಳ್ಳಲಿದೆ. ದೇಹಸಾಧನೆಯು ಅವಶ್ಯಕವಾಗಿ ಆತ್ಮೀಕ ಬಲವನ್ನು ಕೊಡುವದಿಲ್ಲ. ಈ ಸತ್ಯಕ್ಕೆ ಸಂಸೋನನು ಒಂದು ದೃಷ್ಟಾಂತವಾಗಿರುತ್ತಾನೆ. ದೇವರಿಂದ ಅನುಗ್ರಹಿಸಲ್ಪಟ್ಟ ಆತನ ಮಹಾಶಕ್ತಿಯು ನೈತಿಕ ದುರ್ಬಲತೆಗೊಳಗಾದಂತೆ ಆತನನ್ನು ತಡೆಯುವದಕ್ಕಾಗಲಿಲ್ಲ (ನೋಡಿರಿ ನ್ಯಾಯಸ್ಥಾಪಕ 14-16). "ದೇಹಸಾಧನೆಯು ಸ್ವಲ್ಪಮಟ್ಟಿಗೆ ಪ್ರಯೋಜನವಾಗಿದೆ, ಭಕ್ತಿಯಾದರೋ ಎಲ್ಲಾ ವಿಧದಲ್ಲಿ ಪ್ರಯೋಜನವಾದದ್ದು; ಅದಕ್ಕೆ ಇಹಪರಗಳಲ್ಲಿಯೂ ಜೀವವಾಗ್ದಾನ ಉಂಟು" (1 ತಿಮೊಥೆ 4:8).

ಸ್ವಕಲ್ಪಿತಾಚಾರದ ಮಾನವ ರೀತಿಯು ತೋರಿಕೆಯಲ್ಲಿ ಮಾತ್ರವೇ ಜ್ಞಾನ ಎಂಬಂತಿರುತ್ತದೆ. ಮಾನವನಿಂದ ಬಂದ ಆಚಾರಗಳನ್ನು ಅನುಸರಿಸುವ ವಿಷಯಷದಲ್ಲಿ ಉತ್ತಮವಾದ ವಾದಗಳನ್ನು ಮಾಡಬಹುದು. ದೇವರ ದಾರಿಯು ಮಾನವ ದೃಷ್ಟಿಯಿಂದ ಸಹಜವಾದದ್ದಾಗಿ ಕಾಣಿಸಬಹುದು. ನಾಮಾನನು ಪ್ರವಾದಿಯಾದ ಎಲೀಯನ ಮಾತುಗಳಿಗೆ ಸಹಮತ ವ್ಯಕ್ತಪಡಿಸಲಿಲ್ಲ (2 ಅರಸು 5:1-14). ಆತನು ಮುಂದಾಗಿಯೇ ಪ್ರವಾದಿಯು ಯಾವ ಕಾರ್ಯಗಳನ್ನು ಮಾಡಬೇಕೆಂದು ತಾನೇ ನಿರ್ಧರಿಸಿಕೊಂಡಿದ್ದನು. ಮಾನವ ತರ್ಕದಿಂದ ನೋಡಿದರೆ, ಯೋರ್ದಾನ್ ನದಿಯಲ್ಲಿ ಸ್ನಾನ ಮಾಡುವದರಿಂದ ಕುಷ್ಠವು ಗುಣವಾಗುವದಿಲ್ಲ – ಆದರೆ ದೇವರ ಮಾರ್ಗಗಳು ಮನುಷ್ಯನ ಮಾರ್ಗಗಳಂತಲ್ಲ (ನೋಡಿರಿ ಯೆಶಾಯ 55:8, 9).

ನಾವು ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಳ್ಳುವ ಮೂಲಕ ನಮ್ಮ ದೇಹಗಳನ್ನು ದೇವರಿಗೆ ಯಜ್ಞವಾಗಿ ಅರ್ಪಿಸಿ ಸೇವೆ ಮಾಡುವವರಾಗಿರಬೇಕು (ರೋಮಾ 12:1, 2). ನಾವು ಆತ್ಮದಲ್ಲಿಯೂ ಸತ್ಯದಲ್ಲಿಯೂ (ಯೋಹಾನ 4:24) ಆತನೊಬ್ಬನಿಗೆ ಮಾತ್ರವೇ ಸೇವೆಯನ್ನು ಮತ್ತು ಆರಾಧನೆಯನ್ನು ಮಾಡಬೇಕು (ಮತ್ತಾಯ 4:10). ಸಕಲ ಸತ್ಯವು ಪ್ರಕಟಗೊಳಿಸಲ್ಪಟ್ಟಿದೆ (ಯೋಹಾನ 16:13); ಮಾನವ ಗರ್ವವು ಬರೆಯಲ್ಪಟ್ಟಿರುವದನ್ನು ಮೀರಿ ಹೋಗುವಂತೆಯೂ ಮನುಷ್ಯರ ಪ್ರಯೋಜನವಿಲ್ಲದ ಸಂಪ್ರದಾಯಗಳನ್ನು ಹಾಗೂ ಆಜ್ಞೆಗಳನ್ನು ಅಂಗೀಕರಿಸುವಂತೆ ನಮಗೆ

ಕಾರಣವಾಗಬಾರದು (ಮತ್ತಾಯ 15:7-9; ಮಾರ್ಕ 7:6-13; ತೀತನಿಗೆ 1:14). ಕ್ರೈಸ್ತರು ಎಲ್ಲವನ್ನೂ ಯೇಸುವಿನ ನಾಮದಲ್ಲಿ (ಅಧಿಕಾರದಿಂದ) ಮಾಡತಕ್ಕದ್ದು (ಕೊಲೊಸ್ಸೆ 3:17).

---

## ಅಡಿಟಿಪ್ಪಣಿಗಳು

[1]Peter T. O'Brien, *Colossians*, *Philemon*, Word Biblical Commentary, vol. 44 (Waco, Tex.: Word Books, 1982), 141. [2]Eduard Schweizerನು ಮುನ್‌ಛಾಯೆಯಾಗಿದ್ದ ವಾಸ್ತವಿಕತೆಯು ಯೇಸುವಿನಿಂದ ಪರಿಚಯಿಸಲ್ಪಟ್ಟ ಬೋಧನೆ ಎಂಬುದನ್ನು ಕಡೆಗಣಿಸುತ್ತಾನೆ. ಆತನು ಹೀಗೆ ಬರೆದನು, "ಒಟ್ಟಾರೆಯಾಗಿ ಖಚಿತವಾಗಿರುವದಿರುವ ಒಂದು ಸಂಗತಿಯೆಂದರೆ ಛಾಯೆ ಎಂಬುದರ ಹಿನ್ನಲೆಯಲ್ಲಿರುವದು ಕ್ರಿಸ್ತನೋ ಅಥವಾ ಸಭೆಯೋ ಎಂಬುದೆ" (Eduard Schweizer, *The Letter to the Colossians: A Commentary*, trans. Andrew Chester [Zürich: Benziger Verlag, 1976; reprint, Minneapolis: Augsburg Publishing House, 1982], 158). ಅಷ್ಟು ಮಾತ್ರವಲ್ಲದೆ, Bauer ಅಭಿಪ್ರಾಯ ಪಟ್ಟದ್ದೇನೆಂದರೆ ಈ ವಾಕ್ಯಭಾಗದಲ್ಲಿರುವ ಅರ್ಥವು " . . . ಕೊಲೊಸ್ಸೆ 2:17ದ ಎದುರಾಗಿ ನೆರಳನ್ನು ಬೀಳಿಸುವ ದೇಹದ ಪ್ರತಿಕೃತಿಯಲ್ಲಿರುವ ಸ್ವರೂಪದ ವಾಸ್ತವಿಕತೆ, ಸ್ವತಃ ಸಂಗತಿಯೇ, ವಾಸ್ತವಿಕತೆ" ಎಂದಾಗಿರುತ್ತದೆ. (Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker [Chicago: University of Chicago Press, 2000], 984.) [3]Ibid., 448. [4]ನೋಡಿರಿ ಮತ್ತಾಯ 8:2; 9:18; 14:33; 15:25; 20:20; 28:9, 17; ಮಾರ್ಕ 5:6; ಲೂಕ 24:52. [5]Irenaeus *Against Heresies* 2.32.5. [6]E. K. Simpson and F. F. Bruce, *Commentary on the Epistles to the Ephesians and the Colossians*, The New International Commentary on the New Testament (Grand Rapids, Mich.: Wm. B. Eerdmans Publishing Co., 1957), 248. [7]Bauer, 459. [8]"ನೋಡದ" ಎಂಬುದು ಹಳೇ ಹಸ್ತಪ್ರತಿಗಳಲ್ಲಿ ಕಂಡು ಬರುವದಿಲ್ಲ. [9]Bauer, 321. [10]O'Brien, 144.

[11]ಪುನರುತ್ಥಾನವಾದ ತಕ್ಷಣದ ಕಾಲದಲ್ಲಿ ಯೇಸುವು ಕಾಣಿಸಿಕೊಳ್ಳುವಿಕೆಗಳೊಳಗೆ ಪೌಲನಿಗೆ ಕಾಣಿಸಿಕೊಂಡಿದ್ದು "ಕಟ್ಟಕಡೆಯ"ದ್ದಾಗಿತ್ತು. ಹೇಗೂ, ಬೇರೊಂದು ಸನ್ನಿವೇಶದಲ್ಲಿ ಯೇಸು ಪ್ರಕಟನೆ ಪುಸ್ತಕದಲ್ಲಿ ಯೋಹಾನನಿಗೆ ಕಾಣಿಸಿಕೊಂಡನು. [12]Schweizer, 162. [13]Ibid., 164. [14]Robert G. Bratcher and Eugene A. Nida, *A Translators Handbook on Paul's Letters to the Colossians and to Philemon,* Helps for Translators (New York: United Bible Societies, 1977), 70. [15]H. C. G. Moule, *The Epistles to the Colossians and to Philemon,* The Cambridge Bible for Schools and Colleges (Cambridge: University Press, 1893; reprint, 1902), 114–15. [16]Ibid., 115. [17]O'Brien, 150. [18]Moule, 115. [19]Schweizer, 159. [20]O'Brien, 153. [21]Ibid., 155. [22]John Greenleaf Whittier, "From Graven Stone and Written Scroll," quoted in H. I. Hester, *The Heart of Hebrew History: A Study of the Old Testament* (Liberty, Mo.: William Jewell Press, 1951), 11.